ರಂಜನೆ ಬೋಧನೆ ಪ್ರಚೋದನೆ


ಲಂಕೇಶ್

09 ಏಪ್ರಿಲ್, 2014 ಪುಟ 20 ರೂ. 15/-

ಸಂಸ್ಕೃತ ವಿವಿಗೆ



ಪೇಜಾವರರ ಪೌರೋಹಿತ್ಯ



ಕದ್ದು ಮಿಲನ ಒದ್ದು ವಿಚ್ಛೇದನ

ರಾಯಚೂರು: ಕೂಲಿಗಳ ಕಾಲು ನುಂಗಿದ ಶಿವನಗೌಡ

ತುಮಕೂರು: ಕೃಷ್ಣಪ್ಪ ಬೆನ್ನಿಗೆ ಹಿಂದುಳಿದ ವರ್ಗ

ಉಡುಪಿ-ಚಿಕ್ಕಮಗಳೂರು: ಶೋಭಕ್ಕನ ಝುಣಝುಣ

ಗುಲ್ಬರ್ಗಾ: ವಿರೋಧಿಗಳಿಗೆ ಖರ್ಗೆ ಬ್ರೇಕ್

ದಾವಣಗೆರೆ: ಸಿದ್ದೇಶ್ವರಗೆ ಚೆಡ್ಡಿಗಳೇ ಅಡ್ಡಗಾಲು

ಹಾವೇರಿ: ಹಾನಗಲ್‌ನತ್ತ ಮರಿ ಉದಾಸಿ

ಮಂಡ್ಯ : ಬಿಜೆಪಿ ಸೋಲು ಗ್ಯಾರಂಟಿ

ಉತ್ತರಕನ್ನಡ: ಅನಂತ್ಕ್ಮಾಣಿಗೆ ಕಾದಿದೆ ಸೋಲು

ಬೀದರ್: ಧರ್ಮಸಿಂಗ್ ತಂತ್ರ ಶುರು

ಅಂಚಿನಿಂದ....



ಡಾ.ವಾಸು ಎಚ್.ವಿ.

ಚುನಾವಣೆ: ಯಾರ ನೀತಿ? ಯಾರಿಗೆ ಸಂಹಿತೆ?

ಬದುಕುವ ಹಕ್ಕಿನ ಬಗೆಗಿನ ಸರಳವಾದ ಈ ಕಥೆ ಹಲವು ಸಂಕೀರ್ಣವಾದ ಪ್ರಶ್ನೆಗಳನ್ನೆತ್ತುತ್ತದೆ: 'ತೋಳವೊಂದು ತಾಯಿ ಮೇಕೆಯನ್ನು ಬೇಟೆಯಾಡಿ ಹೊಟ್ಟೆತುಂಬಿಸಿಕೊಂಡ ನಂತರ, ಜೊತೆಯಲ್ಲಿದ್ದ ಎಳೆಯ ಮೇಕೆಮರಿಯನ್ನು ಕೊಲ್ಲಲು ಪ್ರಯತ್ನಿಸುತ್ತದೆ. ಮೇಕೆಮರಿ ಪ್ರತಿಭಟಿಸುತ್ತದೆ- "ನೀನು ನನ್ನ ಬದುಕುವ ಹಕ್ಕನ್ನು ಕಸಿದುಕೊಳ್ಳುತ್ತಿದ್ದೀಯ". ಆ ತೋಳ "ಸಂತೋಷವಾಗಿ ಬೇಟೆಯಾಡುವ ನನ್ನ ಹಕ್ಕನ್ನು ನೀನು ಕಸಿದುಕೊಳ್ಳುತ್ತಿದ್ದೀಯ" ಎನ್ನುತ್ತಾ ಹಾರಿ ಆ ಮರಿಯನ್ನು ಕೊಲ್ಲುತ್ತದೆ'! ಜನಸಾಮಾನ್ಯರ ಹಿತರಕ್ಷಣೆಗಾಗಿ ರೂಪಿಸಲಾದ ಕೆಲವು ಹಕ್ಕುಗಳು ಹೀಗೆ ಜನರನ್ನೇ ಹತ್ತಿಕ್ಕುವ ಅಸ್ತ್ರಗಳಾಗಿ ಪ್ರಭುತ್ವದ ಕೈಯಲ್ಲಿ ಬಳಕೆಯಾಗುತ್ತಿವೆ. ತಕ್ಷಣದ ಉದಾಹರಣೆ ಕೊಡುತ್ತೇನೆ; ಕರ್ನಾಟಕದ ಅಧಿಕಾರಿಗಳ ನಿರಂಕುಶ ಆಳ್ವಿಕೆಯಲ್ಲಿ ಚುನಾವಣಾ ನೀತಿಸಂಹಿತೆಯೆಂಬುದು ಸಾರ್ವಜನಿಕರ ಪ್ರಜಾತಾಂತ್ರಿಕ ಹಕ್ಕುಗಳನ್ನು ಬುಡಸಮೇತ ಕಿತ್ತೆಸೆಯುವ ವಜ್ರಾಯುಧವಾಗಿದೆ! ಸಂವಿಧಾನದತ್ತವಾದ ಎಲ್ಲಾ ಅವಕಾಶಗಳೂ ಅಮಾನತ್ತುಗೊಂಡಿವೆ!!

ಮಂಡ್ಯ ಜಿಲ್ಲೆಯ ಎರಡು ಘಟನೆಗಳು ಹೀಗಿವೆ; ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ನುಗ್ಗಳ್ಳಿ ಗ್ರಾಮದ 8 ವರ್ಷದ ಹೆಣ್ಣುಮಗು ರಕ್ಷಿತಾಳನ್ನು ಅದೇ ಗ್ರಾಮದ ಯುವಕನೊಬ್ಬ ಅಮಾನುಷವಾಗಿ ಅತ್ಯಾಚಾರ ಮಾಡಿ ಸಾಯಿಸಿದ; ಕಬ್ಬಿನ ಗದ್ದೆಯಲ್ಲಿ ಮಗುವಿನ ಹೆಣ ಹೂತು ಹಳ್ಳಿಯಲ್ಲೇ ಆರಾಮಾಗಿ ತಿರುಗಾಡಿಕೊಂಡಿದ್ದ; ಸಣ್ಣದೊಂದು ಸುಳಿವಿನ ಮೇಲೆ ಕೊನೆಗೆ ಸಿಕ್ಕಿಬಿದ್ದು ಬಂಧನಕ್ಕೊಳಗಾದ. ಇಂತಹ ಎಳೆಯ ಹೆಣ್ಣುಮಕ್ಕಳ ಮೇಲೆ ಅತ್ಯಾಚಾರ, ಕೊಲೆ ಮತ್ತು ಲೈಂಗಿಕ ದೌರ್ಜನ್ಯದ 4 ಘಟನೆಗಳು ಮಾರ್ಚ್ 7ರಿಂದ 14ರವರೆಗಿನ ಒಂದು ವಾರದ ಅವಧಿಯಲ್ಲಿ ಈ ಜಿಲ್ಲೆಯೊಂದರಲ್ಲೇ ವರದಿಯಾಗಿವೆ. ಅದರ ನಂತರದ ವಾರವೂ 3 ಘಟನೆಗಳು ಬೆಳಕಿಗೆ ಬಂದಿವೆ; ಅಪಾಯಕಾರಿಯಾಗಿ ಏರುತ್ತಿರುವ ಈ ಘಟನೆಗಳನ್ನು ಖಂಡಿಸಿ ಬೀದಿಗಿಳಿಯದಿದ್ದರೆ ಯಾವುದೇ ಒಂದು ನಾಗರಿಕ ಸಮಾಜ ಜೀವಂತವಾಗಿದೆ ಎಂದು ಭಾವಿಸುವುದಾದರೂ ಹೇಗೆ? ಪರಿಸ್ಥಿತಿ ಹೀಗಿರುವಾಗ ಮಂಡ್ಯದ ಪ್ರಜ್ಞಾವಂತರು ಮತ್ತು ಸ್ವತಂತ್ರ ಮಹಿಳಾ ಸಂಘಟನೆಗಳು ಅಪ್ರಾಪ್ತ ಹೆಣ್ಣುಮಕ್ಕಳ ದಯನೀಯ ಪರಿಸ್ಥಿತಿಯ ವಿರುದ್ಧ ಸಹಜವಾಗಿಯೇ ಆಂದೋಲನ ರೂಪಿಸುವ ಉದ್ದೇಶದಿಂದ, ಪ್ರತಿಭಟನೆಗೆ ಪೊಲೀಸರ ಅನುಮತಿ ಕೋರಿದರು. ಆದರೆ, ಆಘಾತಕರವಾಗಿ ಅತ್ಯಂತ ನ್ಯಾಯಯುತವಾದ ಈ ಹೋರಾಟಕ್ಕೆ ನೀತಿಸಂಹಿತೆಯ ಕಾರಣ ನೀಡಿ ಮಂಡ್ಯ ಜಿಲ್ಲಾಡಳಿತ ಅನುಮತಿ ನಿರಾಕರಿಸಿತು!

ಮಾರ್ಚ್ 23 ಭಾರತದ ಅಪ್ರತಿಮ ಕ್ರಾಂತಿಕಾರಿ ಹುತಾತ್ಮ ಭಗತ್‌ಸಿಂಗ್ ಹಾಗೂ ಅವರ ಸಂಗಾತಿಗಳನ್ನು ಬ್ರಿಟಿಷ್ ಆಡಳಿತ ಗಲ್ಲಿಗೇರಿಸಿದ ದಿನ. ವಿದ್ಯಾರ್ಥಿಗಳು ಮತ್ತು ಯುವಕರು ಸೇರಿ ಜಾಗೃತಿ ಜಾಥಾ ನಡೆಸಲು ಯೋಜನೆ ರೂಪಿಸಿದರು. ಮಂಡ್ಯ ಜಿಲ್ಲಾಡಳಿತ ಮತ್ತೆ ತಡೆಯೊಡ್ಡಿತು. ಕೊನೆಗೆ ತಮ್ಮ ಉದ್ದೇಶವನ್ನು ಮನವರಿಕೆ ಮಾಡಲು ಪ್ರಯತ್ನಿಸಿದ ವಿದ್ಯಾರ್ಥಿಗಳು ಮೌಖಿಕ ಒಪ್ಪಿಗೆ ಪಡೆದು ಜಾಥಾ ಆರಂಭಿಸಿದರು. ಆದರೆ ಅವರಿಗೆ ಬ್ರಿಟಿಷ್ ಸರ್ಕಾರಕ್ಕಿಂತಲೂ ಕಟುವಾಗಿ ತಮ್ಮದೇ ಪೊಲೀಸರಿಂದ ಆತಿಥ್ಯ ದೊರೆಯಬಹುದೆಂಬ ಅಂದಾಜಿರಲಿಲ್ಲ! ಯುವ ಜನರು ಸಮಾಜದ ಸಮಸ್ಯೆಗಳಿಗೆ ಸ್ಪಂದಿಸುವುದೇ ಇಲ್ಲ ಎಂಬ ಆರೋಪಗಳ ನಡುವೆ, ಅತ್ಯಂತ ಸ್ಫೂರ್ತಿಯಿಂದ, ಸಾಮಾಜಿಕ ಕಳಕಳಿಯಿಂದ ಜಾಥಾ ನಡೆಸಲು ಮುಂದಾದ ಸುಮಾರು 50 ಜನರ ಯುವತಂಡ ಪೊಲೀಸ್ ಲಾಕಪ್‌ನಲ್ಲಿ ಬಂಧಿಯಾಗಬೇಕಾಯಿತು!! ಪೊಲೀಸರು ದೇಶದ್ರೋಹಿಗಳೇನೋ ಎಂಬಂತೆ ಈ ಯುವಕರನ್ನು ನಡೆಸಿಕೊಂಡರು.

ಇದೇ ಸಮಯದಲ್ಲಿ ಅಭ್ಯರ್ಥಿಗಳು ಚುನಾವಣೆಗೆ ನಾಮಪತ್ರ ಸಲ್ಲಿಸುವ ಅವಧಿ ಆರಂಭವಾಯಿತು. ಜೆಡಿಎಸ್ ಅಭ್ಯರ್ಥಿ ಸಾವಿರಾರು ಬೆಂಬಲಿಗರೊಂದಿಗೆ ಸುದೀರ್ಘ ಮೆರವಣಿಗೆ ನಡೆಸಿ, ಡೋಲು, ತಮಟೆಗಳ ನಾದದೊಂದಿಗೆ ವಿಜೃಂಭಣೆಯಿಂದ ನಾಮಪತ್ರ ಸಲ್ಲಿಸಲು ಬಂದರು. ಅವರ ನೇರ ಎದುರಾಳಿಯಾದ ಬಿಜೆಪಿ ಅಭ್ಯರ್ಥಿ ಜಿದ್ದಿಗೆ ಬಿದ್ದವರಂತೆ ಸಾವಿರಾರು ಜನರೊಂದಿಗೆ ಜನಪದ ನೃತ್ಯ ತಂಡಗಳೊಂದಿಗೆ ವೈಭವೋಪೇತ ಮೆರವಣಿಗೆಯಲ್ಲಿ ನಾಮಪತ್ರ ಸಲ್ಲಿಸಿದರು. ಅಲ್ಲಿ ನೀತಿ ಸಂಹಿತೆಯ ಅಡ್ಡಿಯೂ ಇರಲಿಲ್ಲ; ಪೊಲೀಸರ ಮತ್ತು ಅಧಿಕಾರಿಗಳ ಆತಂಕವೂ ಇರಲಿಲ್ಲ; ಆದರೆ, ನಮ್ಮ ದೇಶದಲ್ಲಿ ನಾಗರಿಕ ಹಕ್ಕುಗಳಿಗೆ ಉಂಟಾಗಿರುವ ದುಃಸ್ಥಿತಿಗೆ ಜೀವಂತಸಾಕ್ಷಿಯಿತ್ತು!!

ಭಾರತದಲ್ಲಿ ಸಂವಿಧಾನದ ಆಶಯಗಳು ಇಂದು ತಲೆಕೆಳಗಾಗಿ ನಿಂತಿವೆ. ಚುನಾವಣಾ ಮಾದರಿ ನೀತಿಸಂಹಿತೆ ರೂಪಿತವಾಗಿರುವುದೇ ಇಡಿಯಾಗಿ ರಾಜಕೀಯ ಪಕ್ಷಗಳಿಗಾಗಿ. ಒಂದು ಕಿರುಪುಸ್ತಕದಷ್ಟಿರುವ ನೀತಿಸಂಹಿತೆಯ ಯಾವ ಪುಟಗಳಲ್ಲೂ ನಾಗರಿಕರಿಗೆ ಯಾವುದೇ ರೀತಿಯ ನಿರ್ಬಂಧಗಳಿಲ್ಲ; ನಿರ್ಬಂಧಗಳಿರುವುದೆಲ್ಲ ರಾಜಕೀಯ ಪಕ್ಷಗಳಿಗೆ ಮತ್ತು ಚುನಾವಣಾ ಅಭ್ಯರ್ಥಿಗಳಿಗೆ ಮಾತ್ರ. ಹಾಗಿದ್ದೂ ರಾಜಕಾರಣಿಗಳ ಆಡಂಬರಕ್ಕೆ ಅಧಿಕಾರಿಗಳ ಅನುಮತಿ ಸಿಕ್ಕಿದ್ದು ಹೇಗೆ? ಹೆಣ್ಣುಮಗುವಿನ ಅತ್ಯಾಚಾರವನ್ನು ಖಂಡಿಸಬಯಸಿದ ಜನಪರರನ್ನು ತಡೆದಿದ್ದು ಹೇಗೆ? (ನೀತಿಸಂಹಿತೆಯಿರುವಾಗ ಅತ್ಯಾಚಾರ ಮಾಡಬಾರದೆಂದು ಅತ್ಯಾಚಾರಿಗಳನ್ನಂತೂ ತಡೆಯಲು ಸಾಧ್ಯವಿಲ್ಲವಲ್ಲ!) ಪ್ರತೀವರ್ಷ ಆಚರಿಸುವಂತೆಯೇ ಭಗತ್‌ಸಿಂಗ್ ಹುತಾತ್ಮ ದಿನವನ್ನು ಆಚರಿಸಹೊರಟಿದ್ದ ಯುವಕರನ್ನು ಲಾಕಪ್‌ಗೆ ತಳ್ಳಿದ್ದು ಹೇಗೆ? ದೇಶದ ಯಾವ ಕಾನೂನು ಪೊಲೀಸರಿಗೆ ಮತ್ತು ಅಧಿಕಾರಿಗಳಿಗೆ ಇಂತಹ ನಿರಂಕುಶ ಆಡಳಿತದ ಅಧಿಕಾರ ಕೊಡುತ್ತದೆ? ಸಾರ್ವಜನಿಕರ ಸಂವಿಧಾನಬದ್ಧ ಹಕ್ಕುಗಳನ್ನು ಅಮಾನತ್ತಿನಲ್ಲಿಡಲು ಜಿಲ್ಲಾಧಿಕಾರಿಗಳಿಗೆ ಹೇಗೆ ಅಧಿಕಾರವಿರುತ್ತದೆ?

ಈ ಪ್ರಶ್ನೆಗಳನ್ನು ಅಧಿಕಾರಿಗಳು ಉತ್ತರಿಸುವುದಿಲ್ಲ;



ಅಂಬೇಡ್ಕರ್‌ರ ಮಹಾಡ್ ಸತ್ಯಾಗ್ರಹ...

ಆದರೆ, ಈ ಪರಿಸ್ಥಿತಿಗೆ ಕಾರಣಗಳೇನೆಂದು ನಾವುಗಳು ಚರ್ಚಿಸಲೇಬೇಕು! ದಿನೇದಿನೇ ಸಾರ್ವಜನಿಕರಿಗಿರಬೇಕಾದ ಸ್ಪೇಸ್ ಕ್ಷೀಣಿಸುತ್ತಿದೆ. ಟೀಕೆ ಮತ್ತು ವಿರೋಧಗಳೇ ಪ್ರಜಾತಂತ್ರ ವ್ಯವಸ್ಥೆಯ ಆರೋಗ್ಯವನ್ನು ರಕ್ಷಿಸುವಂಥವು; ಸಂವಿಧಾನದ ಆಶಯಕ್ಕೆ ಪೂರಕವಾಗಿ ಸರ್ಕಾರಗಳು ನಡೆದುಕೊಳ್ಳಬೇಕೆಂದು ಒತ್ತಡ ಹೇರುವಂಥವು. ಆದ್ದರಿಂದಲೇ ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ವಿರೋಧವನ್ನು ವ್ಯಕ್ತಪಡಿಸುವ ಹಕ್ಕೂ ಕೂಡಾ ಒಂದು! ಆಡಳಿತವನ್ನು ಟೀಕಿಸುವ, ಅದರ ತಪ್ಪು ನಡೆಗಳನ್ನು ವಿರೋಧಿಸುವ ಮತ್ತು ತಮ್ಮ ಹಕ್ಕುಗಳಿಗಾಗಿ ಪ್ರಭುತ್ವದೊಂದಿಗೆ ಸಂಘರ್ಷ ನಡೆಸುವ ಅವಕಾಶಗಳಿಲ್ಲದಿದ್ದಲ್ಲಿ, ಅದು ಪ್ರಜಾತಂತ್ರವಾಗುವುದಿಲ್ಲ; ಬದಲಿಗೆ ಸರ್ವಾಧಿಕಾರವಾಗುತ್ತದೆ. ತುರ್ತುಪರಿಸ್ಥಿತಿಯ ಸಂದರ್ಭದಲ್ಲಿ ದೇಶ ಅನುಭವಿಸಿದ್ದು ಅದನ್ನೇ. ವ್ಯಕ್ತಿಗತ ಅಥವಾ ಬಲಿಷ್ಠ ವರ್ಗದ ಹಿತಾಸಕ್ತಿಗಳು, ಸಾಮೂಹಿಕ ಒಳಿತಿನ ಆಶಯವನ್ನು ದಮನಿಸಲು ಆರಂಭಿಸಿದಾಗ ಮೇಲೆ ಉಲ್ಲೇಖಿಸದಂತಹ ವಿಪರ್ಯಾಸದ ಘಟನೆಗಳು ನಡೆಯುತ್ತವೆ. ಚುನಾವಣೆಗಳೆಂಬ 'ಪ್ರಜಾತಂತ್ರದ ಹಬ್ಬ'ಗಳನ್ನು ಜನರಿಗೆ ಪೂರಕವಾಗಿ ನಡೆಸುವುದಕ್ಕಾಗಿ ರೂಪಿತವಾದ ನೀತಿಸಂಹಿತೆಯೇ, ಜನರ ದನಿಯನ್ನು ಹತ್ತಿಕ್ಕುವ ಸಾಧನವಾಗುತ್ತದೆ!

ಈಗ ಪ್ರತಿಭಟನೆ ನಡೆಸುವುದೂ ಒಂದು ಪ್ರಹಸನದಂತಾಗಿದೆ. ಅದಕ್ಕೆಂದೆ ಮೀಸಲಾದ ಜಾಗಕ್ಕೆ ಬಂದು ನೊಂದವರು ಪ್ರತಿಭಟಿಸಬೇಕೇ ಹೊರತು, ಅನ್ಯಾಯ ನಡೆದ ಸ್ಥಳದಲ್ಲಲ್ಲ. ಎಲ್ಲಾ ಪ್ರತಿಭಟನೆಗಳಿಗೂ ಮೊದಲೇ ಅನುಮತಿ ಕಡ್ಡಾಯ. ಅನಿರೀಕ್ಷಿತವಾಗಿ ಉಂಟಾಗುವ ಅನಾಹುತಗಳನ್ನು ಅಲ್ಲೇ ಆಗಲೇ ಖಂಡಿಸುವಂತಿಲ್ಲ. ಕೆಲವು ನಿರ್ದಿಷ್ಟ ವೃತ್ತಿಗಳಲ್ಲಿರುವವರು ತಮ್ಮ ಹಕ್ಕುಗಳಿಗಾಗಿ ಮುಷ್ಕರ ಹೂಡಿದರೆ, ಅವರ ಮೇಲೆ ಅವಶ್ಯಕ ಸೇವೆಗಳನ್ನು ಖಾತ್ರಿಪಡಿಸುವ ಪ್ರತಿಬಂಧಕ ಕಾಯ್ದೆಯ ಅಡಿಯಲ್ಲಿ ಕಠಿಣವಾದ ಕಾನೂನು ಕ್ರಮ ಜರುಗಿಸಲಾಗುತ್ತದೆ. ಅಷ್ಟೇ ಏಕೆ, ವಿದ್ಯಾರ್ಥಿಗಳು ಪ್ರತಿಭಟನೆಗಳಲ್ಲಿ ಪಾಲ್ಗೊಂಡರೆ, ಅವರ ವಿದ್ಯಾರ್ಥಿವೇತನವನ್ನು ಕಡಿತಗೊಳಿಸಲಾಗುತ್ತದೆ! (ಈ ಸರ್ಕಾರ ಮಂಡಿಸಿದ ಈ ಮಸೂದೆ, ತೀವ್ರ ವಿರೋಧದ ಕಾರಣಕ್ಕೆ ತಾತ್ಕಾಲಿಕವಾಗಿ ಹಿಂದಕ್ಕೆ ಹೋಗಿದೆ; ಯಾವಾಗ ಬೇಕಾದರೂ ಮತ್ತೆ ಎದುರಾಗಬಹುದು!). ದಿನೇದಿನೇ, ಸರ್ಕಾರ ಜನವಿರೋಧಿ ನೀತಿಗಳನ್ನು ಜಾರಿಮಾಡುವುದು ಹೆಚ್ಚಾದಂತೆಲ್ಲಾ, ಅದನ್ನು ಟೀಕಿಸುವ, ಪ್ರತಿಭಟಿಸುವ ದನಿಗಳನ್ನು ಹತ್ತಿಕ್ಕುವಂತಹ ಕಾನೂನುಗಳೂ ಹೆಚ್ಚುತ್ತಿವೆ. ನಿರಂಕುಶತ್ವದ ಕಬಂಧಬಾಹುಗಳು ಪ್ರಜಾತಂತ್ರದ ಕತ್ತುಹಿಸುಕುತ್ತಿವೆ.

ಸರ್ಕಾರಿ ಯಂತ್ರಾಂಗದ ವ್ಯಾಖ್ಯಾನದ ಪ್ರಕಾರ ಎಲ್ಲಾ ಹಕ್ಕುಗಳೂ ಅನ್ವಯಿಸುವುದು 'ಮುಖ್ಯ ವಾಹಿನಿ'ಯಲ್ಲಿರುವವರಿಗೆ ಮಾತ್ರ; ಈ ಮುಖ್ಯವಾಹಿನಿ ಎಂದರೆ, ಚುನಾವಣಾ ಪಕ್ಷಗಳು, ರಾಜಕಾರಣಿಗಳು, ದೊಡ್ಡ ಬಂಡವಾಳಿಗರು ಹಾಗೂ ಅವರ ಏಜೆಂಟರು! ಕಳೆದ ಒಂದೆರಡು ವರ್ಷಗಳಲ್ಲಿ ಬೆಳಕಿಗೆ ಬಂದ ಎಲ್ಲಾ ಸಣ್ಣ-ದೊಡ್ಡ ಹಗರಣಗಳನ್ನು ಗಮನಿಸಿ. ದೊಡ್ಡ ಪ್ರಮಾಣದಲ್ಲಿ ಭ್ರಷ್ಟಾಚಾರ ನಡೆದು, ಒಳಗಿನ ಕೊಳೆಯೆಲ್ಲ ಹೊರಬೀಳುವ ಕೊನೆಯ ಹಂತದವರೆಗೂ ರಾಜಕಾರಣಿಗಳಿಗಾಗಲೀ, ದಲ್ಲಾಳಿಗಳಿಗಾಗಲೀ, ಅಧಿಕಾರಿಗಳಿಗಾಗಲೀ ಯಾವುದೇ ಅಡ್ಡಿಯೂ ಉಂಟಾಗಿರುವುದಿಲ್ಲ, ಎಲ್ಲಾ ಕಾನೂನಿನ ತಡೆಗಳನ್ನೂ ಅವರು ಸಲೀಸಾಗಿ ದಾಟುತ್ತಾರೆ. ನಡುವೆ ಏನೋ ಎಡವಟ್ಟಾದರೆ ಅಂತಹವು ಹೊರಬರುತ್ತವೆ ಹೊರತು, ಉಳಿದವೆಲ್ಲಾ ಸಾಂಗೋಪಾಂಗವಾಗಿ ಈಡೇರುತ್ತವೆ. ಸಾವಿರಾರು ಎಕರೆಗಳಷ್ಟು ರೈತರ ಭೂಮಿ ಕಾನೂನುಬಾಹಿರವಾಗಿ ಉದ್ಯಮಿಗಳ ಕೈಸೇರುತ್ತದೆ. ನಗರಗಳ ಸ್ಲಂಗಳಲ್ಲಿ ವಾಸವಿದ್ದವರು ಎತ್ತಂಗಡಿಯಾಗಿ ಬೆಲೆಬಾಳುವ ಭೂಮಿ ದೊಡ್ಡ ನಿರ್ಮಾಣ ಕಂಪೆನಿಗಳ ವಶವಾಗುತ್ತದೆ. ಬಡತನ ರೇಖೆಯನ್ನು ಮೇಲೇರಿಸುವ ಸರ್ಕಾರದ ಒಂದು ನಿರ್ಣಯದಿಂದ ಅದೆಷ್ಟೋ ಜನ ಬಿಪಿಎಲ್ ಕಾರ್ಡುದಾರರು, ತಮ್ಮ ಆಹಾರದ ಹಕ್ಕನ್ನು ಕಳೆದುಕೊಳ್ಳುತ್ತಾರೆ. ಆದರೆ, ತಮ್ಮ ಮೇಲೆ ನಡೆದ ಅನ್ಯಾಯವನ್ನು ಅವರು ವಿರೋಧಿಸಹೊರಟರೆ, ಅದಕ್ಕೆ ಯಾವುಯಾವುದೋ ಸಂಹಿತೆಗಳು ಅಡ್ಡಬರುತ್ತವೆ. ಏಕೆಂದರೆ, ಅವರು ಈ ದೇಶದ 'ಗೌರವಾನ್ವಿತ' ನಾಗರಿಕರಿರುವ ಮುಖ್ಯವಾಹಿನಿಗೆ ಸೇರುವುದಿಲ್ಲವಲ್ಲ!

ನಾವು ನಮ್ಮ ಪ್ರಜಾತಾಂತ್ರಿಕ ಹಕ್ಕುಗಳನ್ನು, ಪ್ರತಿಭಟಿಸುವ ಸ್ಪೇಸ್ ಅನ್ನು ಉಳಿಸಿಕೊಳ್ಳಲು ಮುಂದಡಿಯಿಡಲೇಬೇಕಾಗಿದೆ. ದೇಶದಲ್ಲಿ ಇಂತಹ ಬೆಳವಣಿಗೆಗಳು ಹೆಚ್ಚುತ್ತಿದ್ದ ಸಂದರ್ಭಗಳಲ್ಲೇ 'ಮಾನವ ಹಕ್ಕುಗಳು' ಎಂಬ ಪರಿಕಲ್ಪನೆ ರೂಪುಗೊಂಡು, ಸರ್ಕಾರಿ ಯಂತ್ರಾಂಗದಿಂದ ಕಸಿಯಲ್ಪಡುತ್ತಿದ್ದ ಜನಸಾಮಾನ್ಯರ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ಆಂದೋಲನ ಆರಂಭಿಸಿದವು. ಕರ್ನಾಟಕದಲ್ಲೂ ದಲಿತ, ರೈತ, ಕಾರ್ಮಿಕ ಚಳವಳಿಗಳು ಕಾನೂನಿನ ಹೆಸರಿನಲ್ಲಿ ತಮ್ಮ ಮೂಲಭೂತ ಹಕ್ಕುಗಳನ್ನು ಕಸಿಯುವುದನ್ನು ತೀವ್ರವಾಗಿ ಪ್ರತಿರೋಧಿಸಿದವು. ಸಾಲ ಬಾಕಿದಾರರಾದ ರೈತರ ಮನೆ ಜಪ್ತಿ ಮಾಡುವ ಸರ್ಕಾರದ ಜನವಿರೋಧಿ ನೀತಿಯನ್ನು ಕಟುವಾಗಿ ವಿರೋಧಿಸಿದ ರೈತಸಂಘ, ಅದರ ವಿರುದ್ಧ ಆಂದೋಲನ ರೂಪಿಸುತ್ತಲೇ ರೈತರ ದನಿಯಾಗಿ ಹೊರಹೊಮ್ಮಿತು. ಭಾರತದ ಈಶಾನ್ಯದಲ್ಲಿರುವ ಪುಟ್ಟ ರಾಜ್ಯಗಳ ಜನರಂತೂ, ಕಳೆದ 4-5 ದಶಕಗಳಿಂದ 'ಸಶಸ್ತ್ರ ಪಡೆಗಳ ವಿಶೇಷಾಧಿಕಾರ ಕಾಯ್ದೆ'ಯೆಂಬ ಕರಾಳ ಕಾನೂನಿನ ವಿರುದ್ಧ ಆ ಕಾನೂನಿನ ಹೆಸರಿನಲ್ಲಿ ಅಲ್ಲಿನ ನಾಗರಿಕರು ಮತ್ತು ಹೋರಾಟಗಾರರ ಮೇಲೆ ನಡೆಯುತ್ತಿರುವ ದಮನ-ದಬ್ಬಾಳಿಕೆಗಳ ವಿರುದ್ಧ ನಿರಂತರವಾದ ಪ್ರಜಾತಾಂತ್ರಿಕ ಪ್ರತಿರೋಧವನ್ನು ಕಟ್ಟುವುದರಲ್ಲಿ ನಿರತರಾಗಿದ್ದಾರೆ. ಸರ್ಕಾರ ಅವರ ಯಾವ ಹಕ್ಕೊತ್ತಾಯವನ್ನೂ ಮನ್ನಿಸದಿದ್ದರೂ, ಅದಕ್ಕಾಗಿ ತಮ್ಮ ಪ್ರಾಣವನ್ನೇ ಪಣವಾಗಿಟ್ಟು, ಅತ್ಯಂತ ನಿರಾಶಾದಾಯಕವಾದ ಸ್ಥಿತಿಯಲ್ಲೂ ಆಶಾವಾದದ ಪುಟ್ಟ ಜೀವಂತ ಹಣತೆಗಳಂತೆ ತಾವೇ ಉರಿಯುತ್ತಾ ಹಕ್ಕುಗಳ ಹೋರಾಟದ ಹಾದಿಯಲ್ಲಿ ಮುನ್ನುಗ್ಗುತ್ತಿದ್ದಾರೆ.

ಈ ಚುನಾವಣೆಯ ಫಲಿತಾಂಶವಾಗಿ ಯಾವ ರಾಜಕೀಯ ಪಕ್ಷ ಗೆದ್ದರೂ, ಯಾರು ಸೋತರೂ, ಈ ದೇಶದ ಮತ್ತು ವಿಶ್ವದ ಅತಿದೊಡ್ಡ ಬಂಡವಾಳಕೋರರು ಗೆಲ್ಲುತ್ತಾರೆಂಬುದಂತೂ ಖಚಿತವಾಗಿದೆ. ಸರ್ಕಾರ ಯಾವುದೇ ಬಂದರೂ, ಜಾರಿಯಾಗುವುದು ಆ ಬಂಡವಾಳಿಗರ ಬಯಕೆಯ ನೀತಿಗಳೇ; ಮುಂಬರುವ ದಿನಗಳು ನಮ್ಮ ದನಿಯನ್ನು ಇನ್ನಷ್ಟು ಉಡುಗಿಸಲು ಪ್ರಯತ್ನಿಸಬಹುದು; ಅದರ ಸೂಚನೆಗಳು ಈಗಿನ ಅಧಿಕಾರಿಗಳ ಚುನಾವಣಾ ನೀತಿಸಂಹಿತೆಯ ವ್ಯಾಖ್ಯಾನದಲ್ಲೇ ಕಾಣುತ್ತಿದೆ. ಆದ್ದರಿಂದ, ಇದು ಚುನಾವಣೆಗಳ ಮೂಲಕ ಪ್ರಜಾತಂತ್ರವನ್ನು ಎತ್ತಿಹಿಡಿಯುವ ಕಾಲ ಮಾತ್ರವಲ್ಲ; ಜನರಿರುವುದು ಕಾನೂನಿಗಾಗಿ ಅಲ್ಲ, ಬದಲಿಗೆ ಕಾನೂನು ಇರುವುದು ಜನರಿಗಾಗಿ ಎಂದು ಘೋಷಿಸುವ ಕಾಲ; ಸರ್ಕಾರಗಳು ಕುಗ್ಗಿಸುತ್ತಿರುವ ನಮ್ಮ ಪ್ರಜಾತಾಂತ್ರಿಕ ಅವಕಾಶಗಳ ಮೇಲೆ ನಮ್ಮ ಹಕ್ಕನ್ನು ಮರುಸ್ಥಾಪಿಸುವುದಕ್ಕಾಗಿ ಮುಂದಡಿಯಿಡುವ ಕಾಲ! ಅದಕ್ಕೆ, ಸಮಾನತೆಯಿಲ್ಲದ ಸ್ವಾತಂತ್ರ್ಯ ಅರ್ಥಹೀನ ಎಂಬ ಕಾಣ್ಕೆಯನ್ನು ಕೊಟ್ಟ ಹುತಾತ್ಮ ಭಗತ್‌ಸಿಂಗ್ ಮತ್ತವನ ಸಂಗಾತಿಗಳು (ಮಾರ್ಚ್ 23) ಹಾಗೂ ಜೀವಿತದುದ್ದಕ್ಕೂ ಅವಿರತವಾಗಿ ಶೋಷಿತರಿಗೆ ಸಮಾನ ಹಕ್ಕುಗಳನ್ನು ಕೊಡಿಸುವುದಕ್ಕಾಗಿ ಹೋರಾಡಿ 'ಮಹಾಡ್ ಸತ್ಯಾಗ್ರಹ'ದಂತಹ (ಮಾರ್ಚ್ 20) ಐತಿಹಾಸಿಕ ಚಳವಳಿ ನಡೆಸಿದ ಡಾ. ಅಂಬೇಡ್ಕರ್‌ರವರು ನಮಗೆ ಶಕ್ತಿ ನೀಡಲಿ.

ನೀನು ಏನು ಹೇಳುತ್ತಿರುವೆ?



ಯಾರನ್ನು ಸಿಂಹಾಸನದ ಮೇಲೆ ಕೂರಿಸೆಂದು ಹೇಳುತ್ತಿರುವೆ
ಖಡ್ಗದ ಮೇಲೆ ವಿಷ ಲೇಪಿಸುವ ಮಾತನಾಡುತ್ತಿರುವೆ
ಅಯ್ಯೋ ಅವನ ತಲೆಯ ಮೇಲೆ ಕೊಲೆಯ ಆರೋಪಗಳಿವೆ
ಅವನದೇ ತಲೆಯ ಮೇಲೆ ಕಿರೀಟವಿಡುವ ಮಾತನಾಡುತ್ತಿರುವೆ
ಸಂಗಾತಿಗಳ ಸಮಾಧಿಗಳ ಮೇಲೆ ಈ ಸೌಧಗಳು ಎದ್ದು ನಿಂತಿವೆ
ಇತಿಹಾಸವನ್ನು ಹೀಗೆ ಬದಲಿಸುವ ಮಾತನಾಡುತ್ತಿರುವೆ
ಒಂದು ಬೆಳಕಿನ ಕಿರಣಕ್ಕಾಗಿ ಇಲ್ಲಿ ಜೀವಗಳು ಉರಿಯುತ್ತಿವೆ
ಈ ಸತ್ಯವನ್ನು ನೀನು ಮುಚ್ಚಿಡುವ ಮಾತನಾಡುತ್ತಿರುವೆ
ಈಗಲೂ ಕಿವಿಗಳಲ್ಲಿ ಮಾರ್ದನಿಸುತ್ತಿವೆ ಆ ಚೀತ್ಕಾರಗಳು
ಅವುಗಳನ್ನು ಮರೆತು ನೀನು ನಗುವ ಮಾತನಾಡುತ್ತಿರುವೆ
ನೀ ನಡೆವ ಬೀದಿಯಲ್ಲಿ ಹೀಗೆ ರಾಶಿ ಹೆಣಗಳು ಬಿದ್ದಿವೆ
ಅಸ್ಥಿಗಳ ಮೇಲೆ ಹೆದ್ದಾರಿ ನಿರ್ಮಿಸುವ ಮಾತನಾಡುತ್ತಿರುವೆ
ನಿನ್ನ ಇಚ್ಛೆಗೆ ವಿರುದ್ಧವಾಗಿ ಜಗತ್ತು ಬದಲಾಗುತ್ತಿದೆ 'ಸಾಹಿಲ್'
ಮತ್ತೆ ನೀನು ದಿನವೂ ಜಗತ್ತನ್ನೆ ಬದಲಿಸುವ ಮಾತನಾಡುತ್ತಿರುವೆ

ಮೂಲ: ಸಂವರ್ತ ಸಾಹಿಲ್
ಅನುವಾದ- ಶಶಿಧರ ಹೆಮ್ಮಾಡಿ




ಮೋದಿಗೆ 'ಪ್ರಾಣ ಬೆದರಿಕೆ' ಮತ್ತು ಪ್ರಜಾಪ್ರಭುತ್ವದ ಕೊಲೆ



• ಗೌರಿ ಲಂಕೇಶ್
editorlankesh@gmail.com

ಕಂಡಹಾಗೆ

ಇದೇ ಮಾರ್ಚ್ 20ರಂದು ಒಂದು ವಿಚಿತ್ರ ಘಟನೆ ನಡೆಯಿತು. ಅವತ್ತು ಬಿಜೆಪಿಯ ವಕ್ತಾರ ರವಿಶಂಕರ್ ಪ್ರಸಾದ್ ದೆಹಲಿಯಲ್ಲಿ ಒಂದು ಪತ್ರಿಕಾಗೋಷ್ಠಿ ಕರೆದು "ಮಾಧ್ಯಮಗಳಲ್ಲಿ ವರದಿ ಆಗಿರುವಂತೆ ಇಂಟಲಿಜೆನ್ಸ್ ಬ್ಯೂರೋಗೆ ಎಚ್ಚರಿಕೆಯ ಸಂದೇಶಗಳು ರವಾನೆಯಾಗಿದ್ದು, ಆ ಸಂದೇಶಗಳ ಪ್ರಕಾರ ನಮ್ಮ ಪಕ್ಷದ ನಾಯಕರ ಜೀವಕ್ಕೆ ಅಪಾಯ ಇದೆ" ಎಂದು ಹೇಳಿದರು. (ಈಗ ಬಿಜೆಪಿ ನಾಯಕ ಎಂದರೆ ಬೇರೆ ಯಾರೂ ಅಲ್ಲ, ನರೇಂದ್ರ ಮೋದಿ ಮಾತ್ರ ಎಂಬುದನ್ನು ಆ ಪಕ್ಷವೇ ಸ್ಪಷ್ಟಪಡಿಸಿದೆ.) ಅಷ್ಟೇ ಅಲ್ಲ, ನಿರ್ಮಲಾ ಸೀತಾರಾಮನ್ ಎಂಬ ಚೆಡ್ಡಿ ನಾಯಕಿ ಕೂಡ ಅಂದು "ಈ ಸಂದೇಶಗಳನ್ನು ಗೃಹ ಸಚಿವಾಲಯ ಗಂಭೀರವಾಗಿ ತೆಗೆದುಕೊಂಡು ನಮ್ಮ ನಾಯಕರ ಪ್ರಾಣರಕ್ಷಣೆಗೆ ಸೂಕ್ತ ಕ್ರಮಗಳನ್ನು ತೆಗೆದುಕೊಳ್ಳಬೇಕು" ಎಂದು ಆದೇಶ ಹೊರಡಿಸಿದಳು.



ಇದಾದ ಮಾರನೆ ದಿನ ಬಿಜೆಪಿಯ ನಾಯಕರ ನಿಯೋಗವೊಂದು ಕೇಂದ್ರ ಗೃಹಮಂತ್ರಿ ಸುಶೀಲ್ ಕುಮಾರ್ ಶಿಂಧೆ ಅವರನ್ನು ಭೇಟಿಯಾಗಿ ಒಂದು ಮನವಿಯನ್ನು ಸಲ್ಲಿಸಿತು. ಆ ಮನವಿಯಲ್ಲಿ "ಇತ್ತೀಚೆಗೆ ಇಂಟಲಿಜೆನ್ಸ್ ಬ್ಯೂರೋದ ಅಧಿಕಾರಿಗಳು ಮಾಧ್ಯಮಗಳಿಗೆ ಕೊಟ್ಟಿರುವ ಮಾಹಿತಿಯನ್ನಾಧರಿಸಿ ಪ್ರಕಟಗೊಂಡಿರುವ ವರದಿಗಳ ಪ್ರಕಾರ ನಮ್ಮ ನಾಯಕರ ಪ್ರಾಣಕ್ಕೆ ಅಪಾಯ ಇದ್ದು ಅವರನ್ನು ಅಪಹರಿಸುವ ಗುರಿ ಭಯೋತ್ಪಾದಕರದ್ದಾಗಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ಯಾಸಿನ್ ಭಟ್ಕಳ್ ಎಂಬ ಭಯೋತ್ಪಾದಕನ ಬಿಡುಗಡೆಗೆ ಈ ಕೃತ್ಯಗಳನ್ನು ಯೋಜಿಸುವ ಸಂಚು ನಡೆದಿದೆ. ಆದ್ದರಿಂದ ನಮ್ಮ ನಾಯಕರಿಗೆ ಇನ್ನೂ ಹೆಚ್ಚಿನ ಬಿಗಿ ಭದ್ರತೆ ಒದಗಿಸಿ" ಎಂದು ಕೋರಿದರು.

ರವಿಶಂಕರ್ ಪ್ರಸಾದ್ ಮತ್ತು ನಿರ್ಮಲಾ ಸೀತಾರಾಮನ್ ಅವರ ಹೇಳಿಕೆಗಳು ಮತ್ತು ಶಿಂಧೆ ಅವರಿಗೆ ಸಲ್ಲಿಸಿದ ಮನವಿಗೆ ಎಲ್ಲ ಮಾಧ್ಯಮಗಳು ಭಾರೀ ಪ್ರಚಾರ ನೀಡಿದವು. ಆದರೆ ಯಾವ ಮಾಧ್ಯಮದವರೂ ಯಾವ ಪತ್ರಿಕೆ ಇಂತಹ ವರದಿಗಳನ್ನು ಪ್ರಕಟಿಸಿತ್ತು ಎಂದು ನೋಡುವ ಗೋಜಿಗೆ ಹೋಗಲಿಲ್ಲ, ವಾಸ್ತವವಾಗಿ ಇಂಟಲಿಜೆನ್ಸ್ ಬ್ಯೂರೋಗೆ ಬಿಜೆಪಿ ನಾಯಕರ ಪ್ರಾಣಕ್ಕೆ ಅಪಾಯವಿದೆ ಎಂಬ ಎಚ್ಚರಿಕೆಯ ಸಂದೇಶ ಅಥವಾ ಮಾಹಿತಿ ಸಿಕ್ಕಿದೆ ಎಂಬುದರ ಬಗ್ಗೆ ಯಾವ ಪ್ರಮುಖ ಮಾಧ್ಯಮಗಳೂ ವರದಿ ಮಾಡಿಯೇ ಇರಲಿಲ್ಲ, ಬದಲಾಗಿ ಮೋದಿಯ ತುತ್ತೂರಿ ಆಗಿರುವ ನಿಟಿ ಸೆಂಟ್ರಲ್ ಎಂಬ ಇಂಟರ್‌ನೆಟ್ ತಾಣವೊಂದು ಮಾತ್ರ 'ಭಯೋತ್ಪಾದಕರಿಂದ ಮೋದಿಯ ಪ್ರಾಣಕ್ಕೆ ಅಪಾಯವಿದೆ' ಎಂಬ ವರದಿಯನ್ನು ಬಿತ್ತರಿಸಿತ್ತು, ಅದನ್ನೇ ಆಧರಿಸಿ ಚೆಡ್ಡಿ ನಾಯಕರು ತಮ್ಮ 'ಹೀರೋ' ಮೋದಿಗೆ ಇನ್ನಷ್ಟು ಪ್ರಚಾರ ಪಡೆಯಲು ಉಪಯೋಗಿಸಿಕೊಂಡಿದ್ದರು.

ಇದಾದ ಮೂರು ದಿನಗಳ ನಂತರ - ಅಂದರೆ ಇದೇ ಭಾನುವಾರ - ಇನ್ನೊಂದು ವಿಚಿತ್ರ ಪತ್ರಿಕಾಗೋಷ್ಠಿ ನಡೆಯಿತು. ಅದು ರಾಜಸ್ಥಾನದಲ್ಲಿ ದಿಲ್ಲಿಯ ಪೊಲೀಸರು ಬಂಧಿಸಿದ ಹಲವು ಇಂಡಿಯನ್ ಮುಜಾಹಿದ್ದೀನ್ ಸಂಘಟನೆಯ 'ಶಂಕಿತ' ಭಯೋತ್ಪಾದಕರನ್ನು ಕುರಿತದ್ದಾಗಿತ್ತು, ಆ ಬಂಧನಗಳ ಬಗ್ಗೆ ಕನ್ನಡದ ಒಂದು ಪತ್ರಿಕೆ ಮತ್ತು ಇತರೆ ಮಾಧ್ಯಮಗಳು ಹೇಗೆ ವರದಿ ಮಾಡಿದವು ಎಂದು ನೋಡುವುದು ಅಗತ್ಯವೆನಿಸುತ್ತದೆ.

ಉದಾಹರಣೆಗೆ, ಇವತ್ತು ಕರ್ನಾಟಕದಲ್ಲಿ ಮೋದಿ ಮತ್ತು ಯಡಿಯೂರಪ್ಪನ ಕರಪತ್ರದಂತೆ ವರ್ತಿಸುತ್ತಿರುವ, ವಿಜಯ್ ಸಂಕೇಶ್ವರ್ ಅವರ 'ಸಾರಥ್ಯದಲ್ಲಿ' ಬರುವ ವಿಜಯವಾಣಿ ಎಂಬ ಪತ್ರಿಕೆ ಹೀಗೆ ವರದಿ ಮಾಡಿತ್ತು: "ಮೋದಿ ಸೇರಿದಂತೆ ಉಗ್ರರ ಬೆದರಿಕೆಯಿರುವ ರಾಜಕಾರಣಿಗಳಿಗೆ ಸೂಕ್ತ ಭದ್ರತೆ ಒದಗಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಸುಶೀಲ್ ಕುಮಾರ್ ಶಿಂಧೆ ಹೇಳಿದರು." ಇದನ್ನು ಓದಿದರೆ ಮೋದಿ ಪ್ರಾಣಕ್ಕೆ ಅಪಾಯ ಇದೆ ಎಂಬುದನ್ನು ಶಿಂಧೆ ಒಪ್ಪಿಕೊಂಡಿದ್ದಾರೆ ಎಂದು ಭಾಸವಾಗುವುದಿಲ್ಲವೇ?

ಆದರೆ ನಿಜವಾಗಲೂ ಶಿಂಧೆ ಹೇಳಿದ್ದೇನು ಎಂಬುದನ್ನು ಪ್ರಜಾವಾಣಿ ಪತ್ರಿಕೆ ಅವತ್ತು ತಿಳಿಸಿತ್ತು, ಅದು ಹೀಗೆ ಮುಖಪುಟದಲ್ಲೇ ವರದಿ ಮಾಡಿತ್ತು: "ಬಿಜೆಪಿ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿ ಅವರಿಗೆ ನೀಡಲಾಗಿರುವ ಭದ್ರತೆಯನ್ನು ಈಗಾಗಲೇ ಮೇಲ್ದರ್ಜೆಗೇರಿಸಲಾಗಿದ್ದು ಅವರಿಗೆ ಯಾವುದೇ ಬೆದರಿಕೆ ಇಲ್ಲ... ಭಯೋತ್ಪಾದಕ ಸಂಘಟನೆಗಳಿಂದ ಬಿಜೆಪಿ ನಾಯಕರಿಗೆ ಬೆದರಿಕೆ ಇರುವ ಸಾಧ್ಯತೆಗಳ ಕುರಿತು ಸರ್ಕಾರಕ್ಕೆ ಯಾವುದೇ ಮಾಹಿತಿ ಇಲ್ಲ ಎಂದು ಶಿಂಧೆ ತಿಳಿಸಿದರು."

ವಿಜಯ ಕರ್ನಾಟಕ ಪತ್ರಿಕೆಯು ಟೈಮ್ಸ್ ನ್ಯೂಸ್ ನೆಟ್‌ವರ್ಕ್ ಕಳುಹಿಸಿದ ವರದಿಯನ್ನು ಅನುವಾದಿಸಿ ಪ್ರಕಟಿಸಿತ್ತು, ಆ ವರದಿಯಲ್ಲಿ "ಮೋದಿ ಉಗ್ರರ ಹಿಟ್‌ಲಿಸ್ಟ್‌ನಲ್ಲಿದ್ದರು ಎಂದು ಮೂಲಗಳು ತಿಳಿಸಿವೆ. ದಿಲ್ಲಿ ಪೊಲೀಸರು ಈ ಸಂಬಂಧ ಗೃಹ ಸಚಿವಾಲಯಕ್ಕೆ ವರದಿ ಸಲ್ಲಿಸಿ, ಮೋದಿ ಚುನಾವಣಾ ಪ್ರಚಾರದ ವೇಳೆ ಹೆಚ್ಚುವರಿ ಭದ್ರತೆ ನೀಡುವಂತೆ ಮನವಿ ಸಲ್ಲಿಸಲಿದ್ದಾರೆ" ಎಂದು ಪ್ರಕಟಿಸಿತ್ತು, ಆದರೆ ಈ 'ಮೂಲಗಳು' ಯಾವುವು ಎಂದಾಗಲಿ, ಯಾಕೆ ಪೊಲೀಸರು ಮೋದಿ ರಕ್ಷಣೆಗೆ 'ಮನವಿ' ಸಲ್ಲಿಸಬೇಕು ಎಂದಾಗಲಿ ವಿವರಿಸಿರಲಿಲ್ಲ, ಆದರೆ ಬಾಕ್ಸ್ ಒಂದರಲ್ಲಿ "ಮೋದಿ ಟಾರ್ಗೆಟ್ ಅಲ್ಲ" ಎಂದು ಸ್ಪಷ್ಟಪಡಿಸಿತ್ತು.

ಇದು ನಮ್ಮ ಮಾಧ್ಯಮಗಳ ಕತೆಯಾದರೆ ಇಂಗ್ಲಿಷ್ ಪತ್ರಿಕೆಗಳು ಮತ್ತು ಟಿವಿ ಚಾನೆಲ್‌ಗಳು ಕಿಂಚಿತ್ತೂ ಆಧಾರವಿಲ್ಲದೆ ತಲೆಗೆ ತೋಚಿದಂತೆ ವರದಿ ಮಾಡಿದವು. ದೆಹಲಿ ಪೊಲೀಸರು ಪತ್ರಿಕಾಗೋಷ್ಠಿಯಲ್ಲಿ "ವಿಚಾರಣೆ ಇನ್ನೂ ಪ್ರಾಥಮಿಕ ಹಂತದಲ್ಲಿದೆ" ಎಂದಷ್ಟೇ ಹೇಳಿದ್ದರೂ, ಅವರು ಬಿಡುಗಡೆ ಮಾಡಿದ್ದ ಪತ್ರಿಕಾ ಹೇಳಿಕೆಯಲ್ಲೂ ಯಾವುದೇ ರಾಜಕಾರಣಿಯ ಹೆಸರು ಪ್ರಸ್ತಾಪಿಸದೇ ಇದ್ದರೂ "ಮೋದಿಯನ್ನು ಕೊಲ್ಲುವ ಸಂಚು ಭಯೋತ್ಪಾದಕರದ್ದಾಗಿತ್ತು" ('ಶಂಕಿತ' ಎಂಬ ಪದವನ್ನೂ ಬಳಸದೆ) ಎಂದು ಆಧಾರರಹಿತ ವರದಿಗಳನ್ನು ಪ್ರಕಟಿಸಿದವು. ಕೆಲವು ಟಿವಿ ಚಾನೆಲ್‌ಗಳು 'ಮೋದಿಯೇ ಗುರಿ', 'ಮೋದಿಯನ್ನು ಕೊಲ್ಲುವ ಸಂಚು' ಎಂದೆಲ್ಲ ಬ್ರೇಕಿಂಗ್ ನ್ಯೂಸ್ ಬಿತ್ತರಿಸಿದವು. ಹಿಂದಿ ಪತ್ರಿಕೆಯೊಂದು 'ಇಂಜಿನಿಯರಿಂಗ್ ವಿದ್ಯಾರ್ಥಿಗಳು ಆತಂಕವಾದಿಗಳಾದರು, ಮನೆ ಮಾಲೀಕನ ಮುಂದೆಯೇ ಕುರಾನ್ ಓದುತ್ತಿದ್ದರು' ಎಂದು ಮುದ್ರಿಸಿತು.

ವಿಪರ್ಯಾಸದ ಸಂಗತಿ ಯಾವುದೆಂದರೆ ಇದೇ ಪೊಲೀಸರು ಇದೇ ಸಂಘಟನೆಗೆ ಸಂಬಂಧಿಸಿದವರು ಎಂದು ಆರೋಪಿಸಿ ಬಂಧಿಸಿದ್ದ ಮೂವರ ವಿರುದ್ಧ ಯಾವುದೇ ಸಾಕ್ಷ್ಯಾಧಾರಗಳಿಲ್ಲ ಎಂದು ಇದಕ್ಕೆ ಒಂದೆರಡು ದಿನಗಳ ಹಿಂದೆ ಬಿಡುಗಡೆ ಮಾಡಿದ್ದರು. ಆಗ ಪೊಲೀಸರು ಯಾವ ಪತ್ರಿಕಾಗೋಷ್ಠಿಯನ್ನೂ ಕರೆದಿರಲಿಲ್ಲ, ಯಾವ ಮಾಧ್ಯಮದವರೂ ಬಿಡುಗಡೆಯ ಬಗ್ಗೆ ವರದಿ ಮಾಡಿರಲಿಲ್ಲ!

ಇದನ್ನು ಗುರುವಾರ ಬರೆಯುತ್ತಿರುವಾಗ ಹೆಡ್‌ಲೈನ್ಸ್ ಟುಡೆ ಚಾನೆಲ್‌ನಲ್ಲಿ 'ಮೋದಿ ಪ್ರಾಣಕ್ಕೆ ಭಯೋತ್ಪಾದಕರಿಂದ ಬೆದರಿಕೆ' ಎಂಬ ವರದಿ ಪ್ರಸಾರವಾಗುತ್ತಿದೆ. ಅದರಲ್ಲಿ ಬಿಜೆಪಿಯ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ "ಇದು ದೇಶದ ಭದ್ರತೆಗೇ ಎದುರಾಗಿರುವ ಅಪಾಯ" ಎಂಬ ಬೊಬ್ಬೆ ಹಾಕುತ್ತಿದ್ದಾನೆ. ಮೋದಿ ಪ್ರಾಣಕ್ಕೆ ಅಪಾಯವಿದ್ದರೆ ಅದು ಹೇಗೆ ದೇಶದ ಭದ್ರತೆಗೇ ಅಪಾಯ ಎಂದು ಆ ಟಿವಿ ಚಾನೆಲ್‌ನ ವರದಿಗಾರ ಪ್ರಶ್ನಿಸಲಿಲ್ಲ ಅಥವಾ ಪ್ರಶ್ನಿಸಿದ್ದರೂ ಸಿಂಗ್ ಅದಕ್ಕೆ ಉತ್ತರಿಸಿಲ್ಲ.

ಜಾಮಿಯಾ ಟೀಚರ್ಸ್ ಸಾಲಿಡಾರಿಟಿ ಅಸೋಸಿಯೇಷನ್ ಪ್ರಕಟಿಸಿರುವ ಒಂದು ವರದಿಯಲ್ಲಿ ಮೋದಿಯ ಪ್ರಾಣಕ್ಕೆ 'ಅಪಾಯ' ಇದೆ ಎಂದು ಬಿಜೆಪಿಯವರೇ ದೊಡ್ಡದಾಗಿ ಪ್ರಚಾರ ಮಾಡಿದ್ದು 2002ರಿಂದ 2007ರ ತನಕ. ಆ ಅವಧಿಯಲ್ಲಿ ಮೋದಿಯ ಸರ್ಕಾರದಲ್ಲಿ 'ಸೂಪರ್ ಕಾಪ್' ಎಂದು 'ಕು'ಖ್ಯಾತಿ ಗಳಿಸಿದ್ದ ಡಿ.ಜಿ.ವಂಜಾರ ಮೋದಿಯನ್ನು ಕೊಲ್ಲಲೆಂದೇ ಗುಜರಾತ್ ರಾಜ್ಯಕ್ಕೆ ಹೋಗಿದ್ದ ಹಲವಾರು 'ಭಯೋತ್ಪಾದಕರನ್ನು' ಕೊಂದು ಹಾಕಿದ್ದ. ಆಗ ಸತ್ತವರಲ್ಲಿ ಪ್ರಮುಖರು ಸಾದಿಕ್ ಜಮಾಲ್ (2003), ಇಶ್ರತ್ ಜಹಾನ್ (2004), ಸೊಹ್ರಾಬುದ್ದೀನ್ ಶೈಕ್ (2005) ಮತ್ತು ತುಳಸಿರಾಮ್ ಪ್ರಜಾಪತಿ (2006). ಆದರೆ ಹಲವು ತನಿಖೆಗಳ ನಂತರ ಇವರೆಲ್ಲರನ್ನು ಅಕ್ರಮವಾಗಿ ಬಂಧಿಸಿ, ಖಾಸಗಿ ಮನೆಗಳಲ್ಲಿ ಹಿಂಸೆ ಕೊಟ್ಟು ಕೊನೆಗೆ ನಕಲಿ ಎನ್‌ಕೌಂಟರ್‌ಗಳಲ್ಲಿ ಕೊಂದುಹಾಕಲಾಗಿತ್ತು ಎಂಬ ಅಂಶ ಬಹಿರಂಗಗೊಂಡಿತು. 2007ರಲ್ಲಿ ವಂಜಾರ ಮತ್ತಾತನ ಹಂತಕ ಪೊಲೀಸ್ ಪಡೆಯನ್ನು ಜೈಲಿಗೆ ದೂಡಿದ ನಂತರ ಮೋದಿಯ ಪ್ರಾಣಕ್ಕೆ ಯಾವ ಭಯೋತ್ಪಾದಕನಿಂದಲೂ 'ಬೆದರಿಕೆ' ಬಂದಿಲ್ಲ. ಅದು ಹೇಗೆ ವಂಜಾರ ಜೈಲು ಪಾಲಾದನಂತರ ಭಯೋತ್ಪಾದಕರಿಗೆ ಗುಜರಾತಿನ ಹಾದಿಯೇ ಮರೆತುಹೋಯಿತು ಎಂಬುದು ಇವತ್ತಿಗೂ ನಿಗೂಢವಾಗಿರುವ ಪ್ರಶ್ನೆ!

ನೆನಪಿಡಿ, 2002-2007ರ ಅವಧಿಯಲ್ಲೇ ಮೋದಿಯ ಪ್ರಾಣಕ್ಕೆ ಅಪಾಯವಿದೆ ಎಂದು ಹೇಳುತ್ತಲೇ ಆತನನ್ನು 'ಗುಜರಾತಿನ ವಿಕಾಸ ಪುರುಷ' ಎಂದು ಚೆಡ್ಡಿಗಳು ಮತ್ತು ಮಾಧ್ಯಮಗಳು ಬಿಂಬಿಸಿದ್ದು. ಈಗಲೂ ಅದೇ ತರ್ಕವನ್ನು ಚೆಡ್ಡಿಗಳು ಮತ್ತು ಅದರ ಸೇವಕರಂತೆ ವರ್ತಿಸುತ್ತಿರುವ ಹಲವು ಮಾಧ್ಯಮಗಳು ಮಾಡಲು ಹೊರಟಿರುವಂತಿದೆ. ಮುಸಲ್ಮಾನ ಸಂಘಟನೆಗಳಿಂದ ಮೋದಿಯ ಪ್ರಾಣಕ್ಕೆ ಬೆದರಿಕೆ ಇದೆ ಎಂದು ಬಾಯಿಬಡಿದುಕೊಳ್ಳುತ್ತಲೇ ಆತ ಇಂತಹ ಬೆದರಿಕೆಗಳನ್ನೆಲ್ಲ ಎದುರಿಸುವ ತಾಕತ್ತಿರುವ 'ಹಿಂದೂತ್ವದ ಮಹಾ ಪುರುಷ' ಎಂಬಂತೆ ಎತ್ತಿಕಟ್ಟಲಾಗುತ್ತಿದೆ. ಪ್ರತಿಬಾರಿ ಇಂಟಲಿಜೆನ್ಸ್ ಬ್ಯೂರೋಗೆ ಎಚ್ಚರಿಕೆ ಸಂದೇಶಗಳು ಬಂದಿವೆ ಎಂದೂ, ಅವುಗಳನ್ನು ಆಧರಿಸಿ ಮುಸಲ್ಮಾನರನ್ನು ಬಂಧಿಸಲಾಗಿದೆ ಎಂದೂ, ಆ ಮೂಲಕ ಮೋದಿಯ ಪ್ರಾಣಹಾನಿಗೆ ತಡೆಯೊಡ್ಡಲಾಗಿದೆ ಎಂದೂ ವರದಿ ಬಿತ್ತರಗೊಂಡಾಗಲೆಲ್ಲ ಆತನ ಇಮೇಜ್ ಉಲ್ಬಣಗೊಳ್ಳುತ್ತಾ ಹೋಗುತ್ತದೆ.

ಅದು ಹೆಚ್ಚಾದಂತೆ ಆತ ಈ ದೇಶದ ಪ್ರಧಾನಿ ಆಗುವ ಅಪಾಯವೂ ಹೆಚ್ಚುತ್ತದೆ. ಆನಂತರ ಇಶ್ರತ್ ಜಹಾನ್ ಎಂಬ ಅಮಾಯಕ ಯುವತಿಯಂತೆ ಈ ದೇಶದಾದ್ಯಂತ ಇತರರೂ ಯಾವ ತಪ್ಪು ಮಾಡದಿದ್ದರೂ ತಮ್ಮ ಪ್ರಾಣವನ್ನು ಕಳೆದುಕೊಳ್ಳಬೇಕಾಗುತ್ತದೆ.


ಅರುಣ್ ಕುಮಾರ್ ಎಂಬುವವರು ಒಂದು ಲೇಖನದಲ್ಲಿ ಹೀಗೆ ಬರೆದಿದ್ದಾರೆ:

"ಚುನಾವಣೆಗಳ ಮೂಲಕ ಜಗತ್ತಿನಲ್ಲಿ ಫ್ಯಾಸಿಸ್ಟರು ಪ್ರಥಮಬಾರಿಗೆ ಅಧಿಕಾರಕ್ಕೇರಿದ್ದು ಇಟಲಿಯಲ್ಲಿ, ಆರಂಭದ ದಿನಗಳಲ್ಲಿ ಫ್ಯಾಸಿಸ್ಟರು ಪ್ರಜಾತಾಂತ್ರಿಕ ಸಂಸ್ಥೆಗಳ ಮೇಲೆ ದಾಳಿ ಮಾಡಲು ಪ್ರಯತ್ನಿಸಲಿಲ್ಲ. ಬದಲಾಗಿ ಅವುಗಳನ್ನು ತಮ್ಮ ಅಗತ್ಯಗಳಿಗೆ ತಕ್ಕಂತೆ ಕುಶಲತೆಯಿಂದ ಬಳಸಿಕೊಂಡರು. ಫ್ಯಾಸಿಸ್ಟರೇ ಹೆಚ್ಚಿನ ಸಂಖ್ಯೆಯಲ್ಲಿದ್ದ ಸಂಸತ್ತಿನಲ್ಲಿ ಗ್ರಾಮ್ಶಿ ತರಹದ ಕಮ್ಯೂನಿಸ್ಟರು ಇದ್ದರಲ್ಲದೆ ಸಂಸತ್ತಿನ ಚರ್ಚೆಗಳಲ್ಲಿ ಮುಸಲೋನಿಯ ಫ್ಯಾಸಿಸ್ಟ್ ನೀತಿಗಳನ್ನು ತರಾಟೆಗೆ ತೆಗೆದುಕೊಳ್ಳುತ್ತಿದ್ದರು. ಆದರೆ ತನ್ನ ಪ್ರಾಣಕ್ಕೆ ಬೆದರಿಕೆ ಇದೆ ಎಂಬ ನೆಪವೊಡ್ಡಿ ಮುಸಲೋನಿ ತುರ್ತುಪರಿಸ್ಥಿತಿಯನ್ನು ಘೋಷಿಸಿದ ನಂತರವೇ ಫ್ಯಾಸಿಸ್ಟರ ಅಸಲಿ ಮುಖ ಬಹಿರಂಗಗೊಂಡಿದ್ದು. ಆಗ ಫ್ಯಾಸಿಸ್ಟರು ಜನಸಾಮಾನ್ಯರ ಎಲ್ಲ ತರಹದ ಹಕ್ಕುಗಳನ್ನು ಮೊಟಕುಗೊಳಿಸಿದರಲ್ಲದೆ, ಭಿನ್ನಮತವನ್ನೂ ನಿಗ್ರಹಿಸಿದರು. ಅಲ್ಲಿಯ ತನಕ ಕೇವಲ ತನ್ನ ರಾಜಕೀಯ ವಿರೋಧಿಗಳನ್ನು ಮಾತ್ರ ಕೊಂದು ಹಾಕುತ್ತಿದ್ದ ಮುಸಲೋನಿ ತುರ್ತುಪರಿಸ್ಥಿತಿಯ ನೆಪದಲ್ಲಿ ತನ್ನ ಅಧಿಕಾರದ ಅಡಿಪಾಯವನ್ನು ಭದ್ರಪಡಿಸಿಕೊಂಡನಲ್ಲದೆ ಎಲ್ಲಾ ರೀತಿಯ ಪ್ರಜಾತಂತ್ರಿಕ ಸಂಸ್ಥೆಗಳನ್ನು ನಾಶ ಮಾಡಿ ದೌರ್ಜನ್ಯ ಮೆರೆದ. ಇಪ್ಪತ್ತನೆ ಶತಮಾನದ ಕರಾಳ ದಿನಗಳು ಅವಾಗಿದ್ದವು."

ಮೋದಿಗೆ ಇರುವ ಕಪೋಲಕಲ್ಪಿತ 'ಪ್ರಾಣ ಬೆದರಿಕೆಗೂ' ನಮ್ಮ ಪ್ರಜಾತಂತ್ರದ ವ್ಯವಸ್ಥೆಗೆ ಇರುವ ನಿಜವಾದ ಬೆದರಿಕೆಗೂ ವ್ಯತ್ಯಾಸ ಇರುವುದೇ ಇಲ್ಲಿ...

ಉತ್ತರ ಕನ್ನಡ:

ಅನಂತ್ಮಾಣಿ ಮನೆಯತ್ತ! ಯಾರು ಲೋಕಸಭೆಯತ್ತ?


ಅನಂತ್‌ಕುಮಾರ್ ಹೆಗಡೆ


ಕರಾವಳಿ-ಮಲೆನಾಡು-ಅರೆಬಯಲು ಸೀಮೆ ಪ್ರದೇಶ, ತರಹೇವಾರಿ ಜಾತಿ-ಜನಾಂಗ-ಬುಡಕಟ್ಟು ಮತ್ತು ಧರ್ಮದ ಲೋಕಸಭಾ ಕ್ಷೇತ್ರ-ಉತ್ತರ ಕನ್ನಡ. ಜಾತಿ ಅಖಾಡವಾಗಿದ್ದ ಈ ಕ್ಷೇತ್ರವನ್ನು ಧರ್ಮಾಂಧ ರಣಕಣ ಮಾಡಿದ್ದು ಸಂಘಪರಿವಾರದ ಬೀದಿ ಬಡಿದಾಟಗಾರ ಅನಂತಕುಮಾರ್ ಹೆಗಡೆ ಯಾನೆ ಅನಂತ್ಮಾಣಿ. ಈತನ ಅನಾಹುತಕಾರಿ ಧರ್ಮಕಾರಣದ ಮುಂದೆ ಬಿಜೆಪಿ ಯಾವ ಲೆಕ್ಕವೂ ಅಲ್ಲ. ಹೀಗಾಗಿ ಆತ ಕಳೆದ ಹದಿನಾಲ್ಕು ವರ್ಷದಿಂದ ಬಿಜೆಪಿ ಯಂಥ ಬಿಜೆಪಿಯನ್ನೇ ಓವರ್‌ಟೇಕ್ ಮಾಡಿ ಛೀಳಿಡುತ್ತ ಬಂದಿದ್ದ. ಆದರೀಗ ಅನಂತ್ಮಾಣಿ ಊರಿಗೆಲ್ಲ ಬೆಂಕಿ ಹಚ್ಚಿದ, ಕಂಡವರ ರಕ್ತ ಹರಿಸಿದ ಪಾಪಕ್ಕೆ ಪ್ರಾಯಶ್ಚಿತ್ತ ಪಡಬೇಕಾಗಿ ಬಂದಿದೆ.


ಬಿಜೆಪಿ ಅಭ್ಯರ್ಥಿ ಅನಂತ್ಮಾಣಿ ವಿರುದ್ಧ ಅದೆಂಥ ತೂಫಾನ್ ಎದ್ದಿದೆಯೆಂದರೆ, ಕಲ್ಪಿತ ಮೋದಿ ಅಲೆಯೂ ಅದರಲ್ಲಿ ಕರಗಿಹೋಗಿದೆ! ಒಂದೂವರೆ ದಶಕ ಸಂಸದನಾಗಿದ್ದ ಈ ತಿರುಬೋಕಿ ಬುತ್ತಿ ಚೆಡ್ಡಿ ಪೋರ ಎಂಪಿಯಾಗುತ್ತಲೇ ಪಕ್ಕಾ ವ್ಯಾಪಾರಿ ಬುದ್ಧಿಯ ಪುಢಾರಿಯಾಗಿ ಹೋದ. ಆತ ಹಣ ಮಾಡಿದ್ದಕ್ಕಿಂತ ಹೆಚ್ಚಾಗಿ ಜನದ್ರೋಹಿಯಾದ. ಹೀಗಾಗಿ ಜನಸಾಮಾನ್ಯರಿಗಷ್ಟೇ ಅಲ್ಲ, ಸ್ವತಃ ಬಿಜೆಪಿಯ ಹಿರಿ-ಮರಿ ನಾಯಕರಿಗೆಲ್ಲ ತಲೆಬೇನೆಯಾದ. ಇವತ್ತು ಇವರೆಲ್ಲ ಸೇರಿ ಅನಂತ್ಮಾಣಿಯನ್ನು ಮನೆಗೆ ಮುಟ್ಟಿಸಿ ಬರುವ ಶಪಥ ಹಾಕಿ ಇಲೆಕ್ಷನ್ "ಕೆಲಸ" ಮಾಡುತ್ತಿದ್ದಾರೆ. ಪಾರ್ಲಿಮೆಂಟ್‌ಗೆ ಈತ ಹೋಗಿದ್ದು ಸಾಕು ಎಂದು ತೀರ್ಮಾನಿಸಿದ್ದಾರೆ.

ಖುದ್ದು ಅನಂತ್ಮಾಣಿಗೇ ತಾನು ಈ ಸಲ ಗೆಲ್ಲುವುದಿಲ್ಲ ಎಂಬುದು ತೀರಾ ಹಿಂದೆಯೇ ಖಾತ್ರಿಯಾಗಿಹೋಗಿತ್ತು. ಆದರೂ ಆತನಿಗೆ ಒಂದೇ ಒಂದು ಆಸೆಯಿತ್ತು. ಅದೇನೆಂದರೆ, ಅಕಸ್ಮಾತ್ ಕಾಂಗ್ರೆಸ್ ಟಿಕೆಟ್ ಮಂತ್ರಿ ದೇಶಪಾಂಡೆಗೆ "ಬೇಡಾದವನಿಗೆ" ಸಿಕ್ಕರೆ ಆತ ತನ್ನ "ಕೈ" ಬಿಡಲಾರ ಎಂದಾತ ತೇಲುಗಣ್ಣು-ಮೇಲುಗಣ್ಣು ಬಿಡುತ್ತಿದ್ದ. ಹಿಂದಿನ ಮೂರು ಇಲೆಕ್ಷನ್‌ನಲ್ಲಿ ಎದುರು ಪಾರ್ಟಿಯ "ಡಾನ್" ದೇಶಪಾಂಡೆಯ ಪಕ್ಷದ್ರೋಹದಿಂದಲೇ ಅನಂತ್ಮಾಣಿ ಸತತ ದಿಲ್ಲಿ ಫ್ಲೈಟ್ ಏರುತ್ತ ಬಂದಿದ್ದ. ಆದರೆ ಯಾವಾಗ ಕಾಂಗ್ರೆಸ್ ಕ್ಯಾಂಡಿಡೇಟೆಂದು ತನ್ನ "ಅನೈತಿಕ" ಮಿತ್ರ ದೇಶಪಾಂಡೆಯ ಕುಲೋದ್ಧಾರಕ ಪ್ರಶಾಂತ್ ದೇಶಪಾಂಡೆ ಎಂದು ಘೋಷಣೆ ಆಯ್ತೋ ಆ ಕ್ಷಣವೇ ಅನಂತ್ಮಾಣಿ ಅರಚಾಡುತ್ತ ಹತಾಶನಾಗಿಹೋದ; ಮಂಪರುಪರೀಕ್ಷೆಗೆ ಒಳಪಟ್ಟಂತೆ ತನ್ನ ಮತ್ತು ದೇಶಪಾಂಡೆ ನಡುವಿನ "ಅಕ್ರಮ ಸಂಬಂಧ"ದ ಕತೆ ತಂತಾನೆ ಪ್ರಚಾರ ಭಾಷಣಗಳಲ್ಲಿ ಬಿಚ್ಚಿಡುತ್ತಾ ಹೋದ.

ರಾಜಕಾರಣ ಆರಂಭಿಸಿದ ದಿನದಿಂದಲೂ ಈ ಸ್ವಯಂಘೋಷಿತ ಹಿಂದೂ ಉದ್ಧಾರಕ ಬಲಾಢ್ಯ ದೇಶಪಾಂಡೆ ಜೊತೆ ಫ್ರೆಂಡ್ಲಿ ರಾಜಕಾರಣ ಮಾಡುತ್ತಲೇ ಬಂದಾತ! ಇಲೆಕ್ಷನ್ ಹೊತ್ತಲ್ಲಂತೂ ಆತ ದೇಶಪಾಂಡೆ ಮೇಲೆ ಅಟ್ಯಾಕ್ ಮಾಡಿದ್ದ ನಿದರ್ಶನವೇ ಇಲ್ಲ. ಕಾಂಗ್ರೆಸ್‌ನ ಕಂಡ-ಕಂಡ ಛೋಟಾ ಬಡಾ ಲೀಡರ್‌ಗಳನ್ನೆಲ್ಲಾ ಬಾಯಿಗೆಬಂದಂತೆ ಬೈದು ಹಿಂದೂ ರಾಷ್ಟ್ರ ಕಟ್ಟುವ "ಕತೆ" ಹೇಳುತ್ತಿದ್ದ ಅನಂತ್ಮಾಣಿ ದೇಶಪಾಂಡೆ ಬಗ್ಗೆ ಬಾಯಿ ತೆರೆದದ್ದೇ ಇಲ್ಲ. ಆದರೆ ಈಗಾತ ದೇಶಪಾಂಡೆಯನ್ನು ಮೂದಲಿಸುತ್ತ-ಟೀಕಿಸುತ್ತ ಭಾಷಣ ಬಿಗಿಯುತ್ತಿದ್ದಾನೆ, ಅತೀ ಕೀಳುಭಾಷೆಯಿಂದ ಬೈದು ಮೋಕಳೀಕ್ ಆಗುತ್ತಿದ್ದಾನೆ. 35 ವರ್ಷದಲ್ಲಿ ದೇಶಪಾಂಡೆ ಜಿಲ್ಲೆಗೆ ನಯಾಪೈಸೆ ಪ್ರಯೋಜನದ ಕೆಲಸ-ಕಾಮಗಾರಿ-ಯೋಜನೆ ಮಾಡಿಲ್ಲವೆಂದಾತನಿಗೆ ಈಗ ಜ್ಞಾನೋದಯವಾಗಿದೆ!

ಅಷ್ಟೇ ಅಲ್ಲ, ಕಳೆದ ಮೂರು ಇಲೆಕ್ಷನ್‌ನಲ್ಲಿ ಕಾಂಗ್ರೆಸ್‌ನ ಮಾರ್ಗರೆಟ್ ಆಳ್ವರನ್ನು ಸೋಲಿಸಿದ್ದೇ ದೇಶಪಾಂಡೆಯೆಂಬ "ಸಂಶೋಧನೆ" ಕೂಡ ಆತ ಕಂಡುಹಿಡಿದಿದ್ದಾನೆ. ದೇಶಪಾಂಡೆ ಪಕ್ಷದ್ರೋಹಿ ಎಂದಿದ್ದಾನೆ. ಇದು ಇಡೀ ಕ್ಷೇತ್ರಕ್ಕೇ ಗೊತ್ತಿರುವ ಸತ್ಯ. ಈ "ಸತ್ಯ"ದಿಂದ ಮಾಣಿಗೆ ಲಾಭವಾಗಿತ್ತು. ದೇಶಪಾಂಡೆಯ ಕೈಚಳಕವೇ ನಾಲಾಯಕ್ ಮಾಣಿಯನ್ನು ಮತ್ತೆ-ಮತ್ತೆ ಪಾರ್ಲಿಮೆಂಟ್ ಮೆಂಬರ್ ಮಾಡಿತ್ತು. ಹೀಗಾಗಿ ಮಾಣಿ ಸದಾ ಎದುರು ಪಾರ್ಟಿಯ ದೊರೆಗೆ ಡೊಗ್ಗು ಸಲಾಮು ಹಾಕುತ್ತ ಹಿಂದೂ ದೇಶ ಕಟ್ಟುತ್ತಿದ್ದ!! ಈ ಸಲ ದೇಶಪಾಂಡೆಯ ನೆರವು ತನಗೆ ಸಿಗದೆಂಬುದು ಪಕ್ಕಾ ಆಗಿರುವುದರಿಂದ ಮಾಣಿಯ ತಲೆ ಕೆಟ್ಟುಹೋಗಿದೆ. "ಹಳಿಯಾಳದಲ್ಲಿ ಆಕಳು ಕರು ಹಾಕಿದರೂ ಅದು ತನ್ನಿಂದಲೇ ಅಂತಾನೆ ದೇಶಪಾಂಡೆ...." ಎಂದು ಕಿಚಾಯಿಸಿರುವ ಅನಂತ್ಮಾಣಿಗೆ ತಾನಾಡಿದ ಮಾತಿನ ಅರ್ಥ ಆಗಿದೆಯಾ? ಗೋವನ್ನು ಪರಮಪೂಜ್ಯವೆಂದು ಉದ್ದುದ್ದ ವ್ಯಾಖ್ಯಾನ ಕೊಟ್ಟು ಹಿಂದೂ ಓಟಿನ ಬುಟ್ಟಿಗೆ ಕೈಹಾಕುತ್ತಿದ್ದ ಈ "ಸಂಸ್ಕಾರವಂತ" ಹಾರವನ ನೀಚ ಮಾತುಗಾರಿಕೆ ಸಂಘಪರಿವಾರಿಗಳನ್ನೇ ಮುಜುಗರಕ್ಕೀಡು ಮಾಡಿದೆ! ಅಲ್ಲಿಗೆ ಅನಂತನ ಅಸಲೀ ಗೋಭಕ್ತಿ-ಹಿಂದೂ ನಿಷ್ಠೆಯೂ ಜಗಜ್ಜಾಹೀರಾಗಿದೆ.


ಶಿವಾನಂದ ನಾಯ್ಕ್


ಆರ್.ವಿ. ದೇಶಪಾಂಡೆ


ಪ್ರಶಾಂತ್ ದೇಶಪಾಂಡೆ

ಅಪ್ಪ ಆರ್.ವಿ. ದೇಶಪಾಂಡೆ ಮೇಲೆ ಸತತ ದಾಳಿ ಮಾಡುತ್ತಿರುವ ಅನಂತ್ಮಾಣಿ ಆತನ ಮಗ-ಕಾಂಗ್ರೆಸ್ ಕ್ಯಾಂಡಿಡೇಟ್ ಪ್ರಶಾಂತನ ಮೇಲೂ ಹರಿಹಾಯ್ದಿರುವುದು ಮೋಜಾಗಿದೆ. "ಪ್ರಶಾಂತ ಅಪ್ಪನ ಬಲದಿಂದ ಅಖಾಡಕ್ಕೆ ಧುಮುಕಿರುವ ಅಮೂಲ್ ಬೇಬಿ..." ಎಂದು ಜರೆದ ಅನಂತ್ಮಾಣಿ ಎದುರಾಳಿ ಪ್ರಶಾಂತನಿಂದ ಬಂದ ಬಾಣಕ್ಕೆ ತತ್ತರಿಸಿಹೋಗಿದ್ದಾನೆ. "ನಾನು ಅಮೂಲ್ ಬೇಬಿಯಾದರೆ... ಆ ಅನಂತ್ ಹೆಗ್ಡೆಯೇನು ಕ್ರಿಮಿನಲ್ ಬೇಬಿಯಾ" ಎಂದು ನ್ಯೂಯಾರ್ಕ್‌ನ ಮಾಜಿ ಅಟಾರ್ನಿ ಪ್ರಶಾಂತ್ ತಿರುಗೇಟು ಕೊಟ್ಟೇಬಿಟ್ಟ! ಹಾರ್ವರ್ಡ್‌ನ ಕಾನೂನು ವಿವಿಯಲ್ಲಿ ಲಾ ಪದವಿ ಪಡೆದಿರುವ ಪ್ರಶಾಂತ್ ಅನಂತ್ಮಾಣಿಯ ಪೂರ್ವಾಶ್ರಮದ ಕ್ರಿಮಿನಲ್ ಕಿತಾಪತಿಗಳು, ಅದಕ್ಕಾಗಿ ಆತ ಹಾಕಿಸಿಕೊಂಡ ಸರಣಿ ಕ್ರಿಮಿನಲ್ ಕೇಸ್ ಪುರಾಣ ಮತದಾರರಿಗೆ ನೆನಪಿಸಿದಂತಾಗಿದೆ.

ಹಿಂದೂಗಳಷ್ಟೇ ತನಗೆ ಮತ ನೀಡಿದರೆ ಸಾಕೆಂದು ಬಡಬಡಿಸುತ್ತಿರುವ ಅನಂತ್ಮಾಣಿಗೆ ಈ ಬಾರಿ ಮಾಜಿ ಮಾಡಲು ಹಿಂದೂಗಳೇ ದೃಢ ನಿರ್ಧಾರ ಮಾಡಿದ್ದಾರೆ. ಕಳೆದ ಬಾರಿ ಸೋತೇ ಹೋಗಿದ್ದ ಅನಂತನನ್ನು ದಡ ತಲುಪಿಸಿದ್ದು ಖಾನಾಪುರ-ಕಿತ್ತೂರು ಭಾಗದಲ್ಲಿದ್ದ ಲಿಂಗಾಯತರು. ಯಡ್ಡಿ ಮುಖ ನೋಡಿ ಬಿಜೆಪಿಗೆ ಮತ ಹಾಕಿದ್ದ ಲಿಂಗಾಯತರಿಗೆ ಈ ಬಾರಿ ಈ ಅನಂತ್ ಮಾಣಿ ಮುಖ ಕಂಡರಾಗುತ್ತಿಲ್ಲ. ಯಡ್ಡಿಯನ್ನು ಎದುರು ಹಾಕಿಕೊಂಡಿರುವುದೇ ಮಾಣಿಗೆ ಮುಳುವಾಗಿದೆ. ಯಡ್ಡಿ ಸ್ವ-ಜಾತಿ ಬಂಧುಗಳಿಗೆ ಅನಂತ್ಮಾಣಿಗೆ ಮತ ಕೊಡದಂತೆ ರಹಸ್ಯ ಸಂದೇಶ ರವಾನಿಸಿದ್ದಾರಂತೆ. ಕ್ಷೇತ್ರದಲ್ಲಿರುವ ಒಂದೂ ಕಾಲು ಲಕ್ಷದಷ್ಟು ಲಿಂಗಾಯತರು ಈ ಬಾರಿ ಯಡ್ಡಿಯ ಮಾಜಿ ಶಿಷ್ಯ-ಜೆಡಿಎಸ್ ಅಭ್ಯರ್ಥಿ ಶಿವಾನಂದ ನಾಯ್ಕ್‌ನತ್ತ ಕಣ್ಣು ಹಾಯಿಸುತ್ತಿದ್ದಾರೆಂಬ ಸುದ್ದಿ ಹಬ್ಬಿದೆ.

ಬಿಜೆಪಿ ಶಾಸಕ-ಮಾಜಿ ಮಂತ್ರಿ ಕಾಗೇರಿ, ಮಾಜಿ ಶಾಸಕ (ಮುಂಡಗೋಡ) ವಿ.ಎಸ್. ಪಾಟೀಲ್ ಮತ್ತು ಆರೆಸ್ಸೆಸ್ ಸೂತ್ರಧಾರರೆಲ್ಲ ಒಂದಾಗಿ ಮಾಣಿಗೆ ಮದ್ದರೆಯುತ್ತಿದ್ದಾರೆ! ಈತನ ಭಾಷಣ ವೈಖರಿಗೆ ಸ್ವತಃ ಬಿಜೆಪಿಗರೇ ಬೆಚ್ಚಿಬಿದ್ದಿದ್ದಾರೆ. ಎದುರಾಳಿ ಪ್ರಶಾಂತ್ ದೇಶಪಾಂಡೆ, ಆತನದೇ ಮಾಜಿ ಹಿಂಬಾಲಕ-ಜೆಡಿಎಸ್ ಅಭ್ಯರ್ಥಿ ಶಿವಾನಂದ ನಾಯ್ಕ್‌ರನ್ನು ಚುಚ್ಚುವ ಭರದಲ್ಲಿ ಆತ ಸ್ವ-ಪಕ್ಷದ ಕಾಗೇರಿ-ಪಾಟೀಲ್-ಸಂಘಪರಿವಾರದ ಸರದಾರರನ್ನು ಟೀಕಿಸುತ್ತಿದ್ದಾನೆ. ಹಾಗೆ ನೋಡಿದರೆ ಮಾಣಿ ಮಾತುಗಾರಿಕೆಯಲ್ಲಿ ಶತ್ರುಗಳಿಗಿಂತ ಹೆಚ್ಚು ಸ್ವ-ಪಕ್ಷದವರ ಮೂದಲಿಕೆ-ಬೈಗುಳ ಇರುತ್ತದೆ. ಈ ಅಂಶಗಳೆಲ್ಲ ಕರ್ಮಗೇಡಿತನದಿಂದ ಜನರ ತಾತ್ಸಾರಕ್ಕೆ ತುತ್ತಾಗಿರುವ ಅನಂತನ ಅವಸಾನವನ್ನು ಖಾತ್ರಿಪಡಿಸುವಂತಿವೆ.....

ಈ ಸೈತಾನ ಈ ಬಾರಿ ತೊಲಗುವುದಂತೂ ಶತಸಿದ್ಧ. ಹಾಗಾದರೆ ಯಾರು ದಿಲ್ಲಿಗೆ ಹಾರಬಹುದು? ಸದ್ಯದ ಪರಿಸ್ಥಿತಿಯಲ್ಲಿ ಮಾಣಿ ಮೂರನೇ ಸ್ಥಾನದಲ್ಲಿದ್ದಾನೆ. ಮೊದಲ ಸ್ಥಾನಕ್ಕಾಗಿ ಕಾಂಗ್ರೆಸ್‌ನ ಪ್ರಶಾಂತ್ ಮತ್ತು ಜೆಡಿಎಸ್‌ನ ಶಿವಾನಂದ್ ನಡುವೆ ಹೋರಾಟ ನಡೆಯುತ್ತಿದೆ. ಹೇಗೆ ಬಿಜೆಪಿಯ ಅನಂತ್ಮಾಣಿ ಮೋದಿ ಮುಖವಾಡ ತೊಟ್ಟುಕೊಂಡಿದ್ದಾನೋ ಹಾಗೆ ಕಾಂಗ್ರೆಸ್‌ನ ಪ್ರಶಾಂತ್ ಅಪ್ಪ ದೇಶಪಾಂಡೆಯ ಹೆಸರಲ್ಲಿ ಓಟು ಕೇಳುತ್ತಿದ್ದಾನೆ. ಈ ಇಬ್ಬರ ನಡುವೆ ನಿಂತಿರುವ ಜೆಡಿಎಸ್‌ನ ಶಿವಾನಂದ ನಾಯ್ಕ್ ಸ್ವಂತ ವರ್ಚಸ್ಸು-ಹಿಂದುಳಿದವರ ಆತ್ಮಾಭಿಮಾನ ಈಶ್ಯೂ ಮೇಲೆ ಮತ ಬೇಡುತ್ತಿದ್ದಾರೆ. ಹಾಗೆ ನೋಡಿದರೆ ಈ ಶಿವಾನಂದ್ ನಾಯ್ಕ್, ಮಾಣಿ-ಬೇಬಿಗಳಿಗಿಂತ ಬೆಟರ್ ಕ್ಯಾಂಡಿಡೇಟ್.

ಪ್ರಶಾಂತ ಅತೀ ಅಲ್ಪಸಂಖ್ಯಾತ ಕೊಂಕಣಿ ಬ್ರಾಹ್ಮಣ ಸಮುದಾಯದವನಾದರೆ, ನಾಯ್ಕ್ ಕ್ಷೇತ್ರದಲ್ಲಿ ಸರಿಸುಮಾರು 1,50,000 ಮತವಿರುವ ದೀವರ (ಈಡಿಗ) ಧೀರ. ಬಿಜೆಪಿ ಓಟರ್‍ಸ್ ಆಗಿದ್ದ ಕೊಂಕಣಿಗರು ಈ ಬಾರಿ "ಹಮ್ಗೇಲೋ" ಪ್ರಶಾಂತ ಪರ ತನು-ಮನ-ಧನದ ಸಹಕಾರ ಕೊಡಲಿದ್ದಾರೆ. ದೀವರು ಸಾರಾಸಗಟಾಗಿ ನಾಯ್ಕ್ ಪರ ನಿಲ್ಲಲಿದ್ದಾರೆ. ಜೊತೆಗೆ ಮ್ಯಾಗಿ V/s ದೇಶಪಾಂಡೆ ರಾಜಕಾರಣದ ಪರಿಣಾಮವಾಗಿ ಕ್ರಿಶ್ಚಿಯನ್ನರು ಜೆಡಿಎಸ್‌ಗೆ ಒಲಿವ ಸಂಕೇತಗಳು ಕಾಣಿಸುತ್ತಿವೆ. 1,50,000 ಮತದ ಬ್ಯಾಂಕಿನ ಬ್ರಾಹ್ಮಣರು ಏಕಗಂಟಿನಲ್ಲಿ ಬಿಜೆಪಿಗೆ ಬೆಂಬಲಿಸಲಿದ್ದಾರೆ. ಕ್ಯಾಂಡಿಡೇಟ್ ಮಾಣಿ ಮೇಲೆ ಬೇಸರವಿದ್ದರೂ ಜನಿವಾರ ಆಧಾರದ ಮೇಲೆ ಬಿಜೆಪಿಗೆ ಈ ಸಮುದಾಯ ಓಟ್ ಮಾಡುತ್ತದೆ. ಹಾಗಾಗಿ ಜೆಡಿಎಸ್ ಗೆಲ್ಲಬೇಕೆಂದರೆ, ಹತ್ತಿರತ್ತಿರ 3 ಲಕ್ಷ ಮತವಿರುವ ಮುಸ್ಲಿಮ್‌ರ ಒಲಿಸುವ ಜರೂರತ್ತಿದೆ.

ಹಾಗೆಯೇ ಇತರ ಹಿಂದುಳಿದವರನ್ನು ಜೆಡಿಎಸ್ ಸೆಳೆಯುವುದು ಅಷ್ಟು ಸುಲಭವಲ್ಲ. ಏಕೆಂದರೆ, ಮೊದಲು ಬ್ರಾಹ್ಮಣರನ್ನು ಹೇಗೆ ಹಿಂದುಳಿದವರು ವಿರೋಧಿಸುತ್ತಿದ್ದರೋ, ಹಾಗೇ ಇವತ್ತು ಜಿಲ್ಲೆಯ ದೀವರನ್ನು ಇತರ ಹಿಂದುಳಿದವರು ಅಪನಂಬಿಕೆಯಿಂದ ನೋಡುತ್ತಿದ್ದಾರೆ. ದೀವರ ಧೀರರು ಗೆದ್ದರೆ ತಮಗೆ ಅಪಾಯ ಎಂಬ ಭಾವನೆ ಅವರಲ್ಲಿ ಮೂಡಿದೆ. ಇದನ್ನು ಶಿವಾನಂದ್ ನಾಯ್ಕ್ ಅದ್ಹೇಗೆ ನಿಭಾಯಿಸುತ್ತಾರೆ, ಓಬಿಸಿಗಳನ್ನು ಹೇಗೆ ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಾರೆಂಬುದರ ಮೇಲೆ ಜೆಡಿಎಸ್ ಗೆಲುವು ಅವಲಂಬಿಸಿದೆ. ನಾಯ್ಕ್ ಮತ್ತವರ ಜೆಡಿಎಸ್‌ನ ಬ್ಯಾಕ್‌ವರ್ಡ್ಸ್ ಸೋಕಾಲ್ಡ್ ಸರದಾರರು ಹಾಕುವ ಲೆಕ್ಕಾಚಾರ ಹೆಚ್ಚುಕಮ್ಮಿಯಾದರೆ ದೇಶಪಾಂಡೆಗೆ ದಿಗ್ವಿಜಯ ಆಗುತ್ತದೆ.

ಇದು ದೇಶಪಾಂಡೆಗೆ ಪ್ರತಿಷ್ಠೆಯ ಸಮರ. ಕುಲತಿಲಕನ ಗೆಲ್ಲಿಸಲೇಬೇಕಾದ ಸವಾಲು. ಈ ಯುದ್ಧದಲ್ಲಿ ದೇಶಪಾಂಡೆ ಬಿಜೆಪಿಯ ಮಾಣಿಗಿಂತಲೂ ಜೆಡಿಎಸ್‌ನ ಹುರಿಯಾಳು ನಾಯ್ಕ್‌ರನ್ನು ಗಂಭೀರವಾಗಿ ಪರಿಗಣಿಸಿದ್ದಾರೆ. ಏಕೆಂದರೆ, ಒಂದು ನಾಯ್ಕ್ ವರ್ಗ ಸಂಘರ್ಷದ ಆಧಾರದಲ್ಲಿ ಹಿಂದುಳಿದವರ ಜಾಗೃತಗೊಳಿಸುವ ಸ್ಟ್ರಟಜಿ ಮಾಡುತ್ತಿರುವುದು; ಮತ್ತೊಂದು ನಾಯ್ಕ್ ಬೆನ್ನಿಗೆ ತನ್ನ ಪರಮ ಶತ್ರು ಹಳಿಯಾಳದ ಮಾಜಿ ಶಾಸಕ-ರಾಜ್ಯ ಜೆಡಿಎಸ್‌ನ ಕಾರ್ಯಾಧ್ಯಕ್ಷ ಸುನಿಲ್ ಹೆಗಡೆ ನಿಂತು ಹೂಂಕರಿಸುತ್ತಿರುವುದು. ಪಕ್ಷದೊಳಗಿನ ವೈರಿಣಿ ಮ್ಯಾಗಿ ಕುಟುಂಬವನ್ನೂ ಆತ ಜಿಲ್ಲೆಯಿಂದ ಓಡಿಸಬೇಕಿದೆ. ಹಾಗಾಗಿ ದೇಶಪಾಂಡೆ ಖತರ್‌ನಾಕ್ ಸ್ಕೆಚ್‌ಗಳು ಹೆಣೆದಿದ್ದಾರೆ. ಆತನಿಗೆ ಜಿಲ್ಲೆಯ ಉದ್ದಗಲದ ರಾಜಕೀಯ ಪಿಚ್‌ಗಳು ಗೊತ್ತು. ಎಲ್ಲಿ ಹಣ ಹಂಚಬೇಕು, ಎಲ್ಲೆಲ್ಲಿ ಹೆಂಡ ಇಳಿಸಬೇಕು; ಯಾರಿಗೆ ಬಂಗಾರದ ತಾಳಿ-ಉಂಗುರ ಕೊಡಬೇಕೆಂಬುದು ಗೊತ್ತು. ಕಾಂಗ್ರೆಸ್ ಪಕ್ಷದ್ದಷ್ಟೇ ಅಲ್ಲ, ಎದುರಾಳಿ ಪಾರ್ಟಿಗಳ ಲೀಡರ್‌ಗಳ "ರೇಟ್" ಕೂಡ ಪಕ್ಕಾ ಗೊತ್ತಿದೆ. ಆತ ಈಗಾಗಲೇ ಜೆಡಿಎಸ್-ಬಿಜೆಪಿಯ ಮುಂಚೂಣಿ ಮಹಾಮಹಿಮರ ಖರೀದಿ ಶುರು ಹಚ್ಚಿದ್ದಾರೆ. ಒಂದೂಮುಕ್ಕಾಲು ಲಕ್ಷದಷ್ಟಿರುವ ಮರಾಠರ ಮೇಲೆ ದೃಷ್ಟಿ ಕೇಂದ್ರೀಕರಿಸಿರುವ ದೇಶಪಾಂಡೆ ಹಣದ ಹೊಳೆಯೇ ಹರಿಸುತ್ತಿದ್ದಾರೆ.

ಜಾತಿ ಲೆಕ್ಕಾಚಾರ, ಹಿಂದುಳಿದವರು-ಮುಂದುವರಿದವರ ಸಮೀಕರಣ, ದುಡ್ಡಿನ ಶಕ್ತಿ, ಬಿಜೆಪಿ ದೌರ್ಬಲ್ಯ ಎಲ್ಲ ಸೇರಿಸಿ ತಾಳೆ ಹಾಕಿದರೆ ಜೆಡಿಎಸ್ V/s ಕಾಂಗ್ರೆಸ್ ಕಾದಾಟ ನಡೆಯುತ್ತಿರುವುದು ಕಾಣಿಸುತ್ತದೆ. ಈಗ ಹಳ್ಳಿಯಲ್ಲಿ ಸರ್ಕಸ್ ಮಾಡುತ್ತಿರುವ ನಾಯ್ಕ್ ಮತ್ತು ದೇಶಪಾಂಡೆ ಇಬ್ಬರಲ್ಲಿ ಯಾರು ದಿಲ್ಲಿ ಸೇರಬಲ್ಲರು? ಅಖಾಡದಲ್ಲಿನ ಜಟ್ಟಿಗಳ ಬಲ ಸ್ಪಷ್ಟವಾಗಲು ಇನ್ನೊಂದು ವಾರವಾದರೂ ಬೇಕು!

● ನಹುಷ

ಉಡುಪಿ-ಚಿಕ್ಕಮಗಳೂರು: ರಣಕಣದಲ್ಲಿ ಶೋಭಕ್ಕನ ಝಣಝಣ!



ಶೋಭಾ ಕರಂದ್ಲಾಜೆ


ಉಡುಪಿ-ಚಿಕ್ಕಮಗಳೂರು ಲೋಕಸಭಾ ರಣಾರಂಗದಲ್ಲೀಗ ಒಂದೇಸಮನೆ ಕದನೋನ್ಮಾದ ಏರುತ್ತಿದೆ! ಕಾಂಗ್ರೆಸ್‌ನ ಜನಪರ ಕೆಲಸಗಾರ-ಅತ್ಯುತ್ತಮ ಸಂಸದೀಯ ಪಟು ಜಯಪ್ರಕಾಶ್ ಹೆಗ್ಡೆ ತಮ್ಮ ಸರಳ-ಸಜ್ಜನಿಕೆ-ಕರ್ತವ್ಯಪ್ರಜ್ಞೆಯ ಪ್ರಚಾರ ವೈಖರಿಯಿಂದ ಜನಮನಕ್ಕೆ ಹತ್ತಿರತ್ತಿರ ಆಗುತ್ತ ಸಾಗಿದ್ದಾರೆ. ಇದಕ್ಕೆ ಪ್ರತಿಯಾಗಿ 'ಯಜಮಾನ' ಯಡ್ಡಿ ಸಾಹೇಬನ ಪ್ರತಿಷ್ಠೆಯನ್ನೇ ಪಣವಾಗಿಟ್ಟುಕೊಂಡು ಕ್ಷೇತ್ರಕ್ಕೆ ಎಂಟ್ರಿ ಹೊಡೆದಿರುವ ಬಿಜೆಪಿ ಉಮೇದಾರಿಣಿ ಶೋಭಾ ಕರಂದ್ಲಾಜೆ ಸಂಘ ಪರಿವಾರದ 'ಮೋದಿತ್ವ'ಕ್ಕೆ ತನ್ನ ಕಪ್ಪು ಕಾಸಿಂದ ಸಾಣೆ ಹಾಕುತ್ತ ಆರ್ಭಟಿಸುತ್ತಿದ್ದಾರೆ. ಇವರಿಬ್ಬರ ನಡುವೆ ನಿಂತಿರುವ ಜೆಡಿಎಸ್‌ನ ಹರಕುಬಾಯಿ ಧನಂಜಯ್‌ಕುಮಾರ್ ಮತ್ತು ಸಿಪಿಐಎಂನ ಹೋರಾಟಗಾರ ವಿಜಯಕುಮಾರ್ ಕಿಂಗ್‌ಮೇಕರ್ ಆಗುವ ಸಂಕೇತ ಬಿತ್ತರಿಸುತ್ತಿದ್ದಾರೆ...


ಕರಾವಳಿ-ಮಲೆನಾಡು ಸ್ಯಾಂಡ್‌ವಿಚ್‌ನಂಥ ಈ ಕ್ಷೇತ್ರದಲ್ಲಿ ಮೋದಿ ಮೇನಿಯಾ ದಿನಗಳೆದಂತೆ ಕಮ್ಮಿಯಾಗುತ್ತಿದೆ. ಇದನ್ನು ಅರ್ಥಮಾಡಿಕೊಂಡಿರುವ ಯಡ್ಡಿ ಪಟಾಲಮ್ ರೊಕ್ಕಾಸ್ತ್ರ ಪ್ರಯೋಗಕ್ಕೆ ಸ್ಕೆಚ್ ಹಾಕಿಕೊಂಡಿದೆ. ಶೋಭಾ ಬಿಜೆಪಿ ಯುಗದಲ್ಲಿ ಕೂಡಿಸಿಟ್ಟ ಕೊಪ್ಪರಿಗೆ ಕಪ್ಪು ಕಾಸು ಧಾರಾಳವಾಗೇ ಹರಿಸಲಾರಂಭಿಸಿದ್ದಾರೆ. ಇಡೀ ಕ್ಷೇತ್ರದ ಯಾವ ಮೂಲೆಯಲ್ಲಿ ನಿಂತರೂ ಶೋಭಾಳ ಕುರುಡು ಕಾಂಚಾಣದ ಕುಣಿತ ಕಾಣಿಸುತ್ತದೆ- ಕೇಳಿಸುತ್ತದೆ. ವಲಸಿಗಳು-ಅರೆಭಾಷೆ ಗೌಡತಿ ಎಂಬ ಮೈನಸ್ ಅಂಶದಲ್ಲಿ ಕಳೆಗುಂದುತ್ತಿರುವ ಶೋಭಾಗೆ ಸಿಕ್ಕಿರುವ ಒಂದೇ ಒಂದು ಅಸ್ತ್ರ ಎಂದರೆ 'ಅಡಿಕೆ ನಿಷೇಧ'ದ ಹುಸಿ ಗುಮ್ಮ. ವಾಸ್ತವವಾಗಿ ಈ ಅಡಿಕೆ ನಿಷೇಧ ಎನ್ನುವುದು ಬಿಜೆಪಿ ಮಾಲಿಕತ್ವದ ಎನ್‌ಡಿಎ ಸರ್ಕಾರದ ಪಾತಕವೇ ಹೊರತು ಕಾಂಗ್ರೆಸ್‌ನ ಆಡಳಿತದ್ದಲ್ಲ.

ಅಡಿಕೆ ಬೆಳೆಗಾರರ ನಿಷೇಧ ಸಮಸ್ಯೆ ಹೋಗಲಾಡಿಸಲು ಸಂಸದ ಜಯಪ್ರಕಾಶ್ ಹೆಗ್ಡೆಯಷ್ಟು ಪ್ರಾಮಾಣಿಕತೆ-ಬದ್ಧತೆಯಿಂದ ಕೆಲಸ ಮಾಡಿದ ರಾಜಕಾರಣಿ ಮತ್ತೊಬ್ಬನಿಲ್ಲ. ಆದರೂ ಈ ಅಡಿಕೆ ಮುಳುಗುವ ಶೋಭಕ್ಕನಿಗೆ ಹುಲ್ಲು ಕಡ್ಡಿಯಂತೆ ಸಿಕ್ಕಿರುವುದು ಮೋಜಾಗಿದೆ. ಮೋದಿ ಅಲೆಯಾಗಲಿ-ಹಿಂದೂತ್ವದ ಹವೆಯಾಗಲಿ ಈ ಸಲ ಕರಾವಳಿ-ಮಲೆನಾಡು ಎರಡೂ ಕಡೆ ಬಿಜೆಪಿಯ ಭೂಪರು ನಿರೀಕ್ಷಿಸಿದ ಮಟ್ಟದಲ್ಲಿ ಏಳುತ್ತಿಲ್ಲ. ಸುಮಾರು 450 ಕಿ.ಮೀ. ನಷ್ಟು ವಿಸ್ತಾರವಾದ ಉಡುಪಿ-ಚಿಕ್ಕಮಗಳೂರು ಕ್ಷೇತ್ರ ಸುತ್ತು ಹಾಕುವುದು ಆಗಂತುಕಳಾದ ಶೋಭಾರಿಂದ ಸಾಧ್ಯವಾಗುತ್ತಿಲ್ಲ. ಸಿ.ಟಿ. ರವಿ, ಸುನಿಲ್‌ಕುಮಾರ್‌ನಂಥ ಸ್ವಪಕ್ಷದ ಹಿತಶತ್ರುಗಳ ನಂಬುವಂತಿಲ್ಲ. ಈ ಜೋಡಿಯ ಅಡ್ಡೆಯ ಚಟ ವಿದೂಷಕನಂತಿರುವ ಉಡುಪಿಯ ಮಾಜಿ ಶಾಸಕ ರಘುಪತಿ ಭಟ್ಟನೂ ಒಳಗೊಳಗೇ ಬತ್ತಿ ಇಡುತ್ತಿದ್ದಾನೆ. ಇದು ಶೋಭಾ-ಯಡ್ಡಿಗೆ ಕಂಗೆಡಿಸಿದೆ.

ಕುಂದಾಪುರದಲ್ಲಿ ಬಿಜೆಪಿ ಸಂಸ್ಕೃತಿಯ ಪಕ್ಷೇತರ ಶಾಸಕ ಹಾಲಾಡಿ ಶ್ರೀನಿವಾಸ್ ಶೆಟ್ಟಿ ತಟಸ್ಥ ತಾನೆಂದು ಹೇಳುತ್ತಿದ್ದಾರೆ. ಹಾಗಂತ ಆತ ತನ್ನ ಹಿಂಬಾಲಕರನ್ನೆಲ್ಲ ಬಿಜೆಪಿಗೆ ಸೇರಬೇಡಿ ಎಂದೇನೂ ಹೇಳಿಲ್ಲ. ಹಾಲಾಡಿಗೆ ಗೊತ್ತು ತಾನು ಬಿಜೆಪಿ ಸೇರಿದರೂ ಕುಂದಾಪುರದಲ್ಲಿ ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆಗೇ ಸ್ವ-ಜಾತಿ ಬಂಟರು, ಬೆಸ್ತರು ಮತ್ತಿತರ ಜಾತಿ ಮತ ಹೋಗೇಹೋಗುತ್ತದೆಂದು. ಹಾಗಾಗಿ ರಾಜಕೀಯದ 'ಸಂಧ್ಯಾ ಕಾಲ'ದಲ್ಲಿ ಇರುವ ಹಾಲಾಡಿ ಹಾಗೇ ಸುಮ್ಮನಿದ್ದಾರೆ. ಆತನಿಗೆ ತನ್ನ ಟಿಂಬರ್-ಲ್ಯಾಂಡ್ ಬಿಜಿನೆಸ್‌ಗೆ ಸಮಯ ಸಿಗುತ್ತಿಲ್ಲ. ಹೀಗಿರುವಾಗ ಹೆಸರು ಕೆಡಿಸಿಕೊಂಡಿರುವ ಬಿಜೆಪಿ ಪರ ಕೆಲಸ ಮಾಡಲು ಅಥವಾ ಮನಸ್ಸು ಒಪ್ಪದ ಕಾಂಗ್ರೆಸ್‌ಗೆ ನೆರವಾಗಲು ಆತ ಮುಂದಾಗುವ ಪ್ರಶ್ನೆಯೇ ಇಲ್ಲ, ಬಿಡಿ. ಕಾಪುನಲ್ಲಿ ಕೆಲಸಕ್ಕೆ ಬಾರದ ವಸಂತ ಸಾಲಿಯಾನ್ ಬಿಜೆಪಿ ಹೊಕ್ಕಿದ್ದಾರಾದರೂ ಅದರಿಂದ ಶೋಭಕ್ಕನಿಗೆ ಲಾಭಕ್ಕಿಂತ ಹಾನಿಯೇ ಜಾಸ್ತಿ.


ಧನಂಜಯ್ ಕುಮಾರ್


ಜಯಪ್ರಕಾಶ್ ಹೆಗ್ಡೆ


ಯಡಿಯೂರಪ್ಪ

ಇಷ್ಟಾದರೂ ಬಿಜೆಪಿಗಳ ಲೆಕ್ಕಾಚಾರ ನಿಂತಿರುವುದು ಮಲೆನಾಡಲ್ಲಿ ಸುಮಾರು ಎರಡು ಲಕ್ಷದಷ್ಟಿರುವ ಲಿಂಗಾಯತರ ಮತದ ಆಧಾರದಲ್ಲಿ! ಯಡ್ಡಿ ಬೆನ್ನಿಗೆ ನಿಂತಿರುವ ಬಾಳೆಹೊನ್ನೂರು ಮಠದ ಜಾತಿವಾದಿ ಸ್ವಾಮಿ ಪವಾಡ ಶೋಭಕ್ಕ ನೆಚ್ಚಿಕೊಂಡಿದ್ದಾರೆ. ಇದು ಆಕೆಗೆ ಸ್ವಲ್ಪ ಸಮಾಧಾನ ನೀಡಿದರೂ ತಾನು ಒಕ್ಕಲಿಗಲೆಂಬ ಟ್ರಂಪ್‌ಕಾರ್ಡ್ ಎಸೆದರೆ ಅದು ತಿರುಗಿ ಮುಖಕ್ಕೆ ಹೊಡೆಯುವ ಭಯದಲ್ಲಿದ್ದಾರೆ. ಏಕೆಂದರೆ ಈ ಅರೆಭಾಷೆ ಗೌಡತಿಯನ್ನು ನಂಬುವ ಸ್ಥಿತಿಯಲ್ಲಿ ಮಲೆನಾಡಿನ ಗೌಡರಿಲ್ಲ. ಇದೇ ಅರೆಭಾಷೆ ಗೌಡನಾದ ಡಿ.ವಿ. ಸದಾನಂದಗೌಡ ಕೈಕೊಟ್ಟಿದ್ದು ಮಲೆನಾಡ ಒಕ್ಕಲಿಗರಿನ್ನೂ ಮರೆತಿಲ್ಲ. ಶೃಂಗೇರಿಯ ಶಾಸಕ ಜೀವರಾಜ್ ಒಬ್ಬರ ಬಿಟ್ಟರೆ ಶೋಭಕ್ಕನ ಗ್ಯಾಂಗಿಗೆ ಇಡೀ ಕ್ಷೇತ್ರದಲ್ಲಿ ನಂಬಿಗಸ್ಥ ನಾಯಕರ್‍ಯಾರೂ ಸಿಗುತ್ತಿಲ್ಲ.

ಶೋಭಾ-ಯಡ್ಡಿ ಜೋಡಿಯ ಸಂಸತ್ ಯಾತ್ರೆಯ ಕನಸಿಗೆ ದೊಡ್ಡ ಕೊಳ್ಳಿಯಾಗಿರುವುದು ಅವರ ಕೆಜೆಪಿ ಸಹಪಾಠಿ ಧನಂಜಯ್ ಕುಮಾರ್! ಈತ ಬಲಗೊಂಡಂತೆ ಶೋಭಾ ಸೊರಗುವುದು ಖಂಡಿತ. ಈತ ದೇವೇಗೌಡರ ಹೆಸರಲ್ಲಿ ಒಕ್ಕಲಿಗರ ಒಂದಿಷ್ಟು ಮತ ಪಡೆದರೆ, ಬಿಜೆಪಿಗೆ ಮುಡಿಪಾಗಿದ್ದ ಸ್ವ-ಜಾತಿ ಜೈನರ ಮತ ಸಾರಾಸಗಟಾಗಿ ಬಾಚುವ ಸಾಧ್ಯತೆಯಿದೆ. ಇದು ಕಾಂಗ್ರೆಸ್‌ನ ಜಯಪ್ರಕಾಶ್ ಹೆಗ್ಡೆಗೆ ಹೆಲ್ಪ್ ಮಾಡಲಿದೆ. ಕರಾವಳಿ ಭಾಗದಲ್ಲಿ ಜೆಪಿಯೇ ಮುಂದಿದ್ದಾರೆ. ಮಲೆನಾಡಲ್ಲಿ ಸದ್ಯಕ್ಕೆ ಸಮಬಲ ಹದಗೊಂಡಿದೆ. ಇಷ್ಟಾದರೂ ಇಡೀ ಕ್ಷೇತ್ರದಲ್ಲಿ ಬಿಜೆಪಿಯ ಬಾಯಿ ಬಡುಕಿ ಶೋಭಾಳಿಗಿಂತ ಕೆಲಸಗಾರ ಛಾತಿಯ ಜಯಪ್ರಕಾಶ್ ಹೆಗ್ಡೆಯೇ ಬೆಟರ್ ಎಂಬ ಅಭಿಪ್ರಾಯ ಮೂಡಿದೆ.

ಜೆಪಿ ಕ್ಷೇತ್ರದ ಯಾವುದೇ ಸಮಸ್ಯೆಯಿರಲಿ, ಅದಕ್ಕೆಂದಿಗೂ ಬೆನ್ನು ಹಾಕಿ ಕುಂತವರಲ್ಲ. ಸಮಸ್ಯೆಗಳು ಉದ್ಭವಿಸಿದಾಗ ತಕ್ಷಣ ಆತ ಎಂಪಿಗಿರಿಯ ಚೌಕಟ್ಟಿನಲ್ಲಿ ಸಾಧ್ಯವಾದಷ್ಟು ಸ್ಪಂದಿಸಿದ್ದಾರೆ. ಅದು ಭದ್ರಾ ಮೇಲ್ದಂಡೆ ಯೋಜನೆಯ ತೊಂದರೆಯೇ ಇರಲಿ, ಕಾಫಿ-ಅಡಿಕೆ-ಬೆಳೆಗಾರರ ಆತಂಕವೇ ಆಗಿರಲಿ ಅಥವಾ ಹುಲಿ ಯೋಜನೆಯ ಹಾಲಾಹಲವೇ ಇರಲಿ- ತಕ್ಷಣ ಓಡೋಡಿ ಹೋಗಿ ನೊಂದವರ ಪರ ನಿಂತಿದ್ದಾರೆ. ಕರಾವಳಿ ಭಾಗದಲ್ಲೂ ಅಷ್ಟೇ. ಜನರೊಂದಿಗೆ ಸದಾ ಬೆರೆತಿದ್ದಾರೆ. ಶೋಭಾ ಗೆದ್ದರೆ ಬೆಂಗಳೂರಲ್ಲೇ ಠಿಕಾಣಿ ಹೂಡಿ ಯಡ್ಡಿ ದೇಖರೇಖಿ ನೋಡಿಕೊಳ್ಳುವುದರಲ್ಲಿ ತಲ್ಲೀನರಾಗ್ತಾರೆ; ಜೆಪಿ ಸಂಸದನಾದರೆ ಕ್ಷೇತ್ರದ ಜನರ ಕೈಗೆ ಬೇಕೆಂದಾಗ ಹಮ್ಮು-ಬಿಮ್ಮಿಲ್ಲದೆ ಎಟುಕುತ್ತಾರೆಂಬ ಭಾವನೆ ಇದೆ. ಜೆಪಿಯ ಈ ಪ್ರಭಾವಳಿಯ ಎದುರು ಶೋಭಾ ದಿನಗಳೆದಂತೆ ಮಂಕಾಗುತ್ತಿದ್ದಾರೆ.


ಶೋಭಕ್ಕನಿಗೆ ಹೇಗೆ ಜೆಡಿಎಸ್‌ನ ದಾಯಾದಿ ಧನಂಜಯ್‌ಕುಮಾರ್ ತೊಡರುಗಾಲಾಗಿದ್ದಾರೋ ಹಾಗೆಯೇ ಜೆಪಿಗೆ ಸಿಪಿಐನ ವಿಜಯ್‌ಕುಮಾರ್ ಕಾಡುತ್ತಿದ್ದಾರೆ. ವಿಜಯ್ ಪಡೆಯುವ ಮತಗಳು ಕಾಂಗ್ರೆಸ್ ಬುಟ್ಟಿಯಿಂದಲೇ ಬರುವಂಥವು. ನಿವೇಶನರಹಿತ ಮುಂತಾದ ಬಡವರ-ಕಾರ್ಮಿಕರ ಪರ ಹಲವು ಹೋರಾಟ ಮಾಡಿರುವ ವಿಜಯ್ ಹೆಚ್ಚು ಓಟು ಪಡೆದಂತೆಲ್ಲ ಜೆಪಿಗೆ ಖತರಾ ಖಂಡಿತ. ಆದರೆ ಎಲೆಕ್ಷನ್‌ಗಳನ್ನು ಗೆಲ್ಲುವ ಕಲೆ ಬಲ್ಲ ಜೆಪಿ ಸಂಘಟನಾ ಚತುರ. ಕಳೆದ ಬಾರಿ ಎಲೆಕ್ಷನ್‌ನ ಕೊನೆಯ ಹಂತದಲ್ಲಿ ಅಚಾನಕ್-ಡೀವಿಯಂಥ ದೈತ್ಯನೆದುರೇ ಕಣಕ್ಕಿಳಿದಿದ್ದ ಜೆಪಿ ಕೇವಲ ಇಪ್ಪತ್ತು ಸಾವಿರ ಮತದಂತರದಿಂದ ಸೋತಿದ್ದರು. ಡೀವಿಗೆ ಬೆವರಿಳಿಸಿದ್ದರು. ಈಗಾತನ ಬೇರುಗಳು ಇಡೀ ಕ್ಷೇತ್ರದಲ್ಲಿ ಇಳಿದಿದೆ. ಶೋಭಕ್ಕನಿಗೆ ಜೆಪಿಯ ವೇಗದಲ್ಲಿ ಹೆಜ್ಜೆ ಹಾಕುವುದು ಸಾಧ್ಯವಾಗದು. ಆಕೆ ಕ್ಷೇತ್ರಕ್ಕೆ ಅರ್ಧ ಸುತ್ತು ಹಾಕುವಷ್ಟರಲ್ಲೇ ಎಲೆಕ್ಷನ್ ಮುಗಿದಿರುತ್ತದೆ.

ಕ್ಷೇತ್ರದ ಜಾತಿ ಲೆಕ್ಕಾಚಾರಗಳೂ ಕಾಂಗ್ರೆಸ್‌ನ ಜೆಪಿಗೆ ಅನುಕೂಲಕರವಾಗೇ ಇದೆ. ಹಾಗೆಯೇ ಕಾಂಗ್ರೆಸ್‌ನಲ್ಲಿ ಆತನಿಗೆ ವಿರೋಧವಿಲ್ಲ. ಶೋಭಕ್ಕನಿಗೆ ಸ್ವ-ಪಕ್ಷದಲ್ಲೇ ಎದುರು ಅಲೆ ಅಪ್ಪಳಿಸುತ್ತಿದೆ. ಈ ಗಣಿತ ಸಮೀಕರಣ ಏನೇ ಇರಲಿ; ಸದ್ಯಕ್ಕೆ ಜನ ಬಲದ ಜೆಪಿ ಮತ್ತು ಧನಬಲದ ಶೋಭಕ್ಕ ಸಮಬಲದಲ್ಲಿದ್ದಾರೆ. ಜತೆಗೆ ದಿನಗಳೆದಂತೆ ಹಿತ ಶತ್ರುಗಳ ಕಾಟ-ನಂಬಿದ್ದ ಮೋದಿ ಅಲೆಯ ಭ್ರಮೆ ಶೋಭಕ್ಕಳಿಗೆ ಸತಾಯಿಸಲಿದೆ; ಜೆಪಿಗೆ ಆತನ ಜನಪರ ರಾಜಕಾರಣ-ಸಂಸದಗಿರಿ ಅರ್ಹತೆ ಗೆಲುವು ನೀಡಲಿದೆ. ಹಾಗಂತ ಮತದಾರರೇ ತರ್ಕಿಸುತ್ತಿದ್ದಾರೆ!

● ಶುದ್ಧೋಧನ

ರಾಯಚೂರು: ಮೂರು ನದಿಗಳಿದ್ದರೂ ಬಾಯಾರಿ ಬಳಲಿರುವ ಕ್ಷೇತ್ರ


ಇಡೀ ರಾಜ್ಯಕ್ಕೆ ವಿದ್ಯುತ್ ಉತ್ಪಾದಿಸಿ ಕೊಡುವ, ದೇಶದ ಏಕೈಕ ಚಿನ್ನದ ಗಣಿಯನ್ನು ಹೊಂದಿರುವ, ಮೂರು ನದಿಗಳಿದ್ದರೂ ಬಾಯಾರಿ ಬಳಲಿರುವ, ಬಡತನದಲ್ಲಿ ಬೆಂದು ಗುಳೆಗೆ ಹೆಸರಾದ ಬಿಸಿಲನಾಡು ರಾಯಚೂರು ಲೋಕಸಭಾ ಕ್ಷೇತ್ರದ ಭೌತಿಕ ಮತ್ತು ರಾಜಕೀಯ ಚಿತ್ರಣವನ್ನು ವಸ್ತುನಿಷ್ಠವಾಗಿ ಕಟ್ಟಿಕೊಡುವ ಪ್ರಯತ್ನ ಮಾಡಿದ್ದಾರೆ ದೊಡ್ಡಿಪಾಳ್ಯ ನರಸಿಂಹಮೂರ್ತಿ.



ಧಗಧಗಿಸುವ ಬಿಸಿಲಿಗೆ, ಮೈಕೊರೆಯುವ ಚಳಿಗೆ ಹೆಸರುವಾಸಿಯಾದ ಕ್ಷೇತ್ರ ರಾಯಚೂರು. ಇಲ್ಲಿ ಬೇಸಿಗೆಯಲ್ಲಿ 46 ಡಿಗ್ರಿ ಸೆಲ್ಸಿಯಸ್‌ಗೆ ಏರುವ ತಾಪಮಾನ ಚಳಿಗಾಲದಲ್ಲಿ 8 ಡಿಗ್ರಿ ಸೆಲ್ಸಿಯಸ್‌ಗಿಂತ ಕೆಳಗಿಳಿದುಬಿಡುತ್ತದೆ. ಈ ಬೇಸಿಗೆಯ ನಟ್ಟ ನಡುವೆಯೇ ಹದಿನಾರನೇ ಲೋಕಸಭಾ ಚುನಾವಣೆಗಳು ಬಂದಿರುವುದರಿಂದ ಏರುತ್ತಿರುವ ತಾಪಮಾನದ ಕಾರಣದಿಂದ ಭೌತಿಕವಾಗಿಯೂ, ಚುನಾವಣಾ ಹಣಾಹಣಿಯಿಂದಾಗಿ ಮಾನಸಿಕವಾಗಿಯೂ ಇಡೀ ಕ್ಷೇತ್ರ ಬಿಸಿಯಾಗುತ್ತಿದೆ.

ಪ್ರತೀದಿನ ಸರಾಸರಿ ಏಳು ಕೆ.ಜಿ. ಬಂಗಾರವನ್ನು ತಯಾರಿಸುತ್ತಿರುವ ದೇಶದ ಏಕೈಕ ಕಾರ್ಯನಿರತ ಚಿನ್ನದ ಗಣಿಯಾಗಿರುವ ಹಟ್ಟಿ, ಇಡೀ ಕರ್ನಾಟಕದ ವಿದ್ಯುಚ್ಛಕ್ತಿ ಉತ್ಪಾದನೆಯಲ್ಲಿ ಶೇಕಡ 30ರಷ್ಟನ್ನು ಉತ್ಪಾದಿಸುವ ರಾಯಚೂರು ಶಾಖೋತ್ಪನ್ನ ವಿದ್ಯುತ್ ಕೇಂದ್ರ (ಆರ್‌ಟಿಪಿಎಸ್), ದಕ್ಷಿಣ ಭಾರತದ ಮೂರು ಮುಖ್ಯ ನದಿಗಳಾದ ಕೃಷ್ಣಾ, ತುಂಗಭದ್ರಾ ಮತ್ತು ಭೀಮಾ, ದೃಷ್ಟಿಗೆ ನಿಲುಕುವಷ್ಟು ವಿಶಾಲ ಹತ್ತಿಬೆಳೆಯುವ ಕಪ್ಪು ಭೂಮಿ, ರಾಯಚೂರಿನಲ್ಲಿರುವ ಏಶಿಯಾದ ಎರಡನೇ ಅತಿದೊಡ್ಡ ಹತ್ತಿ ಮಾರುಕಟ್ಟೆ, ತುಂಗಭದ್ರಾ ಎಡದಂಡೆ ಕಾಲುವೆ, ನಾರಾಯಣಪುರ ಎಡದಂಡೆ ಮತ್ತು ಬಲದಂಡೆ ಕಾಲುವೆಗಳಿಂದ ನೀರುಂಡು ನಳನಳಿಸುತ್ತಿರುವ ವಿಶಾಲ ಭತ್ತದ ಗದ್ದೆಗಳು, ತಲೆಯೆತ್ತಿದೆಡೆಯಲ್ಲಾ ಕಾಣಸಿಗುವ ಕಲ್ಲಿನ ಗುಡ್ಡಗಳು, ಗುಡ್ಡಗಳ ಅನುಕೂಲತೆಯನ್ನು ಪಡೆದು ಕಟ್ಟಿರುವ ರಾಯಚೂರು, ಮುದಗಲ್ ಮತ್ತು ಯಾದಗಿರಿ ಕೋಟೆಗಳು ಪ್ರಧಾನವಾಗಿ ರಾಯಚೂರು ಲೋಕಸಭಾ ಕ್ಷೇತ್ರದ ಭೌತಿಕ ಹೆಗ್ಗುರುತುಗಳಾಗಿವೆ. ಇವುಗಳೆಲ್ಲವುಗಳ ಜೊತೆಗೆ, ಇನ್ನೇನು ಕಾರ್ಯಾರಂಭ ಮಾಡಲಿರುವ ಯರಮರಸ್ ಶಾಖೋತ್ಪನ್ನ ವಿದ್ಯುತ್ ಉತ್ಪಾದನಾ ಕೇಂದ್ರ (ವಿಟಿಪಿಎಸ್) ಹಾಗೂ ಇತ್ತೀಚೆಗೆ ಕೇಂದ್ರ ರೈಲ್ವೇ ಸಚಿವ ಮಲ್ಲಿಕಾರ್ಜುನ ಖರ್ಗೆ ಪ್ರಕಟಿಸಿರುವ ರೈಲ್ವೇ ಕೋಚ್ ತಯಾರಿಕಾ ಘಟಕ (ಯಾದಗಿರಿ ಜಿಲ್ಲೆಯ ಸೈದಾಪುರ ಬಳಿ) ಈ ಕ್ಷೇತ್ರ ಆರ್ಥಿಕ ಚಟುವಟಿಕೆಗಳಿಗೆ ಇನ್ನಷ್ಟು ಉತ್ತೇಜನ ನೀಡುವ ಸಾಧ್ಯತೆಗಳಿವೆ.

ಕೃಷ್ಣಾ, ತುಂಗಭದ್ರಾ ಮತ್ತು ಭೀಮಾ ನದಿಗಳು ಈ ಕ್ಷೇತ್ರದ ಜೀವನದಿಗಳಂತೆ ಪ್ರವಹಿಸುತ್ತಿದ್ದರೂ, ಬಸವಸಾಗರ (ನಾರಾಯಣಪುರ) ಮತ್ತು ತುಂಗಭದ್ರಾ ಅಣೆಕಟ್ಟುಗಳಿಂದ ಹೊರಟ ಬೃಹತ್ ಕಾಲುವೆಗಳು ಇಡೀ ಕ್ಷೇತ್ರದಾದ್ಯಂತ ಟಿಸಿಲೊಡೆದು ನರನಾಡಿಗಳಂತೆ ಹಬ್ಬಿದ್ದರೂ ಈ ಕ್ಷೇತ್ರ ಕುಡಿಯುವ ನೀರಿಗಾಗಿ, ನೀರಾವರಿ ಬೆಳೆಗಳಿಗಾಗಿ ಯಾವಾಗಲೂ ಹಪಹಪಿಸುತ್ತಿರುತ್ತದೆ. ಇದಕ್ಕೆ ಕಾರಣ, ಮಳೆಗಾಲದಲ್ಲಿ ತುಂಬಿ ಹರಿಯುವ ಈ ನದಿಗಳ ನೀರು ಪೋಲಾಗಿ ಆಂಧ್ರಕ್ಕೆ ಹೋಗದಂತೆ, ಅಲ್ಲಿಂದಾಚೆಗೆ ಬಂಗಾಳಕೊಲ್ಲಿಯನ್ನು ಸೇರದಂತೆ ಇಲ್ಲಿಯೇ ಹಿಡಿದಿಟ್ಟು ಬೇಸಿಗೆಯಲ್ಲಿ ಬಳಸಿಕೊಳ್ಳುವುದಕ್ಕೆ ಅನುಕೂಲವಾಗುವಂತೆ ಮಾಡಲು ನಮ್ಮ ದೂರದೃಷ್ಟಿಹೀನ ರಾಜಕಾರಣಿಗಳಿಗೆ ಮತ್ತು ಅಧಿಕಾರಿವರ್ಗಕ್ಕೆ ಸಾಧ್ಯವಾಗದಿರುವುದು. ಇಡೀ ನೂರಾರು ಕಿ.ಮೀ. ಪ್ರದೇಶದಲ್ಲಿ ವ್ಯಾಪಿಸಿಕೊಂಡಿರುವ ಈ ಕ್ಷೇತ್ರದಲ್ಲಿ ಸಾವಿರಾರು ದೊಡ್ಡ ದೊಡ್ಡ ಕೆರೆಗಳನ್ನು ಕಟ್ಟಿ, ಈ ಪ್ರದೇಶದಾದ್ಯಂತ ಹಬ್ಬಿರುವ ಕಾಲುವೆಗಳ ನೆರವಿನಿಂದ ಮಳೆಗಾಲದಲ್ಲಿ ನೀರು ತುಂಬಿಸಿಟ್ಟುಕೊಂಡರೆ ಬೇಸಿಗೆಯಲ್ಲಿ ಅದು ನೀರಡಿಕೆಯಿಂದ ಬಳಲುವ ಕ್ಷೇತ್ರಕ್ಕೆ ನೀರುಣಿಸಬಹುದು ಎಂಬ ಕನಿಷ್ಠ ಜ್ಞಾನವು ಇಲ್ಲಿನ ರಾಜಕಾರಣಿಗಳಿಗಿಲ್ಲ.



ಈ ಕ್ಷೇತ್ರದ ಇನ್ನೊಂದು ದೊಡ್ಡ ಸಮಸ್ಯೆ ಎಂದರೆ ಹೊಟ್ಟೆಪಾಡಿಗಾಗಿ ಮಕ್ಕಳು, ಮರಿಗಳನ್ನು ಕಟ್ಟಿಕೊಂಡು ಬೆಂಗಳೂರಿಗೋ, ಮುಂಬೈಗೋ ತಂಡೋಪತಂಡವಾಗಿ ಗುಳೆಹೋಗುವುದು. ಬೆಂಗಳೂರಿನಲ್ಲಿ ನಿರ್ಮಾಣವಾಗುತ್ತಿರುವ ಯಾವುದೇ ಕಟ್ಟಡ ಅಥವಾ ರಸ್ತೆಯ ಬಳಿ ಹೋಗಿ ಅಲ್ಲಿ ಕೆಲಸ ಮಾಡುತ್ತಿರುವ ಕೂಲಿಕಾರ್ಮಿಕರನ್ನು ಕೇಳಿದರೆ ಹತ್ತರಲ್ಲಿ ಒಬ್ಬನಾದರೂ ರಾಯಚೂರು-ಯಾದಗಿರಿ ಜಿಲ್ಲೆಗಳಿಂದ ಬಂದವರಾಗಿರುತ್ತಾರೆ! ಹಾಗೆಯೇ ಈ ಜಿಲ್ಲೆಗಳ ಹಳ್ಳಿಗಳಿಗೆ ಹೋಗಿ ಯಾವುದೇ ಮನೆಯಲ್ಲಿ ವಿಚಾರಿಸಿದರೂ ಹತ್ತರಲ್ಲಿ ಒಂದು ಮನೆಯವರಾದರೂ ದುಡಿಯಲಾಗದ ವೃದ್ಧರನ್ನು ಮನೆಯಲ್ಲಿ ಬಿಟ್ಟು ಬೆಂಗಳೂರಿಗೆ ಗುಳೆ ಹೋಗಿರುವುದು ಗೊತ್ತಾಗುತ್ತದೆ. ಇಂತಹದ್ದೊಂದು ಭೀಕರ ಸಮಸ್ಯೆ ಯಾವುದೇ ಚುನಾವಣೆಯಲ್ಲೂ ಒಂದು ಗಂಭೀರ ವಿಷಯವಾಗಿ ಮಾರ್ಪಟ್ಟದ್ದಿಲ್ಲ. ಈ ಲೋಕಸಭಾ ಚುನಾವಣೆಯಲ್ಲಿ ಹಾಗಾಗುವುದಿಲ್ಲ ಎಂಬುದಕ್ಕೆ ವಿಶೇಷ ಕಾರಣಗಳೂ ಕಾಣುತ್ತಿಲ್ಲ.

2008ರ ಕ್ಷೇತ್ರಪುನರ್ವಿಂಗಡಣೆಯಲ್ಲಿ ಮರುವಿನ್ಯಾಸಗೊಂಡು ಅಸ್ತಿತ್ವಕ್ಕೆ ಬಂದಿರುವ ಈಗಿನ ಹೊಸ ರೂಪದ ರಾಯಚೂರು ಲೋಕಸಭಾ ಕ್ಷೇತ್ರ ಪರಿಶಿಷ್ಟ ಪಂಗಡಕ್ಕೆ ಮೀಸಲಿರುವ ಕ್ಷೇತ್ರ. ಒಟ್ಟು ಎಂಟು ವಿಧಾನಸಭಾ ಕ್ಷೇತ್ರಗಳು ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಯಾದಗಿರಿ ಜಿಲ್ಲೆಯಲ್ಲಿರುವ ಒಟ್ಟು ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಮೂರು ವಿಧಾನಸಭಾ ಕ್ಷೇತ್ರಗಳು (ಶೋರಾಪುರ, ಶಹಾಪುರ ಮತ್ತು ಯಾದಗಿರಿ) ಹಾಗೂ ರಾಯಚೂರು ಜಿಲ್ಲೆಯಲ್ಲಿರುವ ಒಟ್ಟು ಏಳು ವಿಧಾನಸಭಾ ಕ್ಷೇತ್ರಗಳಲ್ಲಿ ಐದು ವಿಧಾನಸಭಾ ಕ್ಷೇತ್ರಗಳು (ರಾಯಚೂರು, ರಾಯಚೂರು ಗ್ರಾಮೀಣ, ಮಾನವಿ, ದೇವದುರ್ಗ ಮತ್ತು ಲಿಂಗಸೂಗೂರು) – ಹೀಗೆ ಎರಡು ಜಿಲ್ಲೆಗಳ ಒಟ್ಟು ಎಂಟು ಕ್ಷೇತ್ರಗಳನ್ನು ಒಳಗೊಂಡಿರುವ ವಿಶಾಲ ಕ್ಷೇತ್ರ ರಾಯಚೂರು. ಯಾದಗಿರಿ ಜಿಲ್ಲೆಯಲ್ಲಿ ಉಳಿದ ಇನ್ನೊಂದು ವಿಧಾನಸಭಾ ಕ್ಷೇತ್ರ (ಗುರುಮಠಕಲ್) ಗುಲ್ಬರ್ಗಾ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬಂದರೆ, ರಾಯಚೂರು ಜಿಲ್ಲೆಯಲ್ಲಿ ಉಳಿದ ಎರಡು ವಿಧಾನಸಭಾ ಕ್ಷೇತ್ರಗಳು (ಸಿಂಧನೂರು ಮತ್ತು ಮಸ್ಕಿ) ಕೊಪ್ಪಳ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ.

ಲೋಕಸಭಾ ಕ್ಷೇತ್ರವಾಗಿ ರಾಯಚೂರು ಮೊದಲ ಸಾರ್ವತ್ರಿಕ ಚುನಾವಣೆಯನ್ನು ಎದುರಿಸಿದ್ದು 1957ರಲ್ಲಿ. ಆಗ ಕ್ಷೇತ್ರದ ಒಟ್ಟು ಮತದಾರರ ಸಂಖ್ಯೆ 4,15,678 ಇತ್ತು. ಅವರಲ್ಲಿ 1,50,148 ಮತದಾರರು ಮತಚಲಾಯಿಸಿದ್ದರು. ಅಂದಿಗೆ ಹೋಲಿಸಿದರೆ ಇಂದು ಈ ಕ್ಷೇತ್ರದಲ್ಲಿ 16,10,427 ಮತದಾರರಿದ್ದು ಅವರಲ್ಲಿ 8,10,026 ಪುರುಷರು, 8,00,121 ಮಹಿಳೆಯರು ಮತ್ತು 280 ಮಂದಿ ಇತರರು ಸೇರಿದ್ದಾರೆ. ಈಗ 46,000 ಹೊಸ ಮತದಾರರು ಅರ್ಜಿ ಸಲ್ಲಿಸಿದ್ದು ಇನ್ನು ಒಂದೆರಡು ದಿನಗಳಲ್ಲಿ ಅವರೂ ಕೂಡ ಈ ಮತದಾರರ ಪಟ್ಟಿಗೆ ಸೇರ್ಪಡೆಗೊಳ್ಳಲಿದ್ದಾರೆ. ಈ ಕ್ಷೇತ್ರದಲ್ಲಿ 1878 ಮತಗಟ್ಟೆಗಳಿದ್ದು ಅವುಗಳಲ್ಲಿ 620 ಮತಗಟ್ಟೆಗಳನ್ನು ಸೂಕ್ಷ್ಮ ಮತಗಟ್ಟೆಗಳೆಂದೂ ಹಾಗೂ 396 ಮತಗಟ್ಟೆಗಳನ್ನು ಅತಿಸೂಕ್ಷ್ಮ ಮತಗಟ್ಟೆಗಳೆಂದೂ ವರ್ಗೀಕರಿಸಲಾಗಿದೆ.

ಎಲ್ಲಾ ಲೋಕಸಭಾ ಕ್ಷೇತ್ರಗಳಂತೆ ರಾಯಚೂರು ಕೂಡ ಸ್ವಾತಂತ್ರ್ಯಾನಂತರದ ಹಲವು ದಶಕಗಳ ತನಕ ಕಾಂಗ್ರೆಸ್ ಪಕ್ಷದ ಭದ್ರಕೋಟೆಯಾಗಿಯೇ ಉಳಿದಿತ್ತು, ಇಲ್ಲಿಯತನಕ ರಾಯಚೂರು ಒಂದು ಲೋಕಸಭಾ ಕ್ಷೇತ್ರವಾಗಿ ಒಟ್ಟು 15 ಲೋಕಸಭಾ ಚುನಾವಣೆಗಳನ್ನು ಕಂಡಿದೆ (1986ರಲ್ಲಿ ಅಂದಿನ ಹಾಲಿ ಲೋಕಸಭಾ ಸದಸ್ಯರಾಗಿದ್ದ ಬಿ.ವಿ.ದೇಸಾಯಿ ಅವರ ಅಕಾಲಿಕ ನಿಧನದಿಂದಾಗಿ ನಡೆದ ಉಪಚುನಾವಣೆಯನ್ನೂ ಒಳಗೊಂಡಂತೆ). ಅವುಗಳಲ್ಲಿ 12 ಬಾರಿ ಕಾಂಗ್ರೆಸ್ ಗೆದ್ದಿದೆ. ಇಲ್ಲಿನ ಮತದಾರ 1967ರಲ್ಲಿ ಸ್ವತಂತ್ರ ಪಕ್ಷಕ್ಕೆ, 1996ರಲ್ಲಿ ಜನತಾದಳಕ್ಕೆ, ಹಾಗೂ 1989ರಲ್ಲಿ ಭಾರತೀಯ ಜನತಾ ಪಕ್ಷಕ್ಕೆ (ಬಿಜೆಪಿ) ಮಣೆ ಹಾಕುವ ಮೂಲಕ ಆಗಾಗ ಕಾಂಗ್ರೆಸ್ ಪಕ್ಷಕ್ಕೆ ಅಚ್ಚರಿ ಮೂಡಿಸಿದ್ದೂ ಉಂಟು.


ಬಳ್ಳಾರಿ ಗಣಿಧೂಳು ರಾಜ್ಯದಲ್ಲಿ 2008ರ ವಿಧಾನಸಭಾ ಚುನಾವಣೆಗಳನ್ನು ಹಾಗೂ 2009ರ ಲೋಕಸಭಾ ಚುನಾವಣೆಗಳನ್ನು ದಟ್ಟವಾಗಿ ಆವರಿಸಿದ್ದು ನಮಗೆಲ್ಲಾ ಗೊತ್ತಿದೆ. ಅದಕ್ಕೆ ರಾಯಚೂರು ಕ್ಷೇತ್ರ ಕೂಡ ಹೊರತಾಗಿರಲಿಲ್ಲ. ಬಳ್ಳಾರಿಯನ್ನು ಕೇಂದ್ರವನ್ನಾಗಿಟ್ಟುಕೊಂಡು ಸುತ್ತಮುತ್ತಲ ಜಿಲ್ಲೆಗಳಿಗೆ, ಕ್ಷೇತ್ರಗಳಿಗೆ ಅಪ್ಪಟ ಪಾಳೆಯಗಾರರಂತೆ, ರಾಯಲಸೀಮಾದ ಫ್ಯಾಕ್ಷನಿಸ್ಟುಗಳಂತೆ ನೂರಾರು ಸ್ಕಾರ್ಪಿಯೋ ವ್ಯಾನುಗಳಲ್ಲಿ ದಂಡೆತ್ತಿ ಹೋಗುತ್ತಿದ್ದ ಬಳ್ಳಾರಿ ದಣಿಗಳು ಮತ್ತವರ ಪಟಾಲಂ ಬಳ್ಳಾರಿಯಲ್ಲಿ ನಾಡಿನ ಸಂಪತ್ತನ್ನು ಲೂಟಿ ಹೊಡೆದು ಗಳಿಸಿದ ಹಡಬೆ ದುಡ್ಡನ್ನು ಈ ಕ್ಷೇತ್ರಗಳಲ್ಲೆಲ್ಲಾ ಬಿಜೆಪಿ ಅಭ್ಯರ್ಥಿಗಳನ್ನು ಗೆಲ್ಲಿಸುವುದಕ್ಕೆ ನೀರಿನಂತೆ ಚೆಲ್ಲುತ್ತಿದ್ದರು. ಎದುರಾಳಿ ಹಣಬಲದಲ್ಲಿ ಖರೀದಿಯಾಗದಿದ್ದರೆ ತೋಳ್ಬಲದಲ್ಲಿ ಮಣಿಸುತ್ತಿದ್ದರು. ಮತದಾರರಿಗೆ ಒಂದು ವೋಟಿಗೆ ಸಾವಿರ

ಶಿವನಗೌಡ ನಾಯಕ ಎಂಬ ಅವಕಾಶವಾದಿ


ಬಿಜೆಪಿಯ ಅಭ್ಯರ್ಥಿಯಾಗಿರುವ ಶಿವನಗೌಡ ನಾಯಕ ಈ ಹಿಂದೆ ದೇವದುರ್ಗ ತಾಲೂಕು ಪಂಚಾಯತಿ ಅಧ್ಯಕ್ಷನಾಗಿದ್ದಾಗ ಬಡವರಿಗಾಗಿ ಸರ್ಕಾರ ಜಾರಿಗೆ ತಂದಿದ್ದ 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ಅವ್ಯವಹಾರ ಮಾಡಿ ಬಡವರಿಗೆ ಕೊಡಬೇಕಾಗಿದ್ದ ಎಲ್ಲಾ ಕಾಳನ್ನು ತಾನೇ ನುಂಗಿ ನೀರುಕುಡಿದು ದುಂಡಗಾಗಿದ್ದ.

2008ರ ವಿಧಾನಸಭಾ ಚುನಾವಣೆಯಲ್ಲಿ ದೇವದುರ್ಗ ಕ್ಷೇತ್ರದಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿ ಶಾಸಕನಾದ. ನಿಮಗೆ ನೆನಪಿರಬಹುದು. ಆ ಚುನಾವಣೆಯಲ್ಲಿ ಬಿಜೆಪಿಗೆ 110 ಸ್ಥಾನಗಳು ಬಂದು ಅಧಿಕಾರಕ್ಕೇರಲು ಇನ್ನು ಮೂರು ಸ್ಥಾನಗಳ ಕೊರತೆಯುಂಟಾಗಿತ್ತು, ಪಕ್ಷೇತರರ ನೆರವಿನಿಂದ ಸರ್ಕಾರ ರಚಿಸಿದರೂ ತಮ್ಮ ಸರ್ಕಾರವನ್ನು ಭದ್ರಪಡಿಸಿಕೊಳ್ಳುವುದಕ್ಕೆ ಬಿಜೆಪಿಗಳು 'ಆಪರೇಷನ್ ಕಮಲ'ವನ್ನು ನಡೆಸಲಾರಂಭಿಸಿದರು. ಅಂಗಡಿಯಲ್ಲಿ ತರಕಾರಿ ಕೊಂಡಷ್ಟು ಸಲೀಸಾಗಿ ಜನಪ್ರತಿನಿಧಿಗಳನ್ನು ಕೊಂಡುಕೊಂಡು ರಾಜಕೀಯದಲ್ಲಿ ಹೊಲಸು ಪರಂಪರೆಯೊಂದನ್ನು ಪ್ರಾರಂಭಿಸಿದರು. ಹೀಗೆ, ಶಿವನಗೌಡ ನಾಯಕ ಕೂಡ ಆಯ್ಕೆಯಾದ ಕೇವಲ 29 ದಿನಗಳಲ್ಲಿ ಹತ್ತು ಕೋಟಿ ರೂಪಾಯಿಗೆ ಬಿಜೆಪಿಗೆ ಬಿಕರಿಯಾದ. ನಂತರ ನಡೆದ ಉಪಚುನಾವಣೆಯಲ್ಲಿ ಗೆದ್ದು ಬಿಜೆಪಿ ಸರ್ಕಾರದಲ್ಲಿ ಗ್ರಂಥಾಲಯ ಮಂತ್ರಿ ಕೂಡ ಆದ. ಆಗ ಅರ್ಧ ಕೋಟಿ ರೂಪಾಯಿ ಸರ್ಕಾರದ ದುಡ್ಡನ್ನು ಖರ್ಚು ಮಾಡಿ ತನ್ನ ಮಾವನಾದ ಅಮರೇಶ್ ಅತಗಲ್ ಎಂಬ ಸಾಹಿತಿಯ ಪುಸ್ತಕಗಳನ್ನು ಪ್ರಿಂಟ್ ಮಾಡಿಸಿ ರಾಜ್ಯದ ಎಲ್ಲಾ ಗ್ರಂಥಾಲಯಗಳಿಗೂ ವಿತರಿಸಿದ. ಈ ಹಗರಣ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪನನ್ನು ಕೆರಳಿಸಿದ್ದರಿಂದ ಶಿವನಗೌಡನಿಂದ ಸಚಿವ ಸ್ಥಾನವನ್ನು ಕಿತ್ತುಕೊಂಡ. ಶಿವನಗೌಡ ನಾಯಕನಂತೆಯೇ ಯಡಿಯೂರಪ್ಪನ ವಿರುದ್ಧ ಗರಂ ಆಗಿದ್ದ 16 ಅತೃಪ್ತ ಶಾಸಕರು ಸೇರಿಕೊಂಡು ಯಡ್ಡಿಯ ವಿರುದ್ಧ ಬಂಡಾಯವೆದ್ದು ಗೋವಾ ಕೂಡ ಸೇರಿದಂತೆ ಎಲ್ಲಾ ಕಡೆ ರೆಸಾರ್ಟ್ ಯಾತ್ರೆ ಮಾಡಿಕೊಂಡು ಬಂದ. ಆಗಲೂ ಯಡ್ಡಿ ವಿರೋಧಿಗಳಿಂದ ಹಣ ಮುಕ್ಕಿದ. ಬಂಡಾಯದ ಕಾರಣಕ್ಕಾಗಿ ಈ ಎಲ್ಲಾ ಶಾಸಕರನ್ನು ವಿಧಾನಸಭೆ ಸದಸ್ಯತ್ವದಿಂದ ಅನರ್ಹಗೊಳಿಸಿ ಆದೇಶ ಹೊರಡಿಸಿದ ಸ್ಪೀಕರ್ ಬೋಪಯ್ಯ ಅವರ ಕ್ರಮವನ್ನು ಪ್ರಶ್ನಿಸಿ ಇವರು ಕೋರ್ಟ್ ಮೆಟ್ಟಲೇರಿದರು. ಕೊನೆಗೆ ಆ ಪ್ರಕರಣ ಸುಪ್ರೀಂ ಕೋರ್ಟಿನಲ್ಲಿ ವಿಚಾರಣೆ ನಡೆಯುತ್ತಿರುವಾಗಲೇ ಶಿವನಗೌಡ ನಾಯಕ ಒಂದು ಕಾಲು ಬಿಜೆಪಿಯಿಂದ ಹೊರಗಿಟ್ಟು ಮತ್ತೆ ಜೆಡಿಎಸ್ ಕದ ತಟ್ಟಿದ್ದ. ಆಗ ನಡೆದ ಜಿಲ್ಲಾ ಪಂಚಾಯತ್ ಚುನಾವಣೆಯ ಸಂದರ್ಭದಲ್ಲಿ ಬಿಜೆಪಿಯ ಶಾಸಕನಾಗಿದ್ದುಕೊಂಡೇ ಜೆಡಿಎಸ್‌ನ ನಾಯಕ ಎಚ್.ಡಿ.ಕುಮಾರಸ್ವಾಮಿಯನ್ನು ಕರೆಸಿ ದೇವದುರ್ಗದಲ್ಲಿ ಸಮಾವೇಶ ಮಾಡಿಸಿದ. ಕೊನೆಗೆ ದೇವದುರ್ಗ ತಾಲೂಕಿನ ಎಲ್ಲಾ ಆರು ಜಿಲ್ಲಾ ಪಂಚಾಯತ್ ಸ್ಥಾನಗಳಲ್ಲಿ ಜೆಡಿಎಸ್ ಗೆಲ್ಲುವಂತೆ ನೋಡಿಕೊಂಡ. ಸುಪ್ರೀಂ ಕೋರ್ಟು ಸ್ಪೀಕರ್ ಆದೇಶವನ್ನು ಅಸಿಂಧುಗೊಳಿಸಿ ಇವರ ವಿಧಾನಸಭೆ ಸದಸ್ಯತ್ವವನ್ನು ಎತ್ತಿ ಹಿಡಿದಾಗ ಮತ್ತೆ ಸುಮ್ಮನಾಗಿ ಬಿಜೆಪಿಯಲ್ಲಿ ಉಳಿದುಕೊಂಡ. ಅಷ್ಟು ಹೊತ್ತಿಗಾಗಲೇ ಈತನ ಶತ್ರು ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿದಿದ್ದರಿಂದ ಸದಾನಂದಗೌಡ ಮತ್ತು ಜಗದೀಶ್ ಶೆಟ್ಟರ್ ಅವರ ಬಾಲ ಬಡಿಯುತ್ತಾ ತನ್ನ ಸ್ಥಾನ ಭದ್ರಪಡಿಸಿಕೊಂಡ.

- ಕಳೆದ ವಿಧಾನಸಭಾ ಚುನಾವಣೆಯಲ್ಲಿ ದೇವದುರ್ಗ ಕ್ಷೇತ್ರದಲ್ಲಿ ಮತ್ತೆ ಕಣಕ್ಕಿಳಿದಿದ್ದ. ಇವನ ವಿರುದ್ಧ ಕಾಂಗ್ರೆಸ್‌ನಿಂದ ಆತನ ಅಜ್ಜ ವೆಂಕಟೇಶ್ ನಾಯಕ್ ನಿಂತಿದ್ದರು. ಇಡೀ ರಾಜ್ಯಾದ್ಯಂತ ಬಿಜೆಪಿ ಅಭ್ಯರ್ಥಿಗಳಿಗೆ ಜನ ಮಣ್ಣು ತಿನ್ನಿಸಿದಂತೆ ದೇವದುರ್ಗದಲ್ಲೂ ಶಿವನಗೌಡನನ್ನು ಕೆಡವಿ ವೆಂಕಟೇಶ್ ನಾಯಕ್ ಅವರನ್ನು ಜನ ಗೆಲ್ಲಿಸಿದರು. ಈಗ ಕನಿಷ್ಠ ಲೋಕಸಭಾ ಚುನಾವಣೆಯಲ್ಲಾದರೂ ಗೆದ್ದು ಪಾರ್ಲಿಮೆಂಟ್ ಪ್ರವೇಶಿಸಬೇಕೆಂಬ ಹಠದಲ್ಲಿ ಶಿವನಗೌಡ ನಾಯಕ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿದ್ದಾನೆ. ■


ಜೆಡಿಎಸ್ ಅಭ್ಯರ್ಥಿ ಡಿ.ಬಿ.ನಾಯಕ


ಕಾಂಗ್ರೆಸ್ ಅಭ್ಯರ್ಥಿ ಬಿ.ವಿ.ರೇವೂ ನಾಯಕ


ರಾಜ ಅಮರೇಶ ನಾಯಕ

…ತೋಪಾಯಿಯಂತೆ ಹಂಚುವ ಮೂಲಕ ಮತದಾರರನ್ನೂ ಭ್ರಷ್ಟರನ್ನಾಗಿ ಮಾಡುತ್ತಿದ್ದರು. ಇಷ್ಟೆಲ್ಲಾ ದರ್ಪಗಳನ್ನು ನಡೆಸಿ ತಮ್ಮ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಂಡು ವಿಧಾನಸಭೆಗೋ, ಸಂಸತ್ತಿಗೋ ಕರೆದುಕೊಂಡುಬರುತ್ತಿದ್ದರು. ಈ ಗಣಿ ದಂಡಯಾತ್ರೆಗೆ ಸಿಕ್ಕು ನಲುಗಿರುವ ಕ್ಷೇತ್ರಗಳಲ್ಲಿ ರಾಯಚೂರು ಕೂಡ ಒಂದು.

ಲಿಂಗಸೂಗೂರು ತಾಲೂಕಿನ ಗುಂತಗೋಳ ಮಾಂಡಲಿಕ ಸಂಸ್ಥಾನದ ಕುಡಿ ರಾಜಾ ಅಮರೇಶ ನಾಯಕ ಮೂಲತಃ ಕಾಂಗ್ರೆಸ್ ರಾಜಕಾರಣಿ. ವೀರಪ್ಪ ಮೊಯ್ಲಿ ಮತ್ತು ಎಸ್.ಎಂ. ಕೃಷ್ಣ ಸರ್ಕಾರದಲ್ಲಿ ಮಂತ್ರಿಯಾಗಿದ್ದವರು. ಆದರೆ, 2009ರ ಲೋಕಸಭಾ ಚುನಾವಣೆಯ ಹೊತ್ತಿಗೆ ಬಿಜೆಪಿ ಸೇರಿದ


ವಸಂತಕುಮಾರ್ ಮತ್ತು ಬೋಸರಾಜು ಸುದ್ದಿಗೋಷ್ಠಿಯೊಂದರಲ್ಲಿ....

…ಅವರನ್ನು ಆ ಲೋಕಸಭಾ ಚುನಾವಣೆಯಲ್ಲಿ ಕಣಕ್ಕಿಳಿಸುವುದಾಗಿ ಬಿಜೆಪಿ ಘೋಷಣೆಯನ್ನೂ ಮಾಡಿತ್ತು. ಅವರ ಕೈಗೊಂದು ಬಿ ಫಾರ್ಮ್ ಅರ್ಜಿಯನ್ನೂ ಕೊಟ್ಟಿತ್ತು. ಅದನ್ನು ನಂಬಿಕೊಂಡ ಅಮರೇಶನಾಯಕ ಚುನಾವಣಾ ಸಿದ್ಧತೆಯನ್ನು ಮಾಡಿಕೊಂಡು ಹಳ್ಳಿಹಳ್ಳಿ ಸುತ್ತಲಾರಂಭಿಸಿದ್ದ. ನಾಮಪತ್ರ ಸಲ್ಲಿಸುವ ದಿನ ಬಳ್ಳಾರಿ ಧಣಿಗಳ ಬಲಗೈಬಂಟ ಬಿ.ಶ್ರೀರಾಮುಲು ತನ್ನ ದಂಡಿನೊಂದಿಗೆ ಆವತ್ತು ರಾಯಚೂರಿಗೆ ಬಂದಿದ್ದರು. ಬಳ್ಳಾರಿ ಧಣಿಗಳೂ ತನ್ನ ಬೆನ್ನಿಗಿದ್ದಾರೆಂದು ಭಾವಿಸಿದ್ದ ರಾಜಾ ಅಮರೇಶ ನಾಯಕ ಹಿರಿಹಿರಿ ಹಿಗ್ಗಿದ್ದ. ನಾಮ ಪತ್ರ ಸಲ್ಲಿಸುವುದಕ್ಕೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿಯೊಳಗೆ ಹೋದಾಗ ಅಚ್ಚರಿಯೊಂದು ಕಾದಿತ್ತು, ರಾಜಾ ಅಮರೇಶ ನಾಯಕನಿಂದ ಬಿ ಫಾರ್ಮ್ ಕಸಿದುಕೊಂಡ ಶ್ರೀರಾಮುಲು ಅದನ್ನು ತನ್ನ ಹಿಂಬಾಲಕನಾಗಿ ಬಳ್ಳಾರಿಯಿಂದ ಬಂದಿದ್ದ ಸಣ್ಣ ಫಕ್ಕೀರಪ್ಪನ ಕೈಗಿಟ್ಟು ನಾಮಪತ್ರ ಸಲ್ಲಿಸುವಂತೆ ಸೂಚಿಸಿದ್ದ, ಅಲ್ಲಿಗೆ ರಾಜಾ ಫಕೀರನಾಗಿದ್ದ, ಫಕೀರ ರಾಜನಾಗಿದ್ದ! ಹೊರಗಡೆ ಕಾಯುತ್ತಿದ್ದ ಪತ್ರಕರ್ತರು ರಾಜಾ ಅಮರೇಶ ನಾಯಕನೇ ನಾಮಪತ್ರ ಸಲ್ಲಿಸಿದ್ದಾರೆಂದುಕೊಂಡು ಅವರನ್ನು ಮಾತಾಡಿಸಲು ಹೋದಾಗಲೇ ಗೊತ್ತಾಗಿದ್ದು ಅಸಲೀಯತ್ತು!

ಅಂತೂ ಜಿದ್ದಾಜಿದ್ದಿನಿಂದ ಕೂಡಿದ ಆ ಚುನಾವಣೆಯಲ್ಲಿ 3,16,450 ಮತಗಳನ್ನು ಪಡೆದ ಬಿಜೆಪಿ ಅಭ್ಯರ್ಥಿ ಸಣ್ಣ ಫಕ್ಕೀರಪ್ಪ ತನ್ನ ಸಮೀಪದ ಪ್ರತಿಸ್ಪರ್ಧಿ ಕಾಂಗ್ರೆಸ್‌ನ ರಾಜಾ ವೆಂಕಟಪ್ಪ ನಾಯಕನನ್ನು 30,636 ಮತಗಳ ಅಂತರದಲ್ಲಿ ಸೋಲಿಸಿ ಗೆಲುವಿನ ನಗೆ ಬೀರಿದ್ದ. ವಾಸ್ತವದಲ್ಲಿ ಆ ಗೆಲುವು ಪ್ರಜಾತಂತ್ರದ ವಿರುದ್ಧದ ಅಪ್ರಜಾತಂತ್ರದ ಗೆಲುವಾಗಿತ್ತು. ನ್ಯಾಯ, ನೀತಿಗಳ ವಿರುದ್ಧದ ಅನ್ಯಾಯ, ಅನೀತಿಗಳ ಗೆಲುವಾಗಿತ್ತು, ಜನಸಾಮಾನ್ಯರ ಮೇಲಿನ ದರ್ಪ-ದೌರ್ಜನ್ಯಗಳ ಗೆಲುವಾಗಿತ್ತು.

ಹೀಗೆ ಅವತ್ತು ಗೆದ್ದು ಕ್ಷೇತ್ರದಿಂದ ಕಾಲ್ಕಿತ್ತ ಸಣ್ಣ ಫಕ್ಕೀರಪ್ಪನೆಂಬ ಗಣಿಧಣಿಗಳ ಸೇವಕ ಮತ್ತೆಂದೂ ರಾಯಚೂರು ಕ್ಷೇತ್ರಕ್ಕೆ ಮರಳಲಿಲ್ಲ! ಅವನಿಗೆ ಓಟು ಹಾಕಿದ ಜನರ ಕೈಗಂತೂ ಸಿಗಲೇ ಇಲ್ಲ, ಕ್ಷೇತ್ರದ ಸಮಸ್ಯೆಗಳ ಬಗ್ಗೆ ಪಾರ್ಲಿಮೆಂಟಿನಲ್ಲೂ ಚಕಾರವೆತ್ತಲಿಲ್ಲ, ಅಸಲಿಗೆ ಆ ಕ್ಷೇತ್ರಕ್ಕೊಬ್ಬ ಸಂಸದನಿದ್ದಾನೆ ಎಂಬುದನ್ನೇ ಜನ ಮರೆತು ಹೋಗಿದ್ದರು. ಈ ಮಾತುಗಳನ್ನು ಬಿಜೆಪಿ ರಾಜಕೀಯ ವೈರಿಗಳು ಮಾತ್ರವಲ್ಲ, ಖುದ್ದು ಬಿಜೆಪಿ ಕಾರ್ಯಕರ್ತರು, ನಾಯಕರೂ ಕೂಡ ಆಡುತ್ತಿದ್ದರು. ಈಗ್ಗೆ ಒಂದೆರಡು ದಿನಗಳ ಹಿಂದಷ್ಟೆ ಈ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ ಕೆ.ಶಿವನಗೌಡ ನಾಯಕ ಕೂಡ ಒಪ್ಪಿಕೊಳ್ಳುತ್ತಾ "ಸಣ್ಣ ಫಕ್ಕೀರಪ್ಪನವರು ಓಟು ಹಾಕಿದ ಜನರ ಕೈಗೆ ಸಿಗದೇ, ಕ್ಷೇತ್ರದ ಸಮಸ್ಯೆಗಳ ಬಗ್ಗೆ ಚಿಂತಿಸದೇ ಮಾಯವಾಗಿ ಬಿಟ್ಟರು" ಎಂದು ಸುದ್ದಿಗೋಷ್ಠಿಯಲ್ಲೇ ಬಹಿರಂಗವಾಗಿ ಅಸಮಾಧಾನ ಹಾಕಿದ್ದು ಸಣ್ಣ ಫಕ್ಕೀರಪ್ಪನ ಕಾರ್ಯವೈಖರಿಗೆ ಹಿಡಿದ ಕನ್ನಡಿಯಾಗಿತ್ತು.

ಈಗ ಮತ್ತೊಮ್ಮೆ ಲೋಕಸಭಾ ಚುನಾವಣೆ ಎದುರಾಗಿದ್ದು ಚುನಾವಣೆ ರಂಗೇರುತ್ತಿದೆ. ಕಾಂಗ್ರೆಸ್‌ನಿಂದ ಭಗವಂತರಾಯ ನಾಯಕ (ಬಿ.ವಿ.ನಾಯಕ) ಅವರು ನಾಮಪತ್ರ ಸಲ್ಲಿಸಿದ್ದಾರೆ. ಇವರು ದೇವದುರ್ಗದ ಹಾಲಿ ಶಾಸಕ ಹಾಗೂ ನಾಲ್ಕು ಬಾರಿ ರಾಯಚೂರು ಲೋಕಸಭಾ ಕ್ಷೇತ್ರವನ್ನು ಪ್ರತಿನಿಧಿಸಿರುವ ಹಿರಿಯ ಕಾಂಗ್ರೆಸ್ ನಾಯಕ ಎ.ವೆಂಕಟೇಶ ನಾಯಕ ಅವರ ಮಗ. ಅಲ್ಲದೇ ಹಾಲಿ ಅಬಕಾರಿ ಸಚಿವ ಸತೀಶ್ ಜಾರಕಿಹೊಳಿಯವರ ಭಾವ. (ಜಾರಕಿಹೊಳಿಯವರ ತಂಗಿಯನ್ನು ಭಗವಂತರಾಯ ನಾಯಕ ಮದುವೆಯಾಗಿರೋದು.)

ಬಿಜೆಪಿಯಿಂದ ಕೆ.ಶಿವನಗೌಡ ನಾಯಕ ನಾಮಪತ್ರ ಸಲ್ಲಿಸಿದ್ದಾರೆ. ಇವರು ಅದೇ ವೆಂಕಟೇಶ ನಾಯಕ ಅವರ ಮೊಮ್ಮಗ. ಅಂದರೆ, ವೆಂಕಟೇಶ ನಾಯಕ ಅವರ ಮಗ ಮತ್ತು ಮೊಮ್ಮಗನ ನಡುವೆಯೇ ಈ ಬಾರಿ ಜಿದ್ದಾಜಿದ್ದಿನ ಹೋರಾಟ ನಡೆಯಲಿದೆ. ಈ ಶಿವನಗೌಡ ನಾಯಕ ಒಬ್ಬ ಅವಕಾಶವಾದಿ ರಾಜಕಾರಣಿ. ದುಡ್ಡು, ಅಧಿಕಾರ ಸಿಗುತ್ತೆ ಎಂದಾದರೆ ಯಾವ ಪಕ್ಷಕ್ಕಾದರೂ ಕ್ಷಣಾರ್ಧದಲ್ಲಿ ಜಿಗಿಯಲು ಹಿಂಜರಿಯದ ಮನುಷ್ಯ, ಅಧಿಕಾರವಿದ್ದಾಗ ಸರ್ಕಾರಿ ಅಧಿಕಾರಿಗಳ ಮತ್ತು ಜನಸಾಮಾನ್ಯರ ಮೇಲೆ ಗರ್ವ, ದೌರ್ಜನ್ಯ, ಗೂಂಡಾಗಿರಿ ಗತ್ತುಗಳನ್ನು ಪ್ರದರ್ಶಿಸಿ... ದ್ವೇಷ ಕಟ್ಟಿಕೊಂಡಿರುವ ವ್ಯಕ್ತಿ.

ಇನ್ನು ಜೆಡಿಎಸ್ ಇಲ್ಲಿ ಆಟಕ್ಕುಂಟು, ಲೆಕ್ಕಕ್ಕಿಲ್ಲ, ಈ ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಬಿ.ಶ್ರೀರಾಮುಲು ಯಾವ ರಾಜಾ ಅಮರೇಶ ನಾಯಕನಿಂದ ಬಿ ಫಾರ್ಮ್ ಕಿತ್ತುಕೊಂಡು ಸಣ್ಣ ಫಕ್ಕೀರಪ್ಪನಿಗೆ ಕೊಟ್ಟಿದ್ದನೋ ಅದೇ ರಾಜಾ ಅಮರೇಶ ನಾಯಕನನ್ನು ಜೇಡಿಎಸ್ ತನ್ನ ಅಭ್ಯರ್ಥಿ ಎಂಬುದಾಗಿ ಘೋಷಿಸಿತ್ತು. ಆದರೆ, ಜೆಡಿಎಸ್ ಟಿಕೆಟ್‌ನಿಂದ ಸ್ಪರ್ಧಿಸುವುದಕ್ಕೆ ಅಮರೇಶ್ ನಾಯಕನಿಗೆ ಇಷ್ಟವಿರಲಿಲ್ಲ, ಹೀಗಾಗಿಯೇ "ಒಲ್ಲೆ, ಒಲ್ಲೆ, ಒಲ್ಲೆ" ಎಂದು ಹೇಳಿದರೂ ಕುಮಾರಸ್ವಾಮಿ, ದೇವೇಗೌಡರು ಅವರ ಮೇಲೆ ಸ್ಪರ್ಧಿಸುವುದಕ್ಕೆ ಒತ್ತಡ ಹೇರುತ್ತಲೇ ಇದ್ದರು. ರಾಜಾ ಅಮರೇಶ ನಾಯಕನಿಗೆ ಜೆಡಿಎಸ್ ಪಕ್ಷದಿಂದ ಸ್ಪರ್ಧಿಸುವುದು ಇಷ್ಟವಿಲ್ಲದ್ದನ್ನು ಅರಿತ ಚತುರ ಕಾಂಗ್ರೆಸ್ ರಾಜಕಾರಣಿಗಳು ಅವರನ್ನು ತಮ್ಮ ಪಕ್ಷಕ್ಕೆ ಸೆಳೆದುಕೊಳ್ಳುವಲ್ಲಿ ಸಫಲರಾಗಿದ್ದಾರೆ. ರಾಯಚೂರಿನ ಐಡಿಎಸ್‌ಎಂಟಿ ಲೇಔಟ್‌ನಲ್ಲಿರುವ ರಾಜಾ ಅಮರೇಶ ನಾಯಕ ಅವರ ಮನೆಗೆ ಭೇಟಿಕೊಟ್ಟ ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿ ಎನ್.ಎಸ್. ಬೋಸರಾಜು, ಮಾಜಿ ಶಾಸಕ ಎ.ಪಾಪರೆಡ್ಡಿ ಮತ್ತು ದೇವದುರ್ಗದ ಶಾಸಕ ಎ.ವೆಂಕಟೇಶ ನಾಯಕ ಒಂದು ಗಂಟೆಗೂ ಹೆಚ್ಚು ಕಾಲ ರಾಜಾ ಅಮರೇಶ ನಾಯಕರೊಂದಿಗೆ ಚರ್ಚಿಸಿ ಕಾಂಗ್ರೆಸ್ ಸೇರುವಂತೆ ಮನವೊಲಿಸಿದ್ದಾರೆ. ಅದಕ್ಕೆ ಅವರೂ ಒಪ್ಪಿಕೊಂಡಿದ್ದಾರೆ. ಸೂಕ್ತ ಸ್ಥಾನಮಾನದ ಭರವಸೆ ಕೊಟ್ಟರೆ ಇನ್ನೇನು ಎರಡು ದಿನಗಳಲ್ಲಿ ಅವರು ಕಾಂಗ್ರೆಸ್ ಸೇರುವುದು ಖಚಿತವಾಗಿದೆ. ಮೊದಲೇ ಅಭ್ಯರ್ಥಿಯಿಲ್ಲದೇ ಒದ್ದಾಡುತ್ತಿದ್ದ ಜೆಡಿಎಸ್‌ಗೆ ಇದರಿಂದ ಭಾರಿ ಮುಖಭಂಗವಾಗಿದೆ. ಈಗ ಡ್ಯಾಮೇಜ್ ಕಂಟ್ರೋಲ್ ಮಾಡುವ ಉದ್ದೇಶದಿಂದ ತರಾತುರಿಯಲ್ಲಿ ಕ್ಷೇತ್ರದ ಹೊರಗಿನವರಾದ ಡಿ.ಬಿ.ನಾಯಕ ಎಂಬ ಆಸಾಮಿಯನ್ನು ತಂದು ತನ್ನ ಅಭ್ಯರ್ಥಿಯಾಗಿ ಘೋಷಿಸಿದ್ದಲ್ಲದೇ ನಾಮಪತ್ರವನ್ನೂ ಸಲ್ಲಿಸಲಾಗಿದೆ. ಈ ಡಿ.ಬಿ.ನಾಯಕ ನಿವೃತ್ತ ಕೆ.ಎ.ಎಸ್. ಅಧಿಕಾರಿ. ಅಧಿಕಾರದಲ್ಲಿದ್ದಾಗ ಕಂಡಕಂಡಲ್ಲಿ ಅಕ್ರಮವಾಗಿ ತಿಂದುಂಡು ವೈಕ್ಕೈ ಹೊಲಸು ಮಾಡಿಕೊಂಡಿರುವ ವ್ಯಕ್ತಿ, ವೃತ್ತಿಯಲ್ಲಿದ್ದಾಗ ಇನ್ನೊಬ್ಬ ಅಧಿಕಾರಿಯನ್ನು ಲೋಕಾಯುಕ್ತ ಬಲೆಗೆ ಕೆಡುವುದಕ್ಕೆ ಈತ ಸ್ಕೆಚ್ ಹಾಕಿದ್ದ. ಆದರ ಸುಳಿವರಿತ ಆ ಅಧಿಕಾರಿ ಈತನ ಮನೆಯ ಮೇಲೆಯೇ ಲೋಕಾಯುಕ್ತ ದಾಳಿಯನ್ನು ಮಾಡಿಸಿಬಿಟ್ಟಿದ್ದ! ಇಲ್ಲಿ ಜೆಡಿಎಸ್‌ಗೆ ಹೇಳಿಕೊಳ್ಳುವಂತಹ ನೆಲೆಯೂ ಇಲ್ಲ, ಲೀಡರುಗಳೂ ಇಲ್ಲ, ಹಾಗಾಗಿ ಹೊರಗಿನವರಾದ ಡಿ.ಬಿ. ನಾಯಕ್ ಠೇವಣಿ ಉಳಿಸಿಕೊಂಡರೆ ಅದೇ ದೊಡ್ಡ ಸಾಧನೆಯಾದೀತು.

ಆಮ್ ಆದ್ಮಿ ಪಕ್ಷದಿಂದ ಭೀಮರಾಯ ಜರದಬಂಡಿ ಎಂಬ ಸಾಮಾನ್ಯ ರೈತ ಮತ್ತು ಕಮ್ಯೂನಿಸ್ಟ್ ಪಾರ್ಟಿ ಆಫ್ ಇಂಡಿಯ (ಮಾರ್ಕ್ಸಿಸ್ಟ್-ಲೆನಿನಿಸ್ಟ್) ಪಕ್ಷದಿಂದ ನಾಗರಾಜ್ ಎಂಬ ಕಾರ್ಯಕರ್ತ ಕಣಕ್ಕಿಳಿದಿದ್ದಾರೆ. ಇಬ್ಬರೂ ಬಹಳ ಪ್ರಾಮಾಣಿಕ, ಸಜ್ಜನ ಮತ್ತು ಬಡವರಿಗಾಗಿ ಮಿಡಿಯುವ ಹೃದಯವುಳ್ಳ ವ್ಯಕ್ತಿಗಳು. ಆದರೆ, ಇಂತಹವರನ್ನು ಗೆಲ್ಲಿಸಿ ಕಳಿಸುವಷ್ಟು ಪ್ರಬುದ್ಧನಾಗಿಲ್ಲ ಇನ್ನೂ ರಾಯಚೂರು ಮತದಾರ.

ಹೀಗಾಗಿ, ಪ್ರಸ್ತುತ ಪರಿಸ್ಥಿತಿಯಲ್ಲಿ ಹಣಾಹಣಿಯೇನಿದ್ದರೂ ಕಾಂಗ್ರೆಸ್ ಮತ್ತು ಬಿಜೆಪಿಗಳ ನಡುವೆಯೇ ಎಂಬುದು ನಿರ್ವಿವಿದಿತ. ರಾಯಚೂರಿನ ಮತದಾರ ಪಾರಂಪರಿಕವಾಗಿ ಕ್ಷೇತ್ರದಲ್ಲಿ ನಿಲ್ಲುವ ಅಭ್ಯರ್ಥಿಗಳನ್ನು ನೋಡಿ ಮತಹಾಕುತ್ತಾನೆಯೇ ಹೊರತು ಪಕ್ಷವನ್ನು ಅಥವಾ ರಾಷ್ಟ್ರೀಯ ನಾಯಕರನ್ನು ನೋಡಿ ಅಲ್ಲ, ಹೀಗಿರುವಾಗಿ ತಥಾಕಥಿತ ಮೋದಿ ಮತ್ತು ರಾಹುಲ್ ಅಲೆಗಳು, ಯುಪಿಎ ಸರ್ಕಾರದ ಹಗರಣಗಳು ಯಾವುದೂ ಇಲ್ಲಿ ಕೆಲಸ ಮಾಡುವುದಿಲ್ಲ,


ರಾಜಾ ಅಮರೇಶ ನಾಯಕ ಜೆಡಿಎಸ್ ತೊರೆದು ಕಾಂಗ್ರೆಸ್ ಅಂಗಳದಲ್ಲಿ ಬಿದ್ದಿರುವುದು, ದೇವದುರ್ಗದ ಅಜ್ಜ ವೆಂಕಟೇಶ್ ನಾಯಕ ತನ್ನ ಮಗ ಬಿ.ವಿ. ನಾಯಕ ಪರ ಗಟ್ಟಿಯಾಗಿ ನಿಂತಿರುವುದು ಹಾಗೂ ಒಟ್ಟಾರೆ ರಾಜ್ಯದಾದ್ಯಂತ ಕಳೆದ ವಿಧಾನಸಭಾ ಚುನಾವಣೆಯಿಂದೀಚೆಗೆ ಕಾಂಗ್ರೆಸ್ ಪರ ಅಲೆ ಬೀಸುತ್ತಿರುವುದು ಕಾಂಗ್ರೆಸ್ ಅಭ್ಯರ್ಥಿ ಬಿ.ವಿ.ನಾಯಕಗೆ ಅನುಕೂಲಕರ ವಾತಾವರಣವನ್ನು ಸೃಷ್ಟಿಸಿದೆ. ಜೊತೆಗೆ ಬಿಜೆಪಿ ಅಭ್ಯರ್ಥಿ ಕೆ. ಶಿವನಗೌಡ ನಾಯಕ ಅಧಿಕಾರದಲ್ಲಿದ್ದಾಗ ಆಡಿದ ದರ್ಪದ ಮಾತುಗಳು, ಮಾಡಿದ ದೌರ್ಜನ್ಯಗಳು, ಅಧಿಕಾರಕ್ಕಾಗಿ, ಹಣಕ್ಕಾಗಿ ಮಂಗನಂತೆ ಪಕ್ಷದಿಂದ ಪಕ್ಷಕ್ಕೆ ಹಾರುವ ಆತನ ಅವಕಾಶವಾದಿ ರಾಜಕಾರಣಗಳು ಆತನಿಗೇ ಮುಳುವಾಗಿ ಬಿ.ವಿ.ನಾಯಕಗೆ ನೆರವಾಗಬಲ್ಲವು. ಬಿ.ವಿ.ನಾಯಕಗಿರುವ ಒಂದು ಸಣ್ಣ ಅಡೆತಡೆ ಎಂದರೆ ಸ್ಥಳೀಯ ಕಾಂಗ್ರೆಸ್ ಪಕ್ಷದಲ್ಲಿರುವ ಒಳಜಗಳ. ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎನ್.ಎಸ್.ಬೋಸರಾಜು ಮತ್ತು ಜಿಲ್ಲಾ ಕಾಂಗ್ರೆಸ್ ಕಮಿಟಿ ಅಧ್ಯಕ್ಷ ವಸಂತ ಕುಮಾರ್ ನೇತೃತ್ವದಲ್ಲಿ ಎರಡು ಬಣಗಳು ಕೆಲಸ ಮಾಡುತ್ತಿವೆ. ಮೊದಲನೇ ಬಣ ರಾಜ್ಯಮಟ್ಟದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಪರವಿದ್ದರೆ ಎರಡನೇ ಬಣ ಕೇಂದ್ರ ರೈಲ್ವೇ ಸಚಿವ ಮಲ್ಲಿಕಾರ್ಜುನ ಖರ್ಗೆ ಪರವಿದೆ. ಮೊನ್ನೆ ರಾಯಚೂರಿಗೆ ಬಂದಿದ್ದ ಸತೀಶ್ ಜಾರಕಿಹೊಳಿಗೂ ಈ ಬಣ ರಾಜಕೀಯ ಕಿರಿಕಿರಿಯುಂಟು ಮಾಡಿದ್ದಲ್ಲದೇ ಅದು ತನ್ನ ಭಾವ ಬಿ.ವಿ.ನಾಯಕನ ಸೋಲಿಗೂ ಕಾರಣವಾಗಬಹುದು ಎಂಬ ಆತಂಕವನ್ನು ಸೃಷ್ಟಿಸಿತ್ತು, ಹೀಗಾಗಿ, ಲೋಕಸಭಾ ಚುನಾವಣೆಯ ಮಟ್ಟಿಗಾದರೂ ಭಿನ್ನಾಭಿಪ್ರಾಯ, ಬಣರಾಜಕೀಯವನ್ನು ಬದಿಗಿಟ್ಟು ಒಗ್ಗಟ್ಟಿನಿಂದ ಚುನಾವಣೆ ಎದುರಿಸಲು ಜಾರಕಿಹೊಳಿ ತಾಕೀತು ಮಾಡಿಹೋಗಿದ್ದಾರೆ. ಅವತ್ತೆ ಬೋಸರಾಜು ಮತ್ತು ವಸಂತಕುಮಾರ್ ಇಬ್ಬರೂ ಜಂಟಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತಾಡಿ ತಮ್ಮ ಒಗ್ಗಟ್ಟನ್ನು ಪ್ರದರ್ಶಿಸಿದರು. ಇಬ್ಬರೂ ಪ್ರಾಮಾಣಿಕವಾಗಿ ಕೆಲಸ ಮಾಡಿದರೆ ಬಿ.ವಿ. ನಾಯಕ ಗೆಲುವು ಖಚಿತವಾಗಲಿದೆ.



ಬಿ.ವಿ. ನಾಯಕ ಬೆಂಬಲಿಗರೊಂದಿಗೆ ...


● ದೊಡ್ಡಿಪಾಳ್ಯ ನರಸಿಂಹಮೂರ್ತಿ

ಫೋಟೋಗಳು: ಸಂತೋಷ್ ಸಾಗರ್

ತುಮಕೂರು: ಬಿಜೆಪಿ-ಕಾಂಗ್ರೆಸ್‌ನಲ್ಲಿ ಭಿನ್ನಮತ ಜೆಡಿಎಸ್‌ನಲ್ಲಿ ಒಗ್ಗಟ್ಟು


ಮುದ್ದಹನುಮೇಗೌಡ


ಕೃಷ್ಣಪ್ಪ


ಬಸವರಾಜು

'ಒಕ್ಕಲಿಗರ ಪಕ್ಷ', 'ಅಪ್ಪ-ಮಗ-ಸೊಸೆ ಪಕ್ಷ' ಎಂಬ ಹಣೆ ಪಟ್ಟಿಯಿಂದ ಹೊರಬಂದು ಪಕ್ಷದ ಹೆಸರಿಗೆ ಅಂಟಿ ಕೊಂಡಿರುವ ಜಾತ್ಯತೀತ ಎಂಬುದನ್ನು ಸಾಬೀತುಪಡಿಸಲು ಹೊರಟಂತಿದೆ ಜೆಡಿಎಸ್. ಹೀಗಾಗಿಯೇ ಒಕ್ಕಲಿಗರೇ ಬಹು ಸಂಖ್ಯಾತರಾಗಿರುವ ತುಮಕೂರು ಲೋಕಸಭಾ ಕ್ಷೇತ್ರಕ್ಕೆ ಯಾದವ ಜನಾಂಗದ 'ಏಕಮೇವ ನಾಯಕ' ಎ. ಕೃಷ್ಣಪ್ಪನವರನ್ನು ಯಾಗದ ಕುದುರೆಯಾಗಿ ಬಿಟ್ಟು ತಾವೇ ಅದರ ಬೆಂಗಾವಲಿಗೆ ನಿಂತುಬಿಟ್ಟಿದ್ದಾರೆ ದೇವೇಗೌಡರು.

ತೃತೀಯ ರಂಗ ನಿರ್ಣಾಯಕ ಪಾತ್ರ ವಹಿಸಬಹುದಾದ ಈ ಸಮಯದಲ್ಲಿ ಜೆಡಿಎಸ್‌ಗೆ ದೊರೆಯಬಹುದಾದ ಒಂದೊಂದು ಸ್ಥಾನ ಕೂಡಾ ಅಮೂಲ್ಯವಾದುದು. ರಾಷ್ಟ್ರ ಮಟ್ಟದಲ್ಲಿ ತೃತೀಯ ರಂಗ ಮೂರಂಕಿ ದಾಟಿ, ಕರ್ನಾಟಕದಲ್ಲಿ ಜೆಡಿಎಸ್ ಎರಡಂಕಿ ದಾಟಿದರೆ ದೇವೇ ಗೌಡರು ಪ್ರಧಾನಿ ಪಟ್ಟದ ರೇಸಿನಲ್ಲಿ ಮಂಚೂಣಿಯಲ್ಲಿರುತ್ತಾರೆ.

ಒಂದುವೇಳೆ ಅದಾಗದೇ ರಾಷ್ಟ್ರಮಟ್ಟದಲ್ಲಿ ಬಿಜೆಪಿಯೇತರ ಸರ್ಕಾರ ರಚನೆಯಾಗಿ, ಕರ್ನಾಟಕದಲ್ಲಿ ಜೆಡಿಎಸ್ ಐದಕ್ಕಿಂತ ಹೆಚ್ಚು ಸ್ಥಾನಗಳಿಸಿದರೆ ದೇವೇಗೌಡರು ತೃತೀಯ ರಂಗದ ಅಧ್ಯಕ್ಷರಾಗಿ, ಕುಮಾರಸ್ವಾಮಿ ಕೇಂದ್ರ ಸಚಿವರಾಗಬಹುದು ಎಂಬ ಲೆಕ್ಕಾಚಾರ ಜೆಡಿಎಸ್‌ನದು. ಹಾಗಾಗಿಯೇ ಜೆಡಿಎಸ್ ಗೆಲುವಿನ ಸಾಧ್ಯತೆ ಹೆಚ್ಚಾಗಿರುವ ತುಮಕೂರಿನಂಥ ಒಕ್ಕಲಿಗರ ಬಾಹುಳ್ಯವುಳ್ಳ ಕ್ಷೇತ್ರದಲ್ಲಿ ದೇವೇಗೌಡರು ಯಾದವರ ಅಭ್ಯರ್ಥಿಯನ್ನು ನಿಲ್ಲಿಸಿ ಕಾಂಗ್ರೆಸ್-ಬಿಜೆಪಿ ಎರಡಕ್ಕೂ ಪಂಥಾಹ್ವಾನ ನೀಡಿದ್ದಾರೆ. ತುಮಕೂರಿನಲ್ಲಿ ಎ.ಕೃಷ್ಣಪ್ಪ ಗೆದ್ದರೆ ಜೆಡಿಎಸ್‌ನ ಜಾತ್ಯತೀತ ಎಂಬ ಪದಕ್ಕೆ ಅನ್ವರ್ಥಕ. ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆಯುವ ಇರಾದೆ ದೇವೇಗೌಡರದು.

ಹಿಂದುಳಿದ ವರ್ಗದ ನಾಯಕ


ಜೆಡಿಎಸ್ ಗೆಲ್ಲಬಹುದಾದ ಕ್ಷೇತ್ರಗಳಲ್ಲಿ ತುಮಕೂರು ಕೂಡಾ ಒಂದು. ಒಕ್ಕಲಿಗರು ಇಲ್ಲಿ ಬಹುಸಂಖ್ಯಾತರು. ನಂತರದಲ್ಲಿ ಲಿಂಗಾಯತರು, ಯಾದವರು, ಕುರುಬರು, ಮುಸ್ಲಿಂರು ಬರುತ್ತಾರೆ. ಇವರೆಲ್ಲ ಒಂದೆಡೆಯಾದರೆ ಹಿಂದುಳಿದ ವರ್ಗದ ಮತದಾರರ ಸಂಖ್ಯೆ ಶೇಕಡ 50 ರಷ್ಟನ್ನು ದಾಟುತ್ತದೆ. ದೇವೇಗೌಡರು ಒಕ್ಕಲಿಗರ ಪ್ರಶ್ನಾತೀತ ನಾಯಕರಾದರೆ; ಎ.ಕೃಷ್ಣಪ್ಪ, ಸಿದ್ದರಾಮಯ್ಯನವರಿಗಿಂತ ಮೊದಲೇ ಹಿಂದುಳಿದ ವರ್ಗದವರನ್ನು ಸಂಘಟಿಸಿದ್ದವರು. ಕೃಷ್ಣಪ್ಪ ಕಟ್ಟಿದ ಹಿಂದುಳಿದ ವರ್ಗದವರ ಪಡೆಯನ್ನು ಸಿದ್ದರಾಮಯ್ಯ ಒಡೆಯಲು ಯತ್ನಿಸಿದರಾದರೂ ಅದರಲ್ಲವರು ಸಂಪೂರ್ಣ ಯಶಸ್ವಿಯಾಗಲಿಲ್ಲ. ಸಿದ್ದರಾಮಯ್ಯ ಮತ್ತವರ ಬೆಂಬಲಿಗರು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಆಯೋಜಿಸಿದ ಯಾದವ ಸಮಾವೇಶಕ್ಕೆ ಬಂದಿದ್ದವರ ಸಂಖ್ಯೆ ಐದು ಸಾವಿರ ಕೂಡಾ ದಾಟಿರಲಿಲ್ಲ. ಅದೇ ಎ.ಕೃಷ್ಣಪ್ಪ ತುಮಕೂರಿನಲ್ಲಿ ಸಂಘಟಿಸಿದ್ದ ಮಹಿಳಾ ಸಮಾವೇಶಕ್ಕೆ ಹತ್ತಿರತ್ತಿರ ಲಕ್ಷದಷ್ಟು ಮಹಿಳೆಯರು ಜಮಾಯಿಸಿದ್ದರು. ಅದರಲ್ಲಿ ಅರ್ಧಕ್ಕಿಂತ ಹೆಚ್ಚು ಮಹಿಳೆಯರು ಹಿಂದುಳಿದ ವರ್ಗಕ್ಕೆ ಸೇರಿದ್ದು ವಿಶೇಷವಾಗಿತ್ತು.

ದೇವೇಗೌಡರ 'ಪ್ರತಿಷ್ಠೆ'ಯ ಅಭ್ಯರ್ಥಿ

ತುಮಕೂರಿನ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿಯಿಂದ ಲಿಂಗಾಯತ ಜನಾಂಗಕ್ಕೆ ಸೇರಿರುವ ಬಸವರಾಜು ಅವರು ಅಭ್ಯರ್ಥಿಯಾದರೆ; ಕಾಂಗ್ರೆಸ್‌ನಿಂದ ಒಕ್ಕಲಿಗ ಜನಾಂಗದ ಮುದ್ದಹನುಮೇಗೌಡರು ಹುರಿಯಾಳು. ಇನ್ನು ಈ ಲೋಕಸಭಾ ಕ್ಷೇತ್ರಕ್ಕೆ ಒಕ್ಕಲಿಗ ಅಭ್ಯರ್ಥಿಯನ್ನೇ ನಿಲ್ಲಿಸಬಹುದು ಎಂಬ ನಿರೀಕ್ಷೆ ಜೆಡಿಎಸ್‌ನ ಒಕ್ಕಲಿಗ ಶಾಸಕರಲ್ಲೂ ಇತ್ತು. ಆದರೆ ಎ.ಕೃಷ್ಣಪ್ಪನವರನ್ನು ಗಟ್ಟಿಯಾಗಿ ಪ್ರತಿಷ್ಠಾಪಿಸಿದ್ದು ದೇವೇಗೌಡರೆ. ಎ.ಕೃಷ್ಣಪ್ಪ ನಾಮಪತ್ರ ಸಲ್ಲಿಸುವಾಗ ತಮ್ಮ ಅನಾರೋಗ್ಯದ ನಡುವೆಯೂ ತುಮಕೂರಿನ ತನಕ ಬಂದು ಸಂಚಲನ ಮೂಡಿಸಿದರು. ಮಾತ್ರವಲ್ಲ, ಅಂದು ಜೆಡಿಎಸ್‌ನ ಎಲ್ಲಾ ಶಾಸಕರು ಹಾಗೂ ಗೌರಿಶಂಕರ ಕೂಡಾ ಹಾಜರಿರುವಂತೆ ಮುತುವರ್ಜಿ ವಹಿಸಿ ತುಮಕೂರಿನ ಅಭ್ಯರ್ಥಿಯ ಗೆಲುವು ತಮ್ಮ ಪ್ರತಿಷ್ಠೆಯ ಸಂಕೇತ ಎಂಬ ಮೆಸೇಜನ್ನು ಅಗತ್ಯಕ್ಕಿಂತ ಸ್ಪಷ್ಟವಾಗಿ ರವಾನಿಸಿದ್ದರು. ದೇವೇಗೌಡರು ಪ್ರಧಾನಿಯಾಗಬೇಕಾದರೆ ಜೆಡಿಎಸ್‌ಗೆ ಮತ ನೀಡಬೇಕು. ಜೆಡಿಎಸ್ ಹೆಚ್ಚು ಸ್ಥಾನಗಳನ್ನು ಪಡೆಯಬೇಕಾದರೆ ಎ.ಕೃಷ್ಣಪ್ಪ ತುಮಕೂರಿನಿಂದ ಗೆಲ್ಲಬೇಕು. ಹೀಗಾಗಿ ಒಕ್ಕಲಿಗರು ಎ.ಕೃಷ್ಣಪ್ಪನವರಿಗೆ ಮತ ನೀಡಬೇಕು ಎಂಬುದು ದೇವೇಗೌಡರ ಮೆಸೇಜಿನ ಸಾರಾಂಶವಾಗಿದೆ.

ಬಿಜೆಪಿಯಲ್ಲಿ ಬಂಡಾಯದ ಬೇಗೆ

ಬಿಜೆಪಿಗೆ ರಾಜ್ಯದ ಎಲ್ಲೆಡೆ ಇರುವಂತೆಯೇ ಇಲ್ಲಿಯೂ ಬಂಡಾಯವಿದೆ. ಬಿಜೆಪಿಯ ಬಸವರಾಜು ಬಾಯಿಹರುಕ. ಅಡ್ವಾಣಿಯಂತಹ ಹಿರಿಯ ನಾಯಕರ ಬಗ್ಗೆಯೇ ಹಗುರವಾಗಿ ಮಾತನಾಡಿದಾತ. ಬಿಜೆಪಿಯ ಸೂತ್ರಧಾರರಾದ ಸಂಘ ಪರಿವಾರದವರ ಜತೆ ಕೂಡಾ ಸರಿಯಿಲ್ಲ. ಜತೆಗೆ ಇದೇ ಕ್ಷೇತ್ರದ ಟಿಕೆಟ್ ಮೇಲೆ ಕಣ್ಣಿಟ್ಟಿದ್ದ ಸಂದೀಶ್, ಸೊಗಡು ಶಿವಣ್ಣರಂತಹವರಿಗೂ ಬಸವರಾಜು ಅವರಿಗೂ ಹಾವು-ಮುಂಗುಸಿಯಂತಹ ದ್ವೇಷ. ಹೀಗಾಗಿ ಇವರೆಲ್ಲರಿಗೆ ಯಾರೇ ಗೆದ್ದರೂ ಪರವಾಗಿಲ್ಲ, ಬಸವರಾಜ್ ಗೆಲ್ಲಬಾರದು ಎಂಬ ಒನ್ ಪಾಯಿಂಟ್ ಅಜೆಂಡಾ. ಆರೆಸ್ಸೆಸ್‌ನ



ತಂತ್ರಗಾರಿಕೆಯನ್ನು ಮೈಗೂಡಿಸಿಕೊಂಡಿರುವ ಸೊಗಡು ಶಿವಣ್ಣ ಬಸವರಾಜುರನ್ನು ಸೋಲಿಸಲು ಎಂಥ ಮಸಲತ್ತನ್ನಾದರೂ ಮಾಡಲು ಹೇಸದವರು.

ತುಮಕೂರಿನ ಬಲಹೀನ ಬಿಜೆಪಿ

ಹಿಂದಿನ ಸಂಸತ್ ಸದಸ್ಯರಾಗಿದ್ದ ಬಸವರಾಜು ಕನಿಷ್ಠ ಜಿಲ್ಲಾ ಬಿಜೆಪಿಗಾದರೂ ನಿಷ್ಠರಾಗಿರಲಿಲ್ಲ. ಸಂಸದರಾಗಿ ಆಯ್ಕೆಯಾದ ನಂತರ ಒಂದು ದಿನಕ್ಕಾದರೂ ಜಿಲ್ಲಾ ಬಿಜೆಪಿ ಕಚೇರಿಗೆ ಭೇಟಿ ನೀಡುವ ತಪ್ಪು ಮಾಡಿಲ್ಲ. ಕುಣಿಗಲ್‌ನಿಂದ ಬಿಜೆಪಿ ಪರ ಸ್ಪರ್ಧಿಸಿ ಗಣನೀಯ ಮತಗಳನ್ನು ಗಳಿಸಿದ್ದ ಕೃಷ್ಣ ಕುಮಾರ್, ಬಸವರಾಜು ಜತೆಗಿಲ್ಲ. ಇನ್ನು ಬಸವರಾಜುರೆ ತುಮಕೂರಿನಲ್ಲಿ ಕಟ್ಟಿ ಬೆಳೆಸಿದ ಕೆಜೆಪಿ ಪಕ್ಷದ ವತಿಯಿಂದ ತುರುವೇಕೆರೆ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಮತಗಳಿಕೆಯಲ್ಲಿ ಎರಡನೇ ಸ್ಥಾನ ಪಡೆದಿದ್ದ ಮಸಾಲೆ ಜಯರಾಂ ಈಗ ಕಾಂಗ್ರೆಸ್‌ನಲ್ಲಿದ್ದಾರೆ. ಹೀಗಾಗಿ ಬಸವರಾಜು ನಂಬಿಕೊಂಡಿರೋದು ಬಿಜೆಪಿ ಹೈಕಮಾಂಡನ್ನೇ ಬಗ್ಗಿಸಿ ತಮಗೆ ಟಿಕೆಟ್ ಕೊಡಿಸಿದ ಯಡಿಯೂರಪ್ಪನವರನ್ನು. ಆದರೆ ಶಿವಮೊಗ್ಗದಲ್ಲಿ ಯಡಿಯೂರಪ್ಪನವರ ವಿರುದ್ಧ ಗೀತಾ ಶಿವರಾಜಕುಮಾರ್ ಕಣದಲ್ಲಿರುವುದರಿಂದ ಯಡಿಯೂರಪ್ಪ ಅಲ್ಲೆ ಹೆಣಗಾಡಬೇಕಿದೆ. ಇನ್ನು ತುಮಕೂರಿಗೆ ಬಂದು ಬಸವರಾಜುರನ್ನು ಗೆಲ್ಲಿಸೋದು ದೂರದ ಮಾತೇ ಆಗಿದೆ. ಹೇಗೇ ಕೂಡಿ ಕಳೆದು, ಗುಣಿಸಿ ಭಾಗಿಸಿದರೂ ಬಸವರಾಜುಗೆ ಲಾಭವಾಗೋ ಸಾಧ್ಯತೆ ಕಡಿಮೆಯೇ.

ಮುದ್ದಹನುಮೇಗೌಡರ ಮಗ್ಗುಲ ಮುಳ್ಳು

ಮುದ್ದಹನುಮೇಗೌಡರು ಮೂಲತಃ ಸಜ್ಜನರೇ. ಆದ್ರೂ ಮುಂಗೋಪಿಗಳು. ಯಾರನ್ನೂ ಸುಲಭಕ್ಕೆ ನಂಬುವವರಲ್ಲ. ಜತೆಗೆ ಜಿಲ್ಲಾ ಕಾಂಗ್ರೆಸ್‌ನಲ್ಲೆ ಭುಗಿಲೆದ್ದ ಬಂಡಾಯ. ಮಗನಿಗೆ ಟಿಕೆಟ್ ಕೊಡಿಸಬೇಕೆಂದು ಶತಾಯಗತಾಯ ಪ್ರಯತ್ನಿಸಿದ್ದ ಜಿಲ್ಲಾ ಸಚಿವ ಟಿ.ಬಿ.ಜಯಚಂದ್ರರಿಗೆ ಸಹಜವಾಗಿಯೇ ಮುದ್ದಹನುಮೇಗೌಡರ ಬಗ್ಗೆ ಸಿಟ್ಟಿದೆ. ತುಮಕೂರಿನ ಏಕಮೇವಾ ಒಕ್ಕಲಿಗ ನಾಯಕ ಕಾಂಗ್ರೆಸ್‌ನಲ್ಲಿ ತಾನೊಬ್ಬನೇ ಎಂದು ಕ್ಲೈಂ ಮಾಡಿಕೊಳ್ಳುತ್ತಿರುವ ಜಯಚಂದ್ರರಿಗೆ ಜಿಲ್ಲೆಯಿಂದ ಮತ್ತೊಬ್ಬ ಒಕ್ಕಲಿಗ ನಾಯಕ ಸಂಸದನಾಗೋದು ಅಪಥ್ಯದ ವಿಷಯ. ಮುದ್ದಹನುಮೇಗೌಡರಿಗೆ ಬಹುಸಂಖ್ಯಾತ ಒಕ್ಕಲಿಗರು ಮತ ಹಾಕಬಾರದು ಎನ್ನುವ ಉದ್ದೇಶ ಹೊಂದಿರುವ ಟಿ.ಬಿ.ಜಯಚಂದ್ರರವರು ತಮ್ಮ ಉಪಜಾತಿಯವರಾದ ಕುಂಚಟಿಗ ಒಕ್ಕಲಿಗರನ್ನು ಎತ್ತಿಕಟ್ಟಿದ್ದಾರೆ. ಯಾವುದೇ ಕಾರಣಕ್ಕೂ ಮುದ್ದಹನುಮೇ ಗೌಡರಿಗೆ ಮತಹಾಕದಂತೆ ಸ್ಥಳೀಯ ಕುಂಚಟಿಗ ಜನಾಂಗದ ನಾಯಕರುಗಳಿಗೆ ಸಂದೇಶ ಹೋಗಿದೆ. ಇನ್ನೂ ಒಂದು ಹೆಜ್ಜೆ ಮುಂದಿಟ್ಟಿರುವ ಸಚಿವ ಟಿ.ಬಿ.ಜಯಚಂದ್ರ 'ಮುದ್ದಹನುಮೇಗೌಡರು ಸೋತ್ರೆ ನಾನು ಕಾರಣನಲ್ಲ' ಎಂದು ಬಹಿರಂಗವಾಗೇ ಹೇಳಿಕೊಂಡು ಓಡಾಡುತ್ತಿದ್ದಾರೆ.

ಜೆಡಿಎಸ್‌ಗೆ ಅನುಕೂಲವಾಗೋ ಅಂಶಗಳು

ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ನಾಲ್ಕು ಜನ ಜೆಡಿಎಸ್ ಶಾಸಕರಿದ್ದಾರೆ. ತುರುವೇಕೆರೆಯಿಂದ ಎಂ.ಟಿ.ಕೃಷ್ಣಪ್ಪ ಕೊರಟಗೆರೆಯಿಂದ ಸುಧಾಕರ್‌ಲಾಲ್, ಗುಬ್ಬಿಯಿಂದ ಶ್ರೀನಿವಾಸ ಮತ್ತು ಚಿಕ್ಕನಾಯಕನಹಳ್ಳಿಯಿಂದ ಸುರೇಶ್ ಬಾಬು ಗೆದ್ದು ಬಂದಿದ್ದಾರೆ. ಮಾತ್ರವಲ್ಲ ಇಂದಿಗೂ ಅದೇ ಫಾರ್ಮಿನಲ್ಲಿದ್ದಾರೆ. ಮಧುಗಿರಿ ವಿಧಾನಸಭಾ ಕ್ಷೇತ್ರದಿಂದ ಜೆಡಿಎಸ್ ಪರ ಸ್ಪರ್ಧಿಸಿ ಗಣನೀಯ ಮತಗಳನ್ನು ಪಡೆದಿದ್ದ ವೀರಭದ್ರಯ್ಯ ಕೂಡಾ ಎ.ಕೃಷ್ಣಪ್ಪ ಪರ ಶತಾಯಗತಾಯ ಕೆಲಸ ಮಾಡುತ್ತಿದ್ದಾರೆ. ತುಮಕೂರು ಲೋಕಸಭಾ ಕ್ಷೇತ್ರದಲ್ಲಿ ಸುಮಾರು 70 ಸಾವಿರದಷ್ಟು ತಿಗಳ ಮತದಾರರಿದ್ದಾರೆ. ಈ ಜನಾಂಗದಿಂದ ಆಯ್ಕೆಯಾದ ಎಂಟು ಜನ ನಗರ ಪಾಲಿಕೆ ಸದಸ್ಯರುಗಳು ಜೆಡಿಎಸ್ ಪಕ್ಷದವರೆ. ಹೀಗಾಗಿ ತಿಗಳ ಮತದಾರರು ಪಕ್ಷದ ಬೆನ್ನಿಗಿದ್ದಾರೆ ಎನ್ನುತ್ತಾರೆ ಜೆಡಿಎಸ್‌ನ ಸ್ಥಳೀಯ ಮುಖಂಡರು.

ಇನ್ನುಳಿದಂತೆ ಇದೇ ಲೋಕಸಭಾ ಕ್ಷೇತ್ರದ ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಸಚಿವ ಚೆನ್ನಿಗಪ್ಪನವರ ಪುತ್ರ ಗೌರಿಶಂಕರ್ ತುಮಕೂರಿನ ಗ್ರಾಮಾಂತರ ವಿಧಾನಸಭಾ ಕ್ಷೇತ್ರದಿಂದ ಅತ್ಯಲ್ಪ ಮತದಿಂದ ಸೋತಿದ್ದರು. ಗೌರಿಶಂಕರ್ ಈಗ ಇನ್ನಷ್ಟು ಮತದಾರರನ್ನು ಕ್ಷೇತ್ರಾದ್ಯಂತ ವೃದ್ಧಿಸಿಕೊಂಡಿದ್ದಾರೆ. ತುಮಕೂರು ಜಿಲ್ಲೆಯಲ್ಲಿರುವ ನಾಲ್ವರು ಒಕ್ಕಲಿಗ ಶಾಸಕರು, ಜೊತೆಗೆ ಕುಂಚಟಿಗ ನಾಯಕರಾದ ಗೌರಿಶಂಕರ್, ದೇವೇಗೌಡರ ಪ್ರತಿಷ್ಠೆ ಎ.ಕೃಷ್ಣಪ್ಪನವರನ್ನು ಗೆಲ್ಲಿಸಿಕೊಳ್ಳಲೇಬೇಕಿದೆ. ಜತೆಗೆ ಈ ಬಾರಿ 'ದೇವೇಗೌಡರು ಪ್ರಧಾನಿಯಾಗುವ ಸಾಧ್ಯತೆಗಳಿವೆ' ಎಂಬ ಮಾತೂ ಜೆಡಿಎಸ್‌ಗೆ ವರದಾನವಾಗಬಹುದೇನೋ? ಗೌರಿಶಂಕರ್ ತಮ್ಮ ತುಮಕೂರಿನ ಮನೆಯನ್ನೇ ಎ.ಕೃಷ್ಣಪ್ಪನವರ ತಾತ್ಕಾಲಿಕ ವಾಸ್ತವ್ಯಕ್ಕೆ ಬಿಟ್ಟುಕೊಟ್ಟು, ತಾವು ಲಾಡ್ಜ್ ಒಂದರಲ್ಲಿ ಬೀಡುಬಿಟ್ಟು ಎ.ಕೃಷ್ಣಪ್ಪನವರ ಪರ ಪ್ರಚಾರಕ್ಕೆ ಇಳಿದಿರುವುದನ್ನು ಕಂಡರೆ ಜೆಡಿಎಸ್‌ಗೆ ಜಿಲ್ಲೆಯಲ್ಲಿ ಬಂಡಾಯದ ಯಾವುದೇ ಲಕ್ಷಣಗಳು ಗೋಚರಿಸುತ್ತಿಲ್ಲ.

ದೇವೇಗೌಡರ ಮೇಲಿನ ಪ್ರೀತಿಗೆ ಗಂಗಾಟಿಗಾರ್ ಒಕ್ಕಲಿಗರು-ಕುಂಚಟಿಗ ಒಕ್ಕಲಿಗರು ಎಂಬ ಉಪಜಾತಿ ಭೇದ ಮರೆತು ಸಮಗ್ರ ಒಕ್ಕಲಿಗರು ಒಂದಾಗಿ ಮತನೀಡಿದರೆ, ಇವರೊಂದಿಗೆ ಎ.ಕೃಷ್ಣಪ್ಪನವರ ಕಾರಣಕ್ಕೆ ಹಿಂದುಳಿದ ವರ್ಗದವರು ಬೆನ್ನಿಗೆ ನಿಂತರೆ ಮುದ್ದಹನುಮೇ ಗೌಡರು ಏದುಸಿರು ಬಿಡಬೇಕಾಗುತ್ತೆ ಎನ್ನುತ್ತಾರೆ ಸ್ಥಳೀಯರು. ಇದಕ್ಕೆ ಪೂರಕವಾಗಿ ಹಿಂದುಳಿದ ವರ್ಗದ ಭಾಸ್ಕರಪ್ಪನವರು ಒಂದು ಬಾರಿ ಸಂಸದರಾಗಿ ಚುನಾಯಿತರಾಗಿದ್ದನ್ನು ಉಲ್ಲೇಖಿಸುತ್ತಾರೆ.


ಎಚ್‌ಎಂಟಿ ಪುನಶ್ಚೇತನ ಪ್ರಶ್ನೆ

ಬಿಜೆಪಿಯ ಬಸವರಾಜು ಕ್ಷೇತ್ರಕ್ಕೆ ಏನೂ ಮಾಡಿಲ್ಲವೆಂಬ ನೋವು ತುಮಕೂರಿಗರಿಗಿದೆ. ಅದರಲ್ಲೂ ಹೆಚ್‌ಎಂಟಿ ಕಾರ್ಖಾನೆ ವಿಷಯದಲ್ಲಿ ತುಮಕೂರಿನ ಜನರಿಗೆ ಭಾವನಾತ್ಮಕ ಸಂಬಂಧವಿದೆ. ತುಮಕೂರಿನ ಘಟಕ ಆರ್ಥಿಕವಾಗಿ ದಿವಾಳಿಯೆದ್ದು, ಸ್ವಯಂನಿವೃತ್ತಿ ಪಡೆಯುವ ನೌಕರರಿಗೆ ಪರಿಹಾರ ನೀಡುವ ಸ್ಥಿತಿಯಲ್ಲೂ ಇಲ್ಲ. ಆದರೆ ಬೆಂಗಳೂರಿನ ಹೆಚ್‌ಎಂಟಿ ಪುನಶ್ಚೇತನಕ್ಕೆ ಎ.ಕೃಷ್ಣಪ್ಪ ನೀಡಿರುವ ಕೊಡುಗೆಯಿಂದ ಸಂಪ್ರೀತರಾಗಿರುವ ಕಾರ್ಮಿಕ ಮುಖಂಡರು ತುಮಕೂರಿನ ಮತದಾರರ ಮೇಲೆ ಕೃಷ್ಣಪ್ಪನವರ ಪರ ಪ್ರಭಾವ ಬೀರುತ್ತಿದ್ದಾರೆ. ಜತೆಗೆ ಕೃಷ್ಣಪ್ಪ ಬೆಂಗಳೂರಿನ ತಮ್ಮ ಹಿಂದಿನ ವಿಧಾನಸಭಾ ಕ್ಷೇತ್ರವಾದ ಅಂದಿನ ವರ್ತೂರು- ಇಂದಿನ ಕೆ.ಆರ್.ಪುರಂನಲ್ಲಿ ಆಗಿರುವ ಐಟಿ-ಬಿಟಿ ಪ್ರಗತಿಯನ್ನು ರಸವತ್ತಾಗಿ ಮನವರಿಕೆ ಮಾಡಿಕೊಡುತ್ತಿದ್ದಾರೆ. ಹೆಚ್‌ಎಂಟಿ ಪುನಶ್ಚೇತನಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಕೃಷ್ಣಪ್ಪ ಹೇಳುತ್ತಿದ್ದಾರೆ.

ಒಟ್ಟಾರೆಯಾಗಿ ಹೇಳಬೇಕಾದರೆ ಬಸವರಾಜು ಬರೀ ಲಿಂಗಾಯತರನ್ನೇ ಟಾರ್ಗೆಟ್ ಮಾಡಿಕೊಂಡಿದ್ದಾರೆ, ಮುದ್ದಹನುಮೇಗೌಡರು ಒಕ್ಕಲಿಗರು ಮತ್ತು ಕುರುಬರನ್ನು ನೆಚ್ಚಿಕೊಂಡಿದ್ದಾರೆ. ಹೀಗಾಗಿ ಇನ್ನುಳಿದ ಹಿಂದುಳಿದ ವರ್ಗಗಳು ಅನಿವಾರ್ಯವಾಗಿ ಕೃಷ್ಣಪ್ಪನವರ ಬೆನ್ನಿಗೆ ನಿಲ್ಲಬಹುದು. ಜತೆಗೆ ದೇವೇಗೌಡರ ಪ್ರತಿಷ್ಠೆಯೂ ಪಣಕ್ಕಿರುವುದರಿಂದ ಬಹುತೇಕ ಒಕ್ಕಲಿಗರೂ ಸಾಥ್ ನೀಡುವ ಸಾಧ್ಯತೆಗಳಿವೆ ಎನ್ನುತ್ತಾರೆ ಸ್ಥಳೀಯರು.

ಅಂತಿಮವಾಗಿ ಚುನಾವಣೆಯಲ್ಲಿ ಗೆಲ್ಲಲು ಜಾತಿಯೇ ಪ್ರಧಾನವಲ್ಲ ಎಂಬುದನ್ನು ಹಿಂದುಳಿದ ವರ್ಗಗಳ ನಾಯಕರಾಗಿದ್ದ ದೇವರಾಜ್ ಅರಸ್, ವೀರಪ್ಪಮೊಯ್ಲಿ, ಧರ್ಮಸಿಂಗ್ ಮುಂತಾದವರು ಸಾಬೀತುಪಡಿಸಿದ್ದಾರೆ. ಅಷ್ಟೇ ಏಕೆ, ಇಂದಿನ ತುಮಕೂರು ಜೆಡಿಎಸ್ ಅಭ್ಯರ್ಥಿಯಾಗಿರುವ ಎ.ಕೃಷ್ಣಪ್ಪನವರು ಒಂದು ಕಾಲಕ್ಕೆ ಪ್ರತಿನಿಧಿಸುತ್ತಿದ್ದ ವರ್ತೂರು ವಿಧಾನಸಭಾ ಕ್ಷೇತ್ರದ ಒಟ್ಟು ಮತದಾರರ ಸಂಖ್ಯೆ ಸುಮಾರು 12 ಲಕ್ಷ. ಅದರಲ್ಲಿ ಕೃಷ್ಣಪ್ಪನ ಜನಾಂಗವರಾದ ಯಾದವರ ಸಂಖ್ಯೆ ಎರಡು ಸಾವಿರ ಚಿಲ್ಲರೆ ಮಾತ್ರ. ಇಂಥಲ್ಲಿ ಸತತವಾಗಿ ಶಾಸಕರಾಗಿ ಆಯ್ಕೆಯಾಗಿದ್ದ ಕೃಷ್ಣಪ್ಪ ಒಂದೂವರೆ ಲಕ್ಷಕ್ಕೂ ಅಧಿಕ ಸಂಖ್ಯೆಯಲ್ಲಿರುವ ಯಾದವ ಮತದಾರರ ಕ್ಷೇತ್ರದಲ್ಲಿ ಗೆಲ್ಲಲಾರರೇ ಎನ್ನುತ್ತಾರೆ ರಾಜಕೀಯ ವಿಶ್ಲೇಷಕರು.

■ ಬಿ.ನಾರಾಯಣ್




ಸಂಸ್ಕೃತ ವಿವಿ ಅಕ್ರಮಕ್ಕೆ ಪೇಜಾವರರ ಪೌರೋಹಿತ್ಯ

ಆಟಕ್ಕುಂಟು ಲೆಕ್ಕಕ್ಕಿಲ್ಲ ಎನ್ನುವಂತಿರುವ ಸಂಸ್ಕೃತ ವಿವಿಯಲ್ಲಿ ಆಡಿದ್ದೇ ಆಟ ಎನ್ನುವಂತಾಗಿದೆ. ಕೋರ್ಸುಗಳಿಲ್ಲದೆ, ಸಾಕಷ್ಟು ವಿದ್ಯಾರ್ಥಿಗಳನ್ನೂ ಕಾಣದೆ ಭಣಗುಡುತ್ತಿರುವ ವಿವಿ ಆವರಣ ವೇದಾಂತಗಳನ್ನು ಪಸರಿಸುವುದಕ್ಕಿಂತ ಹೆಚ್ಚಾಗಿ ಕುಲಪತಿ ಮತ್ತು ಕುಲಸಚಿವರ ನಡುವಿನ ಜಿದ್ದಾಜಿದ್ದಿನಿಂದಾಗಿ ಸದ್ದು ಮಾಡುತ್ತಿದೆ. ಇದಕ್ಕೆ ತಾಜಾ ಉದಾಹರಣೆ, ತರಾತುರಿಯಲ್ಲಿ ನಡೆಯುತ್ತಿರುವ ಅಸೋಸಿಯೇಟ್ ಪ್ರೊಫೆಸರ್‌ಗಳ ನೇಮಕಾತಿ. ಮುಂದಿನ ತಿಂಗಳು ಮುಗಿಯಲಿರುವ ತನ್ನ ಅವಧಿಗೂ ಮುನ್ನ ಭರ್ತಿ ಕಾರ್ಯ ಮುಗಿಸಿಬಿಡಬೇಕೆಂದು ಆತುರದಲ್ಲಿದ್ದಂತಿರುವ ಕುಲಪತಿ ಮಲ್ಲೇಪುರಂ ಜಿ. ವೆಂಕಟೇಶ್‌ರ ಕಾರ್ಯವೈಖರಿಯೇ ಹಲವು ಹತ್ತು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ. ಇದಕ್ಕೆ ಪುಷ್ಠಿ ನೀಡುವಂತೆ ನೇಮಕಾತಿಯ ನಿಯಮಗಳನ್ನೆಲ್ಲ ಗಾಳಿಗೆ ತೂರಿ ಅನರ್ಹ ಅಭ್ಯರ್ಥಿಯೊಬ್ಬನನ್ನು ಆಯ್ಕೆ ಮಾಡಲು ಮುಂದಾಗಿರೋದು ಮತ್ತು ಆತನ ಆಯ್ಕೆಯ ಹಿಂದೆ ಖಾವಿಯಿಂದ ಖಾದಿಯವರೆಗೆ ಹೆಸರು ಹರಿದಾಡುತ್ತಿರುವುದಲ್ಲದೆ ಭರ್ಜರಿ ಇಡಗಂಟೂ ಕೈ ಬದಲಾಗಿರುವ ಮಾತೂ ಕೇಳಿಬರುತ್ತಿದೆ.


ಈ ಭಾನಗಡಿ ಯಾವ ಮಟ್ಟ ತಲುಪಿದೆಯೆಂದರೆ ಸ್ವತಃ ವಿವಿಯ ಕುಲಸಚಿವ ಪ್ರೊ. ಪಿ.ಬಿ. ಸಾಂತಪ್ಪನವರೆ ನೇಮಕಾತಿ ವಿರುದ್ಧ ಕೋರ್ಟ್ ಮೆಟ್ಟಿಲೇರಿದ್ದು ಇಡೀ ಪ್ರಕ್ರಿಯೆಯೇ ಅಕ್ರಮ ಅಂತ ಆರೋಪಿಸಿದ್ದಾರೆ. ಕೊಳದಮಠದ ಶಾಂತವೀರ ಸ್ವಾಮಿಯಂತೂ ಕರ್ನಾಟಕ ಸಂಸ್ಕೃತ ವಿಚಾರ ವೇದಿಕೆಯನ್ನು ಹುಟ್ಟುಹಾಕಿ ನೇಮಕಾತಿ ಪ್ರಕ್ರಿಯೆಯನ್ನು ರದ್ದು ಮಾಡಬೇಕೆಂದು ಹೋರಾಟಕ್ಕಿಳಿದಿದ್ದಾರೆ. ಇಷ್ಟೆಲ್ಲಾ ವಿರೋಧದ ನಡುವೆಯೂ ಇತ್ತೀಚೆಗೆ ನಡೆದ ಸಿಂಡಿಕೇಟ್ ಸಭೆಯಲ್ಲಿ ಕುಲಸಚಿವ ಸಾಂತಪ್ಪನವರನ್ನೇ ಹೊರಗಿಟ್ಟು ಇಬ್ಬರು ಅಭ್ಯರ್ಥಿಗಳ ಆಯ್ಕೆಯನ್ನು ಅಂತಿಮಗೊಳಿಸಲಾಗಿದೆ. ಗೊಂದಲಕ್ಕೆ ಕಾರಣವಾಗಿರುವ ಸುಮನ್ ಎನ್ನುವ ಅಭ್ಯರ್ಥಿಯ ಆಯ್ಕೆಯನ್ನು ತಾತ್ಕಾಲಿಕವಾಗಿ ತಡೆಹಿಡಿಯಲಾಗಿದೆಯಾದರು 'ಕಾನೂನು ಸಲಹೆ'ಯ ನೆಪದಲ್ಲಿ ಅವನನ್ನೂ ಆದಷ್ಟು ಬೇಗ ವಿವಿಯೊಳಕ್ಕೆ ತುಂಬುವ ಪ್ರಯತ್ನಗಳು ಜೋರಾಗೇ ನಡೆಯುತ್ತಿವೆ. ಇದಕ್ಕೆ ಉನ್ನತ ಶಿಕ್ಷಣ ಸಚಿವ ಆರ್.ವಿ. ದೇಶಪಾಂಡೆ ಹೆಸರೂ ಬಳಕೆಯಾಗುತ್ತಿದೆ.

ಇದ್ದುದರಲ್ಲಿ ಕೊಂಚ ಪರವಾಗಿಲ್ಲ ಎನ್ನುವ ಶಹಬ್ಬಾಸ್‌ಗಿರಿ ಗಳಿಸಿಕೊಂಡಿದ್ದ ಮಲ್ಲೇಪುರಂ ವೆಂಕಟೇಶ್ ತಮ್ಮ ಅಧಿಕಾರಾವಧಿಯ ಕೊನೇ ಘಳಿಗೆಯಲ್ಲಿ ಮಾಡಿಕೊಂಡಿರುವ ಈ ಅವಾಂತರ ಅವರ ವೃತ್ತಿ ಬದುಕಿಗೇ ಮಸಿ ಬಳಿಯುತ್ತಿದೆ. ಕಳೆದ ವರ್ಷ ಅಧಿಸೂಚನೆಯೊಂದನ್ನು ಹೊರಡಿಸಿದ ಸಂಸ್ಕೃತ ವಿವಿ ಆರು ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗಳ ಭರ್ತಿಗೆ ಅರ್ಜಿ ಆಹ್ವಾನಿಸಿತ್ತು. ಅದರಲ್ಲಿ ಮೂರು ಮೀಸಲು ಹುದ್ದೆಗಳಾಗಿದ್ದರೆ ಇನ್ನು ಮೂರು ಸಾಮಾನ್ಯ ವರ್ಗದವು. ನೇಮಕಾತಿಯ ಆರಂಭದಲ್ಲೇ ಕುಲಸಚಿವ ಸಾಂತಪ್ಪನವರಿಂದ ವಿಘ್ನ ಎದುರಾಗಿತ್ತು. ಕೋರ್ಸುಗಳೇ ಇಲ್ಲ, ವಿದ್ಯಾರ್ಥಿಗಳೂ ಇಲ್ಲ ಈಗಲೇ ತರಾತುರಿಯ ನೇಮಕಾತಿ ಯಾಕೆ ಅಂತ ತಗಾದೆ ತೆಗೆದಿದ್ದರು. ವಿವಿ ನಿಯಮಗಳ ಪ್ರಕಾರ ಇಂತಹ ನೇಮಕಾತಿಗಳ ಕಾರ್ಯವನ್ನು ಕುಲಸಚಿವರ ಮುಖಾಂತರವೇ ನಡೆಸಬೇಕು. ಆದರೆ ಕುಲಸಚಿವರೇ ತಗಾದೆ ತೆಗೆದಿದ್ದರಿಂದ ಉಪಕುಲಸಚಿವ ಪ್ರಕಾಶ್ ಪಾಗೋಜಿಯ ಕೈಗೆ ನೇಮಕಾತಿ ಅಧಿಕಾರ ಹಸ್ತಾಂತರಿಸಿದ ಕುಲಪತಿ ಮಲ್ಲೇಪುರಂ ವಿವಿ ನಿಯಮಗಳನ್ನೇ ಗಾಳಿಗೆ ತೂರಿದ್ದರು. ಬೈಲಾ ಪ್ರಕಾರ ಕುಲಸಚಿವ ಅನಾರೋಗ್ಯದ ಕಾರಣ ಇಲ್ಲವೇ ಪ್ರವಾಸದ ಕಾರಣ ದೀರ್ಘಕಾಲೀನ ರಜೆಯಲ್ಲಿದ್ದಾಗ ಮಾತ್ರ ಇಂತಹ ಮಹತ್ವದ ಅಧಿಕಾರಗಳನ್ನು ಉಪಕುಲಸಚಿವರಿಗೆ ಒಪ್ಪಿಸಬಹುದು. ಆದರೆ ಸಾಂತಪ್ಪನವರು ಕರ್ತವ್ಯದಲ್ಲಿದ್ದಾಗಲೂ ಪ್ರಕಾಶ್ ಪಾಗೋಜಿಗೆ ಅಧಿಕಾರ ಹಸ್ತಾಂತರಿಸಿದ್ದರು. ಅಸಲಿ ಅವ್ಯವಹಾರ ಶುರುವಾಗಿದ್ದೇ ಆಗಿನಿಂದ.


..ಉಪಕುಲಸಚಿವ ಪ್ರಕಾಶ್ ಪಾಗೋಜಿ ಕೈ ಬಾಯಿ ಶುದ್ಧವಿಲ್ಲದ ಆಸಾಮಿ ಅಂತಲೇ ಹೆಸರು ಮಾಡಿಕೊಂಡಂತವ. ಮುಂದೆ ಈ ಪಾಗೋಜಿ ನೇಮಕಾತಿ ಕುರಿತು ಸರ್ಕಾರದೊಂದಿಗೆ ಪತ್ರ ವ್ಯವಹಾರ ನಡೆಸಿದಾಗಲೂ ಸರ್ಕಾರದ ಶಿಕ್ಷಣ ಇಲಾಖೆಯ ಅಧೀನ ಕಾರ್ಯದರ್ಶಿಯಾದ ಪ್ರಕಾಶ್‌ರಾವ್ ಕೇಸರ್‌ಕರ್ ಅವರು ಪತ್ರ (ಸಂಖ್ಯೆ ಇಡಿ 181 ಯುಎಸ್‌ಆರ್ 2014, ದಿನಾಂಕ 17.02.2014) ಬರೆದು ಕುಲಸಚಿವರು ಮಾಡಬೇಕಾದ ಕೆಲಸವನ್ನು




ಪಾಗೋಜಿ



ಸುಮನ್



ಮಲ್ಲೇಪುರ ವೆಂಕಟೇಶ್



ದೇಶಪಾಂಡೆ

ಉಪಕುಲಸಚಿವರಾಗಿ ನೀವ್ಯಾಕೆ ಮಾಡುತ್ತಿದ್ದೀರಿ ಸಮಜಾಯಿಷಿ ಕೊಡಿ ಅಂತ ಝಾಡಿಸಿದ್ದೂ ಆಗಿದೆ.

ಆರಂಭದಲ್ಲಿ ನೇಮಕಾತಿಗೆ ಸಂಬಂಧಿಸಿದಂತೆ 1:2 ಅನುಪಾತದಲ್ಲಿ 12 ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಆಖೈರು ಮಾಡಲಾಗಿತ್ತು. ಆದರೆ ಸಂದರ್ಶನಕ್ಕೂ ಒಂದು ದಿನ ಮೊದಲು 12 ಅಭ್ಯರ್ಥಿಗಳ ಸಂಖ್ಯೆಯನ್ನು ಏಕಾಏಕಿ ಆರಕ್ಕೆ ಇಳಿಸಿ ಅಷ್ಟು ಜನರಿಗಷ್ಟೆ ಸಂದರ್ಶನ ನಡೆಸಿದ್ದರು. ಮೂರು ಮೀಸಲು ಹುದ್ದೆಗಳಿಗೆ ಯಾರೂ ಅರ್ಹರು ಆಯ್ಕೆಯಾಗದ್ದರಿಂದ ಅವನ್ನು ಬ್ಯಾಕ್‌ಲಾಗ್ ಅಕೌಂಟಿಗೆ ತಳ್ಳಿದ್ದರು. ಉಳಿದ ಮೂರು ಸಾಮಾನ್ಯ ಹುದ್ದೆಗೆ ಆಯ್ಕೆಯಾದವರೆಲ್ಲಾ ಮಾಧ್ವ ಬ್ರಾಹ್ಮಣರೆ! ಅದರಲ್ಲಿ ಸುಮನ್ ಎಂಬಾತನ ಆಯ್ಕೆಯಂತೂ ಹಲವು ಅಚ್ಚರಿಗೆ ಕಾರಣವಾಗಿತ್ತು. ಯಾಕೆಂದರೆ ಹುದ್ದೆಗೆ ಬೇಕಾದ ಅರ್ಹತೆಗಳಲ್ಲಿ ಬಹುಪಾಲು ಆತನಿಗೆ ಇರಲೇ ಇಲ್ಲ. ಅಷ್ಟಕ್ಕೂ ಒಂದು ವರ್ಷ ಮುಂಚೆ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಗೆ ಅರ್ಜಿ ಆಹ್ವಾನಿಸಿದ್ದಾಗ ಆತನೂ ಅರ್ಜಿ ಸಲ್ಲಿಸಿದ್ದ. ಅವನ ಅರ್ಜಿಯನ್ನು ಪರಿಶೀಲಿಸಿದ್ದ ಇದೇ ಆಯ್ಕೆ ತಂಡ ಆತ ಸಂದರ್ಶನಕ್ಕೂ ಲಾಯಕ್ಕಲ್ಲ ಅಂತ ತೀರ್ಮಾನಿಸಿ ಕೈಬಿಟ್ಟಿತ್ತು. ಆದರೂ ಅವರಿವರ ಪ್ರಭಾವ ಬಳಸಿ ಸಂದರ್ಶನಕ್ಕೆ ಅರ್ಹತೆ ಗಿಟ್ಟಿಸಿಕೊಂಡಿದ್ದ. ಅವತ್ತು ಸಂದರ್ಶನ ಮಾಡಲು ಬಂದಿದ್ದ ತಿರುಪತಿಯ ದೇವನಾಥನ್ ಎಂಬುವವರು ಸುಮನ್‌ನ ಪಾಂಡಿತ್ಯ ಪ್ರಾವೀಣ್ಯತೆಯನ್ನು ಕಂಡು ಸುಸ್ತಾಗಿ ದಾಖಲಾತಿಗಳನ್ನೆಲ್ಲ ಆತನ ಕೈಗಿಟ್ಟು ಕೈಮುಗಿದು ಹೊರಗದುಮಿದ್ದರು.

ಅದಕ್ಕೂ ಮುನ್ನ ಯೋಜನಾ ಸಹಾಯಕ ಹುದ್ದೆಗೂ ಈತ ಸಲ್ಲಿಸಿದ್ದ ಅರ್ಜಿ ಅನರ್ಹತೆಯ ಕಾರಣಕ್ಕೆ ರಿಜೆಕ್ಟ್ ಆಗಿತ್ತು. ಅಸಲಿಗೆ ಇದೇ ಸಾಂತಪ್ಪನವರ ಬಳಿ ಹಿಂದೊಮ್ಮೆ ಪಿಎಚ್.ಡಿ ಮಾಡಲು ಹೋಗಿ ಅರ್ಧಕ್ಕೆ ಕೈಬಿಟ್ಟು ಬಂದಂತವನು ಈತ. ಆಮೇಲೆ ಬೇರೆಲ್ಲೊ ಪಿಎಚ್.ಡಿಯನ್ನೂ ಪೂರೈಸಿಕೊಂಡಿದ್ದ. ಹೀಗೆ ಅಸಿಸ್ಟೆಂಟ್ ಪ್ರೊಫೆಸರ್ ಹುದ್ದೆಯ ಸಂದರ್ಶನಕ್ಕೂ ನಾಲಾಯಕ್ಕಾಗಿದ್ದ ವ್ಯಕ್ತಿ ಒಂದೇ ವರ್ಷದಲ್ಲಿ ಅದಕ್ಕಿಂತಲೂ ಉನ್ನತ ಶ್ರೇಣಿಯ ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗೆ ಅನಾಯಾಸವಾಗಿ ಆಯ್ಕೆಯಾದದ್ದು ಅರ್ಹರ ಹುಬ್ಬೇರುವಂತೆ ಮಾಡಿತ್ತು.

ಅಸೋಸಿಯೇಟ್ ಪ್ರೊಫೆಸರ್ ಹುದ್ದೆಗೆ ಆಯ್ಕೆಯಾಗಬೇಕೆಂದರೆ ಎಂ.ಫಿಲ್ ಅಥವಾ ಪಿಎಚ್‌ಡಿಗೆ ಗೈಡ್ ಮಾಡಿದ ಅನುಭವ ಇರಬೇಕು. ಆದರೆ ಈತನ ಪಿಎಚ್.ಡಿ ಮುಗಿದದ್ದೇ 2011ರಲ್ಲಿ ಅಂತದ್ದರಲ್ಲಿ ಗೈಡ್ ಮಾಡುವಷ್ಟು ಅನುಭವ, ಪಾಂಡಿತ್ಯ ಇವನಿಗೆಲ್ಲಿ ಲಭಿಸಬೇಕೆಂದು ಅವಕಾಶವಂಚಿತ ಹಲವಾರು ಅಭ್ಯರ್ಥಿಗಳು ಅವನ ಜಾಡು ಹಿಡಿದು ಹೊರಟಾಗ ಹುದ್ದೆಗೆ ಅಗತ್ಯವಿದ್ದ ಎಂಟು ವರ್ಷದ ಅನುಭವವೂ ಇಲ್ಲವೆನ್ನುವ ಮತ್ತೊಂದು ಅಚ್ಚರಿ ಕಾದಿತ್ತು. ಆತ ಪಾಠ ಮಾಡಿದ್ದು ಜೈನ್ ಕಾಂಪೋಸಿಟ್ ಕಾಲೇಜ್‌ನಲ್ಲಿ. ಅಲ್ಲಿ ಪಿಯುಸಿಯಿಂದ ಪದವಿವರೆಗೆ ತರಗತಿಗಳು ನಡೆಯುತ್ತಿದ್ದರೂ ಈತ ಪಿಯುಸಿ ಕಾಲೇಜಿನಲ್ಲೆ ಹೆಚ್ಚು ಪಾಠ ಮಾಡಿದ್ದು. ಆದರೆ ಅನುಭವ ಸರ್ಟಿಫಿಕೇಟ್ ತೋರಿಸುವಾಗ ಅದೊಂದು ಕಾಂಪೋಸಿಟ್ ಕಾಲೇಜ್ ಎನ್ನುವುದನ್ನೇ ಮರೆಮಾಚಿ ಪದವಿ ತರಗತಿಗಳಿಗೆ ಬೋಧಿಸಿದಂತೆ ತೋರಿಸಿಕೊಂಡಿದ್ದ.

ಹೀಗೆ ಅನರ್ಹ ಅಭ್ಯರ್ಥಿಗೆ ಉದ್ದೇಶಪೂರ್ವಕವಾಗಿ ಆಯ್ಕೆ ಭಾಗ್ಯ ಲಭಿಸುವಂತೆ ಮಾಡಿರಬೇಕಾದರೆ ಇದರ ಹಿಂದೆ ಭರ್ಜರಿ ಅವ್ಯವಹಾರ ನಡೆದಿರುವ ಸಾಧ್ಯತೆಯನ್ನು ಕೊಡವುತ್ತಾ ಸಾಗಿದರೆ ಉನ್ನತ ಶಿಕ್ಷಣ ಸಚಿವ ಆರ್.ವಿ. ದೇಶಪಾಂಡೆಯ ಛೇಲಾ ಹನುಮಂತ ಕೊಡಬಾಕಿಯ ಹೆಸರು ಥಟ್ಟನೆ ಕೇಳಿ ಬರುತ್ತದೆ. ತಾನು ಮಿನಿಸ್ಟರ್ ದೇಶಪಾಂಡೆಯ ಬಲಗೈ ಭಂಟ ಎಂದುಕೊಳ್ಳುತ್ತಲೇ ಎಲ್ಲಾ ವಿವಿಗಳ ಆಡಳಿತದಲ್ಲಿ ಮೂಗು ತೂರಿಸುವುದೇ ಇವನ ಪರಮ ಕಾಯಕ. ಅಂತಹ ಹನುಮಂತ ಕೊಡಬಾಕಿ ಸುಮನ್‌ನಿಂದ ಬರೋಬ್ಬರಿ ಇಪ್ಪತ್ತು ಲಕ್ಷಕ್ಕೆ ಡೀಲ್ ಕುದುರಿಸಿದ್ದಾನೆನ್ನುವ ಗುಸುಗುಸುಗಳೂ ಕೇಳಿಬರುತ್ತಿವೆ. ಅಷ್ಟೂ ಹಣ ಕುಲಪತಿ ಮಲ್ಲೇಪುರಂ, ಉಪಕುಲಸಚಿವ ಪ್ರಕಾಶ್ ಪಾಗೋಜಿ, ಹನುಮಂತ ಕೊಡಬಾಕಿಗಳ ನಡುವೆ ಹಂಚಿಕೆಯಾಗಿದೆ ಎನ್ನುವುದಕ್ಕೆ ಇಂಬು ನೀಡುವಂತೆ ನಿಯಮಗಳನ್ನೆಲ್ಲಾ ಗಾಳಿಗೆ ತೂರಿ ಆತನನ್ನು ಆಯ್ಕೆ ಮಾಡಿದ್ದು ಕಂಡುಬಂದಿತ್ತು.

ತನ್ನನ್ನು ಉದ್ದೇಶಪೂರ್ವಕವಾಗಿ ಹೊರಗಿಟ್ಟು, ತನ್ನ ವಿರೋಧವನ್ನೂ ಲೆಕ್ಕಿಸದೆ ನೇಮಕಾತಿ ಮಾಡಿಕೊಳ್ಳುತ್ತಿರುವ ಕುಲಪತಿ ಮಲ್ಲೇಪುರಂ ವಿರುದ್ಧ ತಿರುಗಿ ಬಿದ್ದ ಕುಲಸಚಿವ ಸಾಂತಪ್ಪನವರು ನೇಮಕಾತಿಯ ಅನಗತ್ಯ ಅವ್ಯವಹಾರಗಳ ವಿರುದ್ಧ ಶಿಕ್ಷಣ ಇಲಾಖೆ ಕಾರ್ಯದರ್ಶಿಗೆ ಸಮಗ್ರ ಪತ್ರವೊಂದನ್ನು ಬರೆದಿದ್ದರು. ಅಷ್ಟರಲ್ಲಾಗಲೆ ಇದೇ ವಿವಿಯ ವ್ಯಾಕರಣ ವಿಭಾಗದ ಪ್ರಾಧ್ಯಾಪಕರಾಗಿದ್ದ ಎಸ್. ಪ್ರಭುಲಿಂಗ ಹೆಬ್ಬಾಳ ಎಂಬುವವರೂ ನೇಮಕಾತಿ ಅಕ್ರಮದ ಕುರಿತು ರಾಜ್ಯಪಾಲರು, ಮುಖ್ಯಮಂತ್ರಿ, ಉನ್ನತ ಶಿಕ್ಷಣ ಸಚಿವರಿಗೂ ಪತ್ರ ಬರೆದಿದ್ದರಿಂದ ಗಂಭೀರವಾಗಿ ಪರಿಗಣಿಸಿದ ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಜನೀಶ್ ಗೋಯೆಲ್‌ರು ನೇಮಕಾತಿ ಕುರಿತು ವರದಿ ನೀಡುವಂತೆ ಕುಲಪತಿ ಮಲ್ಲೇಪುರಂಗೆ ಸೂಚಿಸಿದ್ದರು. ಅಲ್ಲದೆ ಇತ್ಯರ್ಥವಾಗುವವರೆಗೆ ನೇಮಕಾತಿ ತಡೆಹಿಡಿಯುವಂತೆಯೂ ಆದೇಶಿಸಿದ್ದರು.

ತೆರೆಮರೆಯಲ್ಲಿದ್ದ ಘಟಾನುಘಟಿಗಳೆಲ್ಲ ಬಯಲಿಗೆ ಬಂದದ್ದೇ ಆಗ. ಸಂಸ್ಕೃತ ವಿವಿಯ ಭಾನಗಡಿಯ ಹಿಂದೆ ಬೆಂಗಾವಲಾಗಿ ನಿಂತದ್ದು ಮಾಧ್ವ ಮಹಾಶಯ ಪೇಜಾವರ ಸ್ವಾಮೀಜಿ. ತನ್ನ ಹಾದಿಗೆ ಅಡ್ಡಿ ಎದುರಾಗುತ್ತಿದ್ದಂತೆಯೇ ಕೆಂಡಾಮಂಡಲವಾದ ಸ್ವಾಮೀಜಿ ಮಲ್ಲೇಪುರಂ ಸಮೇತ ತನ್ನ ಇನ್ನೊಬ್ಬ ಶಿಷ್ಯ ಶ್ರೀನಿವಾಸ ವರಖೇಡಿ ಎಂಬಾತನ ಜೊತೆ ಸೇರಿ ಉನ್ನತ ಶಿಕ್ಷಣ ಸಚಿವ ದೇಶಪಾಂಡೆಯನ್ನೇ ನೇರವಾಗಿ ಸಂಪರ್ಕಿಸಿದ್ದರು. ಸ್ವಾಮಿಯ ಆಕ್ರೋಶವನ್ನೆಲ್ಲ ಕೇಳಿಸಿಕೊಂಡ ಸಚಿವ ಸಾಹೇಬರು ಪ್ರಧಾನ ಕಾರ್ಯದರ್ಶಿ ಗೋಯೆಲ್‌ರನ್ನು ಸ್ಥಳಕ್ಕೇ ಕರೆಸಿ 'ಅದ್ಹೇಗೆ ನೀವು ಕುಲಪತಿಗಳ ಸ್ಪಷ್ಟೀಕರಣ ಕೇಳಿದಿರಿ, ಕುಲಸಚಿವರ ಮಾತಿಗೇಕೆ ಕಿಮ್ಮತ್ತು ನೀಡಿದಿರಿ. ಈಗಿಂದೀಗಲೆ ಆದೇಶವನ್ನು ವಜಾ ಮಾಡಿ, ಅಡ್ಡಿ ಪಡಿಸುತ್ತಿರುವ ಕುಲಸಚಿವ ಸಾಂತಪ್ಪನವರದೇ ಸ್ಪಷ್ಟೀಕರಣ ಕೇಳಿ' ಅಂತ ಗುಡುಗಿದ್ದರು. ಅಷ್ಟಕ್ಕಾಗಲೆ ಸ್ವಾಮೀಜಿಯ ಆವೇಶವೂ ತಣ್ಣಗಾಗಿತ್ತು, ತನ್ನ ಶಿಷ್ಯ ಗಣ ನಿರಾತಂಕವಾಗಿ ವಿವಿ ತೂರಿಕೊಳ್ಳುತ್ತಿರುವ ಸಂತೃಪ್ತತೆಯೂ ವ್ಯಕ್ತವಾಗಿತ್ತು.


ಇಷ್ಟೆಲ್ಲಾ ಅವಾಂತರವಾದ ನಂತರವೂ ಕುಲಸಚಿವರನ್ನು ಸಿಂಡಿಕೇಟ್ ಸಭೆಗೆ ಆಹ್ವಾನಿಸದೆ ಇದೇ ಮಾರ್ಚ್ ಮೂರರಂದು ಸಭೆ ಸೇರಿ ತಾವು ಆಯ್ಕೆ ಮಾಡಿದ್ದ ಮೂರು ಜನರಲ್ಲಿ ಡಾ. ವೀರನಾರಾಯಣ ಪಾಂಡುರಂಗಿ ಮತ್ತು ಡಾ. ವೆಂಕಟರಮಣ ಎಂಬಿಬ್ಬರ ಆಯ್ಕೆಯನ್ನು ಅಂತಿಮಗೊಳಿಸಿದ ಮಲ್ಲೇಪುರಂ, ಸುಮನ್‌ನ ಆಯ್ಕೆಯನ್ನು ಸದ್ಯಕ್ಕೆ ತಡೆ ಹಿಡಿದು ಕಾನೂನು ಸಲಹೆಗೆ ಕಳಿಸಿದ್ದಾರೆ. ತಮಗಿಷ್ಟ ಬಂದಂತೆ ಲೀಗಲ್ ಒಪೀನಿಯನ್ ಪಡೆದುಕೊಳ್ಳುವುದೇನು ಕಷ್ಟದ ಮಾತಲ್ಲ, ಹಾಗಾಗಿ ಆತನನ್ನೂ ವಿವಿಯೊಳಕ್ಕೆ ಮೇ 25ರೊಳಗೆ ತೂರಿಸಿದರೆ ಅಚ್ಚರಿಯಿಲ್ಲ, ಯಾಕೆಂದರೆ ಅದು ಮಲ್ಲೇಪುರಂ ಅಧಿಕಾರ ಮುಗಿಯುವ ದಿನಾಂಕ....

■ ಗಿರೀಶ್ ತಾಳಿಕಟ್ಟೆ





ಮಂಡ್ಯ: ಬಿಜೆಪಿ ಸೋಲು ಕಟ್ಟಿಟ್ಟ ಬುತ್ತಿ!







ನಾಮಪತ್ರ ಸಲ್ಲಿಕೆಯ ಕೊನೆಯ ದಿನದಂದು ಚುನಾವಣಾ ಅಖಾಡಕ್ಕೆ ಧುಮುಕಿದ ಮಂಡ್ಯ ಲೋಕಸಭಾ ಹಾಲಿ ಸಂಸದೆ ರಮ್ಯಾ ಚುನಾವಣೆಯ ರಂಗೇರಿಸಿದ್ದಾರೆ. ರಮ್ಯಾ ನಾಮಪತ್ರ ಸಲ್ಲಿಸುವಾಗ ಖುದ್ದು ಕೆಪಿಸಿಸಿ ಅಧ್ಯಕ್ಷ ಪರಮೇಶ್ವರ್, ಸಚಿವ ಹೆಚ್.ಸಿ.ಮಹದೇವಪ್ಪರೇ ಉಪಸ್ಥಿತರಿದ್ದದ್ದು ಕಣಕ್ಕೆ ಮತ್ತಷ್ಟೂ ಮೆರುಗು ತಂದಿತ್ತು. ಕಳೆದ ಉಪಚುನಾವಣೆಯಲ್ಲಿ ಜೆಡಿಎಸ್ ಭದ್ರಕೋಟೆಯನ್ನು ಛಿಂದಿ ಮಾಡಿ ಪಾರ್ಲಿಮೆಂಟ್ ಪ್ರವೇಶಿಸುವ ಮೂಲಕ ರಮ್ಯಾ ಎಲ್ಲರ ಹುಬ್ಬೇರುವಂತೆ ಮಾಡಿದ್ದರು. ಉಪ ಚುನಾವಣೆಯಲ್ಲಿ ಸೋತ ಜೆಡಿಎಸ್‌ನ ಸಿ.ಎಸ್.ಪುಟ್ಟರಾಜು ಎದುರು ಮತ್ತೆ ಕಣಕ್ಕಿಳಿದಿರುವ ರಮ್ಯಾ ಕಾಂಗ್ರೆಸ್ ರಾಜ್ಯ ಸರ್ಕಾರದ ಸಾಧನೆ, ಚಿತ್ರರಂಗದ ತನ್ನ ಗ್ಲಾಮರ್‌ನ್ನು ಪಣಕ್ಕಿಟ್ಟಿದ್ದಾರೆ. ರಮ್ಯಾ ಮತ್ತೆ ಮ್ಯಾಜಿಕ್ ಮಾಡಿ ಪಾರ್ಲಿಮೆಂಟ್ ಪ್ರವೇಶಿಸುತ್ತಾರೋ, ಇಲ್ಲಾ ಸೋತು ಚಿತ್ರರಂಗದಲ್ಲಿ ತೊಡಗಿಕೊಳ್ಳುತ್ತಾರೋ ಎಂಬುದನ್ನು ಏಪ್ರಿಲ್ 17 ರಂದು ಮತದಾರರು ನಿರ್ಧರಿಸಲಿದ್ದಾರೆ.

ಜೆಡಿಎಸ್‌ನಲ್ಲಿ ಭರ್ಜರಿ ಹುರುಪು

ಕಾಂಗ್ರೆಸ್ ಕಚ್ಚಾಟದ ಲಾಭ ಪಡೆದು ಮಂಡ್ಯದಲ್ಲಿ ಜೆಡಿಎಸ್‌ಗೆ ಮರುಹುಟ್ಟು ನೀಡಲು ಸ್ವತಃ ದೇವೇಗೌಡ, ಕುಮಾರಸ್ವಾಮಿಯವರೇ ಮುಂದಾಗಿರೋದು ಕಾರ್ಯಕರ್ತರಲ್ಲಿ ಹೊಸ ಹುರುಪು ತುಂಬಿದೆ. ರಾಷ್ಟ್ರ ರಾಜಕಾರಣದಲ್ಲಿ ಮತ್ತೆ ಮಿಂಚುವ ಕನಸಿನಲ್ಲಿರುವ ದೇವೇಗೌಡರಿಗೀಗ ತನ್ನನ್ನೂ ಒಳಗೊಂಡಂತೆ ಕರ್ನಾಟಕದಿಂದ ಕಡೇಪಕ್ಷ ಆರು ಮಂದಿ ಸಂಸದರನ್ನಾದರು ಗೆಲ್ಲಿಸಿಕೊಳ್ಳ ಬೇಕಾದ ಜರೂರತ್ತಿದೆ. ಹಾಗಾಗಿ ಜಿಲ್ಲಾ ಜೆಡಿಎಸ್‌ನಲ್ಲಿದ್ದ ಭಿನ್ನಮತವನ್ನು ತಣ್ಣಗಾಗಿಸಿ ಸಿ.ಎಸ್. ಪುಟ್ಟರಾಜುರನ್ನು ಗೆಲ್ಲಿಸಿ ತರಬೇಕೆಂದು, ಮಗನಿಗೋಸ್ಕರ ಟಿಕೆಟ್ ಪಟ್ಟು ಹಿಡಿದಿದ್ದ ಬೀಗರಾದ ಡಿ.ಸಿ.ತಮ್ಮಣ್ಣ ಹಾಗೂ ಚಲುವರಾಯಸ್ವಾಮಿಗೆ ಹುಕುಂ ನೀಡಿದ್ದಾರೆ.

ಈ ಮಧ್ಯೆ ಜಿಲ್ಲಾ ಉಸ್ತುವಾರಿ ಸಚಿವ ಅಂಬರೀಶ್ ಆಪ್ತ ಬಳಗದಲ್ಲಿರುವ ಡಿ.ಸಿ.ತಮ್ಮಣ್ಣನ ಮಗ ಸಂತೋಷ್‌ಗೆ ಜೆಡಿಎಸ್ ಟಿಕೆಟ್ ನೀಡಿದರೆ ನಾವೂ ಕೂಡ ಒಳಗೊಳಗೆ ಸಹಕಾರ ನೀಡುವುದಾಗಿ ರಮ್ಯಾ ಮೇಲೆ ಮುನಿದುಕೊಂಡಿದ್ದ ಅಂಬಿ ಬಣದವರ ಮಾತು ಒಂದುಕ್ಷಣ ದೇವೇಗೌಡರ ತಲೆಹೊಕ್ಕಿದ್ದೂ ನಿಜ. ಕ್ಷೇತ್ರದ ಜನರಿಗೆ ಅಷ್ಟಾಗಿ ಪರಿಚಯವಿರದ ಸಂತೋಷ್ ಅಭ್ಯರ್ಥಿಯಾದರೆ ರಮ್ಯಾ ಗೆಲುವು ನೀರು ಕುಡಿದಷ್ಟೇ ಸುಲಭವಾಗಿ ಬಿಡುತ್ತದಲ್ಲದೆ ರಾಷ್ಟ್ರ ರಾಜಕಾರಣ ಪ್ರವೇಶಿಸುವ ನಿಮ್ಮ ಕನಸೂ ಮುಗ್ಗರಿಸುತ್ತದೆನ್ನುವ ಸಲಹೆ ಜೆಡಿಎಸ್ ಶಾಸಕರು ಹಾಗೂ ಮುಖಂಡರಿಂದ ಬಂದನಂತರವೇ ದೇವೇಗೌಡರು ಕಾದು ನೋಡುವ ತಂತ್ರಕ್ಕೆ ಮೊರೆ ಹೋದದ್ದು. ಸಂಕ್ರಾಂತಿ ಹಬ್ಬದಲ್ಲೇ ಅಭ್ಯರ್ಥಿ ಘೋಷಣೆ ಮಾಡುತ್ತೇವೆಂದಿದ್ದ ಗೌಡರು ಕೊನೆವರೆಗೂ ಹೆಸರು ಪ್ರಕಟಿಸದಿರಲು ಡಿ.ಸಿ.ತಮ್ಮಣ್ಣನ ಒತ್ತಡವೇ ಕಾರಣವಾಗಿತ್ತು. ದಿಲ್ಲಿ ಗದ್ದುಗೆಯ ಹಾದಿಯಲ್ಲಿ ಈ ಬಾರಿ ತೃತೀಯರಂಗ ರಚನೆಯ ಸಾಧ್ಯತೆಯೂ ಇರುವ ಸಂದರ್ಭದಲ್ಲಿ ಜೆಡಿಎಸ್ ಪ್ರಾಬಲ್ಯವಿರುವ ಒಂದೊಂದು ಕ್ಷೇತ್ರವೂ ಮುಖ್ಯ ಎಂಬ ತೀರ್ಮಾನಕ್ಕೆ ಬಂದ ದೇವೇಗೌಡರು ಅಂತಿಮವಾಗಿ ಸಿ.ಎಸ್.ಪುಟ್ಟರಾಜುರನ್ನೇ ಕಣಕ್ಕಿಳಿಸಿದ್ದಾರೆ. ಅಸಲಿಗೆ ಕಳೆದ ಉಪಚುನಾವಣೆಯಲ್ಲೇ ಡಿ.ಸಿ.ತಮ್ಮಣ್ಣ ತನ್ನ ಮಗನಿಗೆ ಟಿಕೆಟ್ ನೀಡುವಂತೆ ಪಟ್ಟು ಹಿಡಿದಿದ್ದರು. ಟಿಕೆಟ್ ಸಿಗದ ಕಾರಣ ಮುನಿಸಿಕೊಂಡ ತಮ್ಮಣ್ಣ ತನ್ನ ಮದ್ದೂರು ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಲೀಡ್ ದಕ್ಕುವಂತೆ ನೋಡಿಕೊಂಡಿದ್ದರು. ಅದು ಈ ಬಾರಿಯೂ ಪುನರಾವರ್ತನೆಯಾಗಬಹುದೆನ್ನುವ ಸೂಚನೆ ಅರಿತ ದೇವೇಗೌಡರು ಪುಟ್ಟರಾಜುನನ್ನು ಗೆಲ್ಲಿಸಿಕೊಂಡು ಬರುವ ಹೊಣೆಯನ್ನು ತಮ್ಮಣ್ಣಗೇ ವಹಿಸಿ ಭಿನ್ನಮತಕ್ಕೆ ಬ್ರೇಕ್ ಹಾಕಿದ್ದಾರೆ.

ಕಳೆದ ಉಪಚುನಾವಣೆಯಲ್ಲಿ ಜೆಡಿಎಸ್ ಸೋಲಿಗೆ ಶಾಸಕ ಚಲುವರಾಯಸ್ವಾಮಿಯ ಕಾಣಿಕೆಯೂ ಇಲ್ಲದಿಲ್ಲ. ನಾಗಮಂಗಲದಲ್ಲಿ ಚಲುವರಾಯಸ್ವಾಮಿ ಭರ್ಜರಿಯಾಗಿ ಕೈಕೊಟ್ಟ ಕಾರಣ ಕಾಂಗ್ರೆಸ್‌ಗೆ ಅಲ್ಲಿ ಲೀಡ್ ಸಿಕ್ಕಿತ್ತು. ಚಲುವರಾಯಸ್ವಾಮಿ ಹಾಗೂ ಪುಟ್ಟರಾಜು ನಡುವೆ ಇದ್ದ ಶೀತಲ ಸಮರವೇ ಅದಕ್ಕೆ ಮೂಲವಾಗಿತ್ತು. ಇದನ್ನು ಅರಿತ ದೊಡ್ಡಗೌಡರು ಚಲುವರಾಯಸ್ವಾಮಿ ಕರೆಸಿ ಕ್ಲಾಸು ತೆಗೆದುಕೊಂಡಿದ್ದಲ್ಲದೆ ಪುಟ್ಟರಾಜು ಗೆಲುವಿನ ಹೊಣೆಯನ್ನು 'ಜಂಟಿ' ಖಾತೆ ಮಾಡಿಸಿ ತಮ್ಮಣ್ಣ ಹಾಗೂ ಚಲುವರಾಯಸ್ವಾಮಿಗೆ ಹಂಚಿದ್ದಾರೆ. ಚಲುವರಾಯಸ್ವಾಮಿ ಕೂಡ ಪುಟ್ಟರಾಜು ಜೊತೆಗಿದ್ದ ಮುನಿಸು ಮರೆತು ಗೆಲ್ಲಿಸುವ ಪ್ರಮಾಣ ಮಾಡಿದ್ದಾರಂತೆ. ಇದಕ್ಕೆ ಪೂರಕವಾಗಿ ಚಲುವರಾಯಸ್ವಾಮಿ ನೇತೃತ್ವದಲ್ಲಿಯೇ ಚುನಾವಣೆ ಎದುರಿಸುವುದಾಗಿ ಪುಟ್ಟರಾಜು ಹೇಳುತ್ತಿರುವುದು ಕಾರ್ಯಕರ್ತರಲ್ಲಿ ಹೊಸ ಹುರುಪು ತುಂಬಿದೆ.

ದೇವೇಗೌಡರ ಎಚ್ಚರಿಕೆ

ಕಳೆದ ಉಪಚುನಾವಣೆಯಲ್ಲಿ ಶ್ರೀರಂಗಪಟ್ಟಣ ಮತ್ತು ಕೆ.ಆರ್.ಪೇಟೆಗಳಲ್ಲಿ ಕಾಂಗ್ರೆಸ್‌ಗೆ ಲೀಡ್ ಸಿಕ್ಕಿತ್ತು. ಈ ಬಾರಿ ಜೆಡಿಎಸ್ ಪಕ್ಷಕ್ಕೆ ಲೀಡ್ ಕೊಡಿಸದಿದ್ದರೆ ಕ್ರಮ ತೆಗೆದುಕೊಳ್ಳುವುದಾಗಿ ದೇವೇಗೌಡರು ಗುಡುಗಿರುವುದರಿಂದ ಜೆಡಿಎಸ್ ರಮೇಶ್‌ಬಾಬು ಬಂಡಿಸಿದ್ದೇಗೌಡ, ನಾರಾಯಣಗೌಡ ಮೊದಲಾದವರೆಲ್ಲ ಪುಟ್ಟರಾಜು ಪರ ಕೆಲಸ ಮಾಡಲೇಬೇಕಿದೆ. ಉಪಚುನಾವಣೆಯಲ್ಲಿ ಗೆಲ್ಲಲೇಬೇಕಾದ ಅನಿವಾರ್ಯತೆ ಇದ್ದರಿಂದ ಸ್ವತಃ ಸಿಎಂ ಸಿದ್ದರಾಮಯ್ಯನವರೇ ಅಖಾಡಕ್ಕಿಳಿದು ರಮ್ಯಾ ಪರ ಒಳಗೊಳಗೆ ಕೆಲಸ ಮಾಡಲು ಜೆಡಿಎಸ್ ಶಾಸಕರು ಸೇರಿದಂತೆ ಕೆಲ ಮುಖಂಡರಿಗೆ ಸುಪಾರಿ ಕೊಟ್ಟಿದ್ದರು. ಈ ಕುರಿತು ಕೆಂಡಾಮಂಡಲರಾಗಿರುವ ದೇವೇಗೌಡ ಹಾಗೂ ಕುಮಾರಸ್ವಾಮಿ ತಮ್ಮೆಲ್ಲಾ ಶಾಸಕ ಹಾಗೂ ಮುಖಂಡರಿಗೆ ರುಬ್ಬಾಡಿಸಿ ಪುಟ್ಟರಾಜು ಗೆಲ್ಲಿಸದಿದ್ದರೆ ಪರಿಣಾಮ ಎದುರಿಸಬೇಕಾಗುತ್ತದೆಂದು ಎಚ್ಚರಿಕೆ ನೀಡಿದ್ದಾರೆ.

ಇತ್ತ ಕುಮಾರಸ್ವಾಮಿಯೂ ಮಂಡ್ಯದಲ್ಲಿ ಜೆಡಿಎಸ್ ಪತಾಕೆ ಹಾರಿಸಲು ಸ್ಪೆಷಲ್ ತಂತ್ರಗಾರಿಕೆಯಲ್ಲಿ ತೊಡಗಿದ್ದಾರೆ. ತನ್ನ ಆಪ್ತ ಚಲುವರಾಯಸ್ವಾಮಿ ಉಸ್ತುವಾರಿಯಲ್ಲಿ ಪುಟ್ಟರಾಜು ಗೆಲ್ಲಿಸಲು ಸ್ಕೆಚ್ ಹಾಕಿದ್ದಾರೆ. ನಾಮಪತ್ರ ಸಲ್ಲಿಕೆಯ ದಿನ ಸ್ವತಃ ಹಾಜರಿದ್ದ ಕುಮಾರಸ್ವಾಮಿ, ದೇವೇಗೌಡರು ಮತ್ತೆ ಪ್ರಧಾನಿಯಾಗುವ ವಾತಾವರಣವಿದ್ದು ಪುಟ್ಟರಾಜು ಗೆಲ್ಲಿಸಬೇಕೆಂದು ಕಣ್ಣೀರು ಹಾಕಿ ಕಾರ್ಯಕರ್ತರು ಹಾಗೂ ಮತದಾರರನ್ನು ಭಾವನಾತ್ಮಕವಾಗಿ ಸೆಳೆಯುವ ಪ್ರಯತ್ನ ಮಾಡಿದ್ದೂ ಇದೇ ಕಾರಣಕ್ಕೆ.

ಗೆಲ್ಲುವುದಕ್ಕೋಸ್ಕರ ಶತಾಯಗತಾಯ ಸಜ್ಜಾಗಿರುವ ಕುಮಾರಸ್ವಾಮಿಯವರು ಅಂದು 'ಡಿ.ಸಿ.ತಮ್ಮಣ್ಣನವರ ಮಗ ಡಿ.ಟಿ. ಸಂತೋಷ್‌ಗೆ ಟಿಕೆಟ್ ಕೊಡಿಸಲು ಜಿಲ್ಲಾ ಕಾಂಗ್ರೆಸ್‌ನ ಪ್ರಭಾವಿ ನಾಯಕರೇ ದುಂಬಾಲು ಬಿದ್ದಿದ್ದರು' ಎಂದು ಹೇಳುವ ಮೂಲಕ ಕಾಂಗ್ರೆಸ್ ಕಚ್ಚಾಟವನ್ನು ಪ್ರತ್ಯಕ್ಷವಾಗಿಯೇ ತಮ್ಮ ತಂತ್ರಗಾರಿಕೆಯಲ್ಲಿ ಸೇರಿಸಿಕೊಂಡಿದ್ದರು. ಅವತ್ತು ಕುಮಾರಸ್ವಾಮಿ ಆ, ಪ್ರಭಾವಿ ರಾಜಕಾರಣಿ ಯಾರು ಎಂಬುದನ್ನು ನೇರವಾಗಿ ಹೇಳದಿದ್ದರೂ ಜಿಲ್ಲೆಯ ರಾಜಕಾರಣದಲ್ಲಿ ರಮ್ಯಾ ಮೇಲುಗೈ ಸಾಧಿಸುವುದು ಇಷ್ಟವಿಲ್ಲದ ಅಂಬಿಯೇ ಸಂತೋಷ್‌ಗೆ ಟಿಕೆಟ್ ನೀಡಿ ಎಂದು ಒತ್ತಾಯಿಸಿದ್ದರು ಎಂಬುದು ಕುಮಾರಸ್ವಾಮಿಯ ಮಾತಿನ ಒಳಾರ್ಥವಾಗಿದ್ದಂತೂ ಸತ್ಯ. ರಮ್ಯಾ ವಿರುದ್ಧ ಅಂಬಿ ಹಾಗೂ ಅವರ ಬೆಂಬಲಿಗರು ರಾಂಗಾಗಿರುವುದನ್ನು ತಿಳಿದಿರುವ ಕುಮಾರಸ್ವಾಮಿ ಇದನ್ನೆ ತನ್ನ ಅಭ್ಯರ್ಥಿಯ ಗೆಲುವಿಗೆ ಬಂಡವಾಳ ಮಾಡಿಕೊಳ್ಳುವ ಮಾಸ್ಟರ್‌ಪ್ಲ್ಯಾನ್ ಹಾಕಿರುವುದು ಸ್ಪಷ್ಟವಾಗಿದೆ. ಕೈ ಕಾರ್ಯಕರ್ತರು ತಮ್ಮೊಳಗಿ ಕಚ್ಚಾಟ ಮರೆತು ಚುನಾವಣೆ ಎದುರಿಸದಿದ್ದರೆ ಮುಂದೆ ಪಶ್ಚಾತ್ತಾಪ ಪಡಬೇಕಾಗುತ್ತದೆನ್ನುವ ಮೆಸೇಜು ಖಂಡಿತ ರವಾನೆಯಾಗಿದೆ.

ಪುಟ್ಟರಾಜುಗೆ ಗೆಲುವು ಸುಲಭವಿಲ್ಲ

ಕಾಂಗ್ರೆಸ್‌ನಲ್ಲಿ ಏನೇ ಭಿನ್ನಮತವಿದ್ದರೂ ಅದನ್ನೇ ಬಳಸಿಕೊಂಡು ಪುಟ್ಟರಾಜು ಗೆಲ್ಲುವುದು ಸುಲಭದ ಮಾತಲ್ಲ. ಚಿತ್ರನಟ-ನಟಿಯರಿಗೆ ಮಣೆಹಾಕುವ ಮತದಾರರು ಕ್ಷೇತ್ರದಲ್ಲಿರುವುದು ಪುಟ್ಟರಾಜು ಪಾಲಿಗೆ ನುಂಗಲಾರದ ಸಂಗತಿಯಾಗಿದೆ. ಕುಟಿಲ ರಾಜಕೀಯ ತಂತ್ರಗಾರಿಕೆಯಲ್ಲಿ ನಿಪುಣನಾಗಿರುವ ಪುಟ್ಟರಾಜುವಿನ ಅಹಂ ಕಳೆದ ಎರಡು ಸತತ ಸೋಲುಗಳಿಂದ ಖಾಲಿಯಾದಂತಾಗಿದೆ. ಯಾರೇ ಎದುರಾಳಿಯಾದರು ಮೇಲುಕೋಟೆಯಲ್ಲಿ ತನ್ನನ್ನು ಸೋಲಿಸುವರೇ ಇಲ್ಲವೆಂದು ಬೀಗುತ್ತಿದ್ದ ಪುಟ್ಟರಾಜುಗೆ ವಿಧಾನಸಭಾ ಚುನಾವಣೆಯಲ್ಲಿ ಸೋಲಿನ ರುಚಿ ತೋರಿಸಿದ್ದು ರೈತಸಂಘದ ಪುಟ್ಟಣ್ಣಯ್ಯ. ನಂತರ ಲೋಕಸಭೆಗೆ ಬಂದ ಪುಟ್ಟರಾಜುನನ್ನು ರಾಜಕೀಯ ಗಂಧ-ಗಾಳಿಯೇ ಇಲ್ಲದ ನಟಿ ರಮ್ಯಾ ಮಕಾಡೆ ಮಲಗಿಸಿದ್ದರು. ಈ ಸತತ ಸೋಲುಗಳಿಂದ ಕಂಗೆಟ್ಟಿರುವ ಪುಟ್ಟರಾಜು ಒಂದು ಗೆಲುವಿಗಾಗಿ ಹಪಹಪಿಸುತ್ತಿರುವಂತಿದೆ. ಅದಕ್ಕೋಸ್ಕರವೇ ತನ್ನ ರಾಜಕೀಯ ಕಡುವೈರಿ ಪುಟ್ಟಣ್ಣಯ್ಯನವರ ಬಳಿಯೇ ಹೋಗಿ ಬೆಂಬಲ ಕೊಡುವಂತೆ ಅಂಗಲಾಚಿದ್ದೂ ಆಗಿದೆ.

ಆದರೆ ಪುಟ್ಟರಾಜುವಿನ ಅಹಂಕಾರವನ್ನು ಕಣ್ಣಾರೆ ಕಂಡಿರುವ ಪುಟ್ಟಣ್ಣಯ್ಯ ಪುಟ್ಟರಾಜುವಿನ ಆಫರ್‌ಗೆ ಸುತಾರಾಂ ಒಪ್ಪದೆ ರಮ್ಯಾಗೆ ಬೆಂಬಲ ಘೋಷಿಸಿ ಆಕೆಯ ಪರ ಪ್ರಚಾರಕ್ಕಿಳಿದಿದ್ದಾರೆ. ಗಳಿಸಿದ್ದ ಅಷ್ಟೂ ಹಣವನ್ನು ಕಳೆದೆರಡು ಸೋಲುಗಳು ಬಾಚಿ ಬಳಿದುಕೊಂಡಿರುವುದರಿಂದ ಪುಟ್ಟರಾಜುಗೆ ಈ ಚುನಾವಣೆ ಮಾಡು ಇಲ್ಲವೇ ಮಡಿ ಎನ್ನುವಂತಾಗಿದೆ. ಉಪಚುನಾವಣೆಯಲ್ಲಿ ಕಾಂಗ್ರೆಸ್‌ನಷ್ಟು ಖರ್ಚು ಮಾಡಲಾಗದ ಪುಟ್ಟರಾಜು, ರಮ್ಯಾ ಎದುರು ಬರೋಬ್ಬರಿ 67 ಸಾವಿರ ಮತಗಳ ಅಂತರದಿಂದ ಸೋಲುಕಂಡಿದ್ದರು. ಈ ಬಾರಿ ಜೆಡಿಎಸ್ ಕಡೆಗೂ ಓಲಾಡುತ್ತಿರುವುದರಿಂದ ಕೋಟಿಕೋಟಿ ರೊಕ್ಕ ಬಿಚ್ಚಲೇಬೇಕಾದ ಅನಿವಾರ್ಯತೆ ಪುಟ್ಟರಾಜುಗಿದೆ.

ಮೋದಿ ಅಲೆಯೇ ಇಲ್ಲ


ಇಡೀ ದೇಶವೇ ಮೋದಿ ಅಲೆಯಲ್ಲಿ ತೂರಾಡುತ್ತಿದೆ ಎಂಬ ಬಿಜೆಪಿಗರ ಭ್ರಮೆ ಮಂಡ್ಯದ ಮಟ್ಟಿಗೆ 'ಠುಸ್ಸೇ' ಸರಿ. ಯಾಕೆಂದರೆ ಇಲ್ಲಿ ಅಲೆಯ ಮಾತಿರಲಿ ಸಣ್ಣದೊಂದು ಸುಳಿಯ ಸುಳಿವೂ ಇಲ್ಲ. ಬಿಜೆಪಿಯ ಮೂರು ಮುಕ್ಕಾಲು ಜನ ಜಪಿಸುವ ಮೋದಿ ಅಲೆಯ ಮಂತ್ರಘೋಷವನ್ನೆ ನಂಬಿ ಹಣ ಚೆಲ್ಲಾಡುತ್ತಿರುವ ಬಿಜೆಪಿ ಅಭ್ಯರ್ಥಿ ಬಿ. ಶಿವಲಿಂಗಯ್ಯನಿಗೆ ಕನಿಷ್ಠ ಕಾಮನ್‌ಸೆನ್ಸ್ ಕೂಡಾ ಇಲ್ಲ ಅಂತ ಜನರೇ ಮಾತಾಡಿಕೊಳ್ಳುತ್ತಿದ್ದಾರೆ.

ನಾಮಪತ್ರ ಸಲ್ಲಿಸುವ ದಿನ ಕಾಂಗ್ರೆಸ್, ಜೆಡಿಎಸ್ ಅಭ್ಯರ್ಥಿಗಳಿಗಿಂತ ಭರ್ಜರಿ ಜನ ಸೇರಿಸಿದ್ದ ಶಿವಲಿಂಗಯ್ಯ ಅಲ್ಲಿಯೇ ಅರ್ಧ ಜೇಬು ಖಾಲಿ ಮಾಡಿಕೊಂಡಿದ್ದರು. ಬಿಜೆಪಿ ಅಭ್ಯರ್ಥಿಯತ್ತಲೂ ಮತದಾರರು ತಿರುಗಿ ನೋಡುವಂತೆ ತಮಿಳು ಕಾಲೋನಿ, ಗಾಂಧಿನಗರ, ಗುತ್ತಲು ಮೊದಲಾದ ಕಡೆಗಳಿಂದ ತಲೆಗೆ 300ರಂತೆ ಕೊಟ್ಟು 7-8 ಸಾವಿರ ಜನರನ್ನು ಸೇರಿಸಿದ್ದ ಶಿವಲಿಂಗಯ್ಯ ಬಿಜೆಪಿ ಇತಿಹಾಸದಲ್ಲಿಯೇ ಮಂಡ್ಯದಲ್ಲಿ ಅತಿ ಹೆಚ್ಚು ಜನರನ್ನು ಸೇರಿಸಿದ ಮಹಾನುಭಾವ ಎಂಬ ಬಿರುದು ಪಡೆದಿದ್ದಷ್ಟೇ ಆತನ ಚುನಾವಣಾ ಸಾಹಸವಾಗಲಿದೆ. ಗತಿಗೆಟ್ಟ ಬಿಜೆಪಿ ಜಿಲ್ಲೆಯಲ್ಲಿ ಖರ್ಚು ಮಾಡುವ ವ್ಯಕ್ತಿಗೆ ಹುಡುಕಾಡುತ್ತಿದ್ದಾಗ ಸಿಕ್ಕಿದ್ದೇ ಈ ಬಿ.ಶಿವಲಿಂಗಯ್ಯನೆಂಬ ಕ್ಯಾಪಿಟೇಷನ್ ಕುಳ. ಆತ ಸಂಪಾದಿಸಿರುವ ಹೆಡಬಿಟ್ಟಿ ಹಣವನ್ನು ಕರಗಿಸಲು ಬಿಜೆಪಿ ಆತನ ತಲೆಯಲ್ಲಿ ಮೋದಿ ಅಲೆಯಲ್ಲಿ ಎಂಪಿಯಾಗುವ ಕೆಟ್ಟ ಕನಸು ತುಂಬಿದೆ. ಅದನ್ನೇ ನಂಬಿಕೊಂಡಿರುವ ಶಿವಲಿಂಗಯ್ಯ ಬಿಜೆಪಿಯಲ್ಲಿರುವ ಮೂರು ಮುಕ್ಕಾಲು ಜನರನ್ನು ಮುಂದಿಟ್ಟುಕೊಂಡು ಮೋದಿ ಅಲೆ, ಮೋದಿ ಅಲೆ ಎನ್ನುವ ಭ್ರಮೆಯಲ್ಲಿ ಈಜಿ ದಡ ಸೇರುವ ಕನಸು ಕಾಣುತ್ತಿದ್ದಾನೆ.

20 ವರ್ಷಗಳ ಹಿಂದೆ ಏನೇನೂ ಇರದಿದ್ದ ಶಿವಲಿಂಗಯ್ಯ ಈಗ ಗಳಿಸಿರುವ ಹಡಬಿಟ್ಟಿ ಹಣ ಹಾಗೂ ತನ್ನ ಮಡದಿ ಮೀರಾಳ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷೆಗಿರಿಯ ಮರೆಯಲ್ಲಿ ಪ್ರಚಾರಕ್ಕಿಳಿದಿದ್ದಾನೆ. ಈಗಾಗಲೇ ಶಿವಲಿಂಗಯ್ಯನ ಪರ ಮಾಜಿ ಉಪಮುಖ್ಯಮಂತ್ರಿ ಆರ್.ಅಶೋಕ್, ಕೋಮುವಾದಿ ಸಿ.ಟಿ.ರವಿ ಎಂಬ ಕಿರಾತಕ ಬಂದು ಪ್ರಚಾರ ಮಾಡಿಹೋಗಿದ್ದಾರೆ. ಮಂಡ್ಯದ ಶಾಂತಿಪ್ರಿಯ ಜನರು ಯಾವತ್ತಿಗೂ ಕೋಮುವಾದಿ ಪಕ್ಷಗಳಿಗೆ ಮಣೆ ಹಾಕುವವರಲ್ಲ ಎಂಬ ಸತ್ಯ ಗೊತ್ತಿದ್ದರೂ ಹಣದ ಹೊಳೆ ಹರಿಸುತ್ತಿರುವ ವ್ಯಾಪಾರಿ ಬುದ್ಧಿಯ ಬಿ.ಶಿವಲಿಂಗಯ್ಯನನ್ನು ಮತದಾರ ಮೂರನೇ ಸ್ಥಾನಕ್ಕೆ ತಳ್ಳುವ ಸಾಧ್ಯತೆಗಳೇ ಅಧಿಕವಾಗಿದೆ.

ಇನ್ನು ಬಿಎಸ್ಪಿಯಿಂದ ಸ್ಪರ್ಧಿಸಿರುವ ಕೃಷ್ಣಮೂರ್ತಿ ಹಾಗೂ ಆಮ್ ಆದ್ಮಿ ಡಾ.ಸಿ.ಎಸ್.ಹನುಮಂತಪ್ಪ ಸಂಭಾವಿತ ಅಭ್ಯರ್ಥಿಗಳೆಂಬುದೇನೊ ನಿಜ. ಆದರೆ ಉಳಿದ ಮೂರು ಪಕ್ಷಗಳ ಹಣದ ಅಬ್ಬರದ ನಡುವೆ ಸಂಭಾವ್ಯಕತೆ ವರ್ಕ್‌ಔಟ್ ಆಗುವುದು ಕಷ್ಟದ ಮಾತು. ಒಟ್ಟಿನಲ್ಲಿ ಕಾಂಗ್ರೆಸ್‌ನ ರಮ್ಯಾ ಹಾಗೂ ಜೆಡಿಎಸ್‌ನ ಪುಟ್ಟರಾಜು ನಡುವೆ ನೇರಹಣಾಹಣಿ ಇರುವುದಂತೂ ಸತ್ಯ. ಬಿಜೆಪಿಯ ಶಿವಲಿಂಗಯ್ಯ ಮೂರನೆ ಸ್ಥಾನಕ್ಕೆ ಫಿಕ್ಸ್!

● ಮಂಡ್ಯ ನಾಗೇಶ್





ಮುತಾಲಿಕ್ ಕದ್ದು ಮಿಲನ ಒದ್ದು ವಿಚ್ಛೇದನ!

ನಾರಿ ಕಾ ಸಮ್ಮಾನ್ ಮೋದಿ ಕಾ ವರದಾನ್... ವರೆ ಹೆಣ್ಣಿನ ಮಾನ ಮೋದಿಯ ಪ್ರಾಣ ಎಂಬ ಾೀ ಭಕ್ತರ ಅಸಲೀ ಮರ್ಮ ಮುತಾಲಿಕ್ ಎಂಬ ುಗಿಯ ಮೂಲಕ ಜಗಜ್ಜಾಹೀರಾಗಿದ್ದು ಬಿಜೆಪಿಯ ುತವೋ ಮೋದಿಯ ದೌರ್ಭಾಗ್ಯವೋ?

ಾದು ಪುನರ್ಮಿಲನದ ಪಜೀತಿ. ಗೆಲ್ಲುವ ಭರದಲ್ಲಿ ದ ಬಿದ್ದರಂತೆ. ಇನ್ನೇನು ಸಾಚಾ ಸರ್ಟಿಫಿಕೇಟು ಬಿಟ್ಟಿತು ಎನ್ನುವಾಗಲೇ ಕದ್ದು ಸಿಕ್ಕಿ ಬಿದ್ದಂತಾಗಿದೆ ೀದಿ-ಮುತಾಲಿಕ್ ಪುನರ್ಮಿಲನ ಪ್ರಹಸನ!

ಮುತಾಲಿಕ್ ಮರುಸೇರ್ಪಡೆಗೆಂದು ಮಾರ್ಚ್ 23ರ ಬಿವಾರ ಬೆಳಗ್ಗೆ ಹುಬ್ಬಳ್ಳಿಯ ಬಿಜೆಪಿ ಕಚೇರಿಯೇ ುತೋರಣಗಳಿಂದ ಸಿಂಗಾರಗೊಂಡಿತ್ತು. ಬಂದವರೇನು ಯವರೆ. ರಾಜ್ಯ ಬಿಜೆಪಿ ಅಧ್ಯಕ್ಷ ಪ್ರಹ್ಲಾದ್ ಜೋಷಿ, ಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್, ಮಾಜಿ ಮುಖ್ಯಮಂತ್ರಿ ಈಶ್ವರಪ್ಪ ಮಾಜಿ ಮಂತ್ರಿ ಗೋವಿಂದ ಜೋಳ- ಹೀಗೆ ರಾಜ್ಯ ಬಿಜೆಪಿಯ ಅತಿರಥಮಹಾರಥರೇ ು ಕೇಸರಿ ವೀರನನ್ನು ಬರಮಾಡಿಕೊಂಡರು. ಖುದ್ದು ್ ಪಕ್ಷದ ಬಾವುಟ ಕೊಟ್ಟರೆ ಪಕ್ಷಾಧ್ಯಕ್ಷ ಜೋಷಿ ತುರಾಯಿ ಕೊಟ್ಟರು.

ಮತ್ತೆ ತವರಿಗೆ ಬಂದ ತಮ್ಮನಂತೆ ಮುತಾಲಿಕ್ ಾಗಿನ ಮೇಲೆ ಡೈಲಾಗು ಹೊಡೆದದ್ದೇನು, ಚಪ್ಪಾಳೆ, ಪರಾಕ್‌ನ ಸುರಿಮಳೆಯೇನು? "ನರೇಂದ್ರ ಮೋದಿ ನಿಯಾಗಬೇಕು ಅನ್ನೋ ಒಂದೇ ಉದ್ದೇಶದಿಂದ ಬಿಜೆಪಿಗೆ ಕಾಲಿಡುತ್ತಿದ್ದೇನೆ. ಹಿಂದೂ ಮತಗಳ ಜನೆ ತಡೆಯಬೇಕೆಂಬ ದೇಶದ ಭದ್ರತೆಯ ಕಾಳಜಿ ಕೊಂಡೇ ಈ ನಿರ್ಧಾರಕ್ಕೆ ಬಂದಿದ್ದೇನೆ. ಬಿಜೆಪಿ ವರೂ ಹಿಂದೂತ್ವದ ನನ್ನ ತತ್ವ-ಸಿದ್ಧಾಂತದಲ್ಲಿ ಯಾವುದೇ ಾವಣೆಯಿಲ್ಲ. ಇನ್ನು ಮುಂದೆ ಶ್ರೀರಾಮಸೇನೆ ದ್ವದಲ್ಲಿರುವುದಿಲ್ಲ. ನನ್ನ ಜೊತೆ ಶ್ರೀರಾಮಸೇನೆಯ ಕ್ಷ ಈಶ್ವರಗೌಡ ಪಾಟೀಲರೂ ಬಿಜೆಪಿ ಸೇರುತ್ತಿದ್ದಾರೆ. ಂದೆ ಬಿಜೆಪಿ ಮುಖಂಡರನ್ನು ಭ್ರಷ್ಟರು, ಹಿಂದೂತ್ವದ ಹಿಂಗಳು ಎಂದೆಲ್ಲ ನಾನೇ ಟೀಕಿಸಿದ್ದು ನಿಜ; ಅದು ಸಂದರ್ಭ. ಆದರೆ ಈಗಿನ ಪರಿಸ್ಥಿತಿಯೇ ಬೇರೆ. ಸ್ ಹಿರಿಯರ ಮಾತಿಗೆ ಓಗೊಟ್ಟು ಮತ್ತೆ ಬಿಜೆಪಿಗೆ ಬಿದ್ದೇನೆ. ನಾನೊಬ್ಬ ಸನ್ಯಾಸಿ. ನನಗೆ ಯಾವುದೇ ಮಾನದ ನಿರೀಕ್ಷೆಯಿಲ್ಲ, ಬೇಷರತ್ತಾಗಿ ಬಿಜೆಪಿ ತ್ತಿದ್ದೇನೆ...!"


ಹೀಗೆ ಹುಬ್ಬಳ್ಳಿಯ ಬಿಜೆಪಿ ಕಚೇರಿಯಲ್ಲಿ ಭಾನುವಾರ ಪತ್ರಿಕಾಗೋಷ್ಠಿ ನಡೆಸಿ ವಾಚಾಮಗೋಚರ ಪೌರುಷ ದಿದ್ದ ಇದೇ ಪ್ರಮೋದ್ ಮುತಾಲಿಕ್‌ನ ವರಸೆ ಸಂಜೆಯ ತ್ತಿಗೆಲ್ಲಾ ಉಲ್ಟಾ ಹೊಡೆದಿತ್ತು. ಮುತಾಲಿಕ್ ಕೊಟ್ಟ ಹೇಗಿತ್ತೆಂದರೆ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ರಾಜನಾಥ್ ಎದ್ದೂ ಬಿದ್ದು ಪತ್ರಿಕಾಗೋಷ್ಠಿ ಕರೆದಿದ್ದೇ ತಾಲಿಕ್‌ನ ಬಿಜೆಪಿ ಪ್ರವೇಶವನ್ನು ರದ್ದುಪಡಿಸ ಯಿತು!

ಒಬ್ಬ ಮುತಾಲಿಕ್‌ನ ಬಿಜೆಪಿ ಸೇರ್ಪಡೆಯೆಂಬುದು ಪಿ ಮತ್ತು ಮೋದಿ ಪಾಲಿಗೆ ಈ ಮಟ್ಟದ ಮುಜುಗರ, ಖಭಂಗಕ್ಕೆ ಕಾರಣವಾಗುತ್ತದೆಯೆಂಬ ನಿರೀಕ್ಷೆ ತಾನೇ ರಿಗಿತ್ತು?

ಅದು 2009ರ ವರ್ಷ ಮಂಗಳೂರಿನಲ್ಲಿ ನಡೆದ ದಾಳಿ. ಮಂಗಳೂರಿನ ಜ್ಯೋತಿ ಟಾಕೀಸ್ ಪಕ್ಕದ ಷಿಯಾ ಪಬ್‌ಗೆ ನುಗ್ಗಿದ ಶ್ರೀರಾಮ ಸೇನೆಯ ಲಿಕ್‌ನ ಬಂಟರು ಅಲ್ಲಿದ್ದ ಯುವತಿಯರನ್ನು ನೆಲಕ್ಕೆ ತುಳಿದದ್ದು, ಸಿಕ್ಕಸಿಕ್ಕ ಹುಡುಗಿಯರ ಜುಟ್ಟು ಹಿಡಿದು ಕ್ಕೆ ಹೊಡೆಯುತ್ತಿದ್ದದ್ದು, ಹೆಣ್ಣು ಮಾನ, ಮರ್ಯಾದೆಯ ದೆ ಎಳೆದಾಡಿದೆಲ್ಲವೂ ಯಥಾವತ್ತಾಗಿ ಟೀವಿಗಳಲ್ಲಿ ಗೊಂಡಿತ್ತು. ಅವತ್ತು ಈ ಕೀಚಕ ಚೇಷ್ಟೆಯ ನೇತೃತ್ವ ದ್ದು ಪಡೀಲು ರೆಸಾರ್ಟ್‌ನ ದಾಳಿಯಲ್ಲೂ ರೂವಾರಿ ದ್ದ ಸುಭಾಷ್ ಪಡೀಲು ಮತ್ತಾತನ ಬಂಟ ಶರತ್ ಸಂಗಡ!

ಅಮ್ನೇಷಿಯಾ ಪಬ್ ದಾಳಿಯ ಹೊತ್ತಿಗೆ ಸೇನೆಯಲ್ಲಿದ್ದ ಇದೇ ಸುಭಾಷ್ ಮತ್ತು ಶರತ್ [illegible] ಕರೆದು ಬಜೆಪಿಯ

ಭಜರಂಗದಳವನ್ನು ಸೇರಿ ಪಡೀಲು ರೆಸಾರ್ಟ್ ಅತ್ಯಾಚಾರಕ್ಕೆ ಕಾರಣಕರ್ತರಾದರೂ ಅವರ ಕೀಚಕ ಪ್ರವೃತ್ತಿಗೆ ಮೊಳಕೆಯಾಗಿದ್ದು ಶ್ರೀರಾಮಸೇನೆಯೆ. ಅಮ್ನೇಷಿಯಾ ಪಬ್ ದಾಳಿಯ ವಿರುದ್ಧ ದೇಶಾದ್ಯಂತ ಟೀವಿ ಚಾನಲ್ಲುಗಳು



ಗಳಗಳನೆ ಅತ್ತ ಮುತಾಲಿಕ್

ಸುದ್ದಿ ಬಿತ್ತರಿಸಿದವು. ಮಹಿಳಾ ಸಂಘಟನೆಗಳು ಬೀದಿಗಿಳಿದವು. ಗೋವಾದಲ್ಲೂ ಪಬ್, ಡಿಸ್ಕೋಗಳ ವಿರುದ್ಧ ಶ್ರೀರಾಮಸೇನೆಯ ಉಪಟಳ ಹೆಚ್ಚಾಯಿತು.

ಹೀಗೆ 'ಅಮ್ನೇಷಿಯಾ' ಪಬ್ ದಾಳಿಯ ವಿರುದ್ಧ ದೇಶಾದ್ಯಂತ ಖಂಡನೆಗಳಾಗುತ್ತಿರುವಾಗಲೇ ಮುತಾಲಿಕ್ ಪತ್ರಿಕಾಗೋಷ್ಠಿ ಕರೆದು ಇದು ಶ್ರೀರಾಮಸೇನೆಯದ್ದೇ ದಾಳಿಯೆಂದೂ ಇದಕ್ಕೆ ತಾನೇ ಹೊಣೆಯೆಂದೂ ಬಹಿರಂಗವಾಗಿ ಬಡಾಯಿ ಕೊಚ್ಚಿಕೊಂಡಿದ್ದ. ಇದರ ಬೆನ್ನಲ್ಲೇ ಮಂಗಳೂರಿನ ಶ್ರೀರಾಮಸೇನೆಯ ನಾಯಕರಾದ ಪ್ರಸಾದ್ ಅತ್ತಾವರ ಮತ್ತು ರೋಹಿತ್ ಲಿಡ್ಯಾರ್ ಕೂಡ ತಮ್ಮ ಕಾರ್ಯಾಚರಣೆಯನ್ನು ಸಮರ್ಥಿಸಿಕೊಂಡರು. ಪ್ರತಿಫಲವೆಂಬಂತೆ ಮಂಗಳೂರಿನ ಪಾಂಡೇಶ್ವರ ಪೊಲೀಸ್ ಠಾಣೆಯಲ್ಲಿ ಪಬ್ ದಾಳಿಯ ವಿರುದ್ಧದ ಎಫ್‌ಐಆರ್‌ನಲ್ಲಿ ಮುತಾಲಿಕ್ ಹೆಸರೂ ದಾಖಲಾಯಿತು.

ಹೀಗೆ ಮಂಗಳೂರಿನಲ್ಲಿ ದಾಖಲಾದ ಎಫ್‌ಐಆರ್ ಮತ್ತು ಆವತ್ತು ಶ್ರೀರಾಮ ಸೇನೆಯ ಮಂಗಗಳು ಮಾಡಿದ ಕೀಚಕ ದಾಳಿಯೇ ಈಗ ಮುತಾಲಿಕ್‌ನ ಬಿಜೆಪಿ ಸೇರ್ಪಡೆಗೆ ಅಡ್ಡಗಾಲಾಗಿದೆ. ಮುತಾಲಿಕ್ ಬಿಜೆಪಿ ಸೇರ್ಪಡೆಯಾದ ಸುದ್ದಿ ಹೊರಬೀಳುತ್ತಿದ್ದಂತೆಯೇ ರಾಷ್ಟ್ರೀಯ ನ್ಯೂಸ್ ಚಾನಲ್ಲುಗಳಲ್ಲಿ ಮೋದಿಯ ಮಹಿಳಾ ಕಲ್ಯಾಣದ ಅಸಲೀಯತ್ತಿನ ಚರ್ಚೆ ಶುರುವಾಗಿತ್ತು. ಅದೆಂಥಾ ಸಂದಿಗ್ಧವೆಂದರೆ ಖುದ್ದು ಸುಷ್ಮಾ ಸ್ವರಾಜ್ ಮುತಾಲಿಕ್ ಸೇರ್ಪಡೆಯನ್ನು ಖಂಡಿಸಿ ತನ್ನ ಮಹಿಳಾ ಕಾಳಜಿಯನ್ನು ಮೆರೆಯಬೇಕಾದ ಅನಿವಾರ್ಯತೆಯಾದರೆ ಸಾಕ್ಷಾತ್ ಅರುಣ್ ಜೇಟ್ಲಿಯೇ ಬಹಿರಂಗವಾಗಿ ಮುತಾಲಿಕ್ ಸೇರ್ಪಡೆಯನ್ನು ವಿರೋಧಿಸಬೇಕಾಯಿತು. ಖುದ್ದು ಕಾಶ್ಮೀರದ ಮುಖ್ಯಮಂತ್ರಿ ಓಮರ್ ಅಬ್ದುಲ್ಲಾ ಥರದವರೇ ಮುತಾಲಿಕ್ ಸೇರ್ಪಡೆ ಬಗ್ಗೆ ದನಿಯೆತ್ತಿದ್ದು ಬಿಜೆಪಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿತ್ತು. ಮುತಾಲಿಕ್ ಮುಖಭಂಗದಿಂದ ಬಚಾವಾಗಲು ಮೋದಿ ಪಾಲಿಗೆ ಆತನನ್ನು ಹೊರದಬ್ಬುವುದೊಂದೇ ಮಾರ್ಗೋಪಾಯವಾಯಿತು.


ಇಷ್ಟಾಗ್ಯೂ ರಾಜ್ಯ ಬಿಜೆಪಿ ನಾಯಕರಿಗೆ ಮುತಾಲಿಕ್ ಹೇಗೆ ಪೀಡೆಯೋ ಹಾಗೇ ಅನಿವಾರ್ಯ ಕೂಡ ಅನ್ನಿಸಿದ್ದಕ್ಕೂ ಕಾರಣವಿತ್ತು. ಅದು ಧಾರವಾಡ ಲೋಕಸಭಾ ಕ್ಷೇತ್ರದಿಂದ ಮುತಾಲಿಕ್ ಕಣಕ್ಕಿಳಿಯಲು ನಡೆಸಿದ್ದ ತಯಾರಿ. ತಾನು ಧಾರವಾಡಕ್ಕೆ ಶ್ರೀರಾಮಸೇನೆಯ ಅಭ್ಯರ್ಥಿಯಾಗಿ ನಿಲ್ಲುತ್ತೇನೆಂದು ವರ್ಷದ ಮೊದಲೇ ಘೋಷಿಸಿದ್ದ ಮುತಾಲಿಕ್ ಈ ಬಗ್ಗೆ ಸಾಕಷ್ಟು ತಯಾರಿ ನಡೆಸಿದ್ದ. ಜೊತೆಗೆ ಬೆಳಗಾವಿಯಿಂದಲೂ ರಮಾಕಾಂತ್ ಕೊಂಡಸ್ಕರ್ ಎಂಬ ಆತ್ಮುಗ್ರನನ್ನು ಕಣಕ್ಕಿಳಿಸಲು ಸಜ್ಜಾಗಿದ್ದ. ಬಿಜಾಪುರ, ಬಾಗಲಕೋಟೆ, ಗದಗ್, ರಾಯಚೂರು, ಬೆಂಗಳೂರು ದಕ್ಷಿಣಗಳಿಂದಲೂ ಶ್ರೀರಾಮಸೇನೆ ಚುನಾವಣೆಗೆ ನಿಲ್ಲಲು ತಯಾರಿ ನಡೆಸಿದ್ದು ಸಂಘಪರಿವಾರಕ್ಕೆ ದೊಡ್ಡ ತಲೆನೋವಾಗಿತ್ತು.


ಬಿಜೆಪಿಯ ಭದ್ರಕೋಟೆಯಂತಿದ್ದ ಈ ಕ್ಷೇತ್ರಗಳಲ್ಲಿ ಹಿಂದೂಮತ ಬ್ಯಾಂಕಿಗೇನಾದರೂ ಶ್ರೀರಾಮಸೇನೆ ಲಗ್ಗೆಯಿಟ್ಟಿತೆಂದರೆ ಅದು ಕೇಸರಿ ಪರಿವಾರದ ಮಟ್ಟಿಗೆ ಮುಜುಗರವಷ್ಟೇ ಅಲ್ಲ; ತಲಾ ಅಭ್ಯರ್ಥಿಯೊಬ್ಬ ಕನಿಷ್ಠ 10 ಸಾವಿರದಷ್ಟು ಮತ ಕಿತ್ತರೂ ಬಿಜೆಪಿ ಪಾಲಿಗೆ ದೊಡ್ಡ ನಷ್ಟವೆ. ಆದರಲ್ಲೂ ಮುತಾಲಿಕ್ ಧಾರವಾಡಕ್ಕೆ ನಿಂತನೆಂದರೆ ಬಿಜೆಪಿ ಅಭ್ಯರ್ಥಿ ಪ್ರಹ್ಲಾದ್ ಜೋಷಿಗೆ ಸೋಲು ಕಟ್ಟಿಟ್ಟ ಬುತ್ತಿ. ಈ ಎಲ್ಲಾ ಲೆಕ್ಕ ಹಾಕಿಯೇ ಆರೆಸ್ಸೆಸ್ ನಾಯಕ ಮಂಘೇಶ್ ಭೇಂಡೆ ಮುತಾಲಿಕ್ ಜೊತೆ ಸಂಧಾನಕ್ಕಿಳಿದಿದ್ದ.

ಬಿಜೆಪಿ ರಾಜ್ಯಾಧ್ಯಕ್ಷ ಪ್ರಹ್ಲಾದ್ ಜೋಷಿಗಾಗಲೇ ಸೋಲಿನ ವಾಸನೆ ಹತ್ತಾಗಿತ್ತು. ಮಂಗಳೂರಿನಲ್ಲೂ ಶ್ರೀರಾಮಸೇನೆ ಸ್ಪರ್ಧೆಗಿಳಿಯುವ ಘೋಷಣೆಯಾಗಿತ್ತು. ಅಧಿಕಾರವಿಲ್ಲದಿದ್ದಾಗ ಮುತಾಲಿಕ್ ಪಟಾಲಮ್ಮನ್ನು ಇನ್ನಿಲ್ಲದಂತೆ ಬಳಸಿಕೊಂಡಿದ್ದ ಬಿಜೆಪಿ ನಾಯಕರು ಅಧಿಕಾರ ಬಂದಿದ್ದೇ ದೂರವಿಟ್ಟಿದ್ದಕ್ಕೆ ಮುತಾಲಿಕ್ ಕೂಟ ಇನ್ನಿಲ್ಲದಂತೆ ರೊಚ್ಚಿಗೆದ್ದಿತ್ತು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ತನ್ನ ತಾಕತ್ತನ್ನು ತೋರಿಸಿಯೇ ತೀರುತ್ತೇನೆಂದು ಹಾತೊರೆಯುತ್ತಿದ್ದ ಮುತಾಲಿಕ್ ಕನಿಷ್ಠ ಐದು ಕ್ಷೇತ್ರಗಳಲ್ಲಾದರೂ ಬಿಜೆಪಿಯನ್ನು ಮಣ್ಣುಮುಕ್ಕಿಸುತ್ತೇನೆಂದು ಸಿದ್ಧತೆ ಮಾಡಿಕೊಂಡಿದ್ದ

▶▶ 12

ಬಿಜೆಪಿ ನಾಯಕಿಯರ ಮಹಿಳಾ ಕ್ರಾಂತಿ: ಹೀಗೂ ಉಂಟೆ?






ಮೋದಿ ಯುಗದ ಮಹಿಳಾ ರಕ್ಷಣೆಯ ಕುರಿತಂತೆ ಶೋಭಾ ಕರಂದ್ಲಾಜೆಯಿಂದ ಹಿಡಿದು ಇತ್ತೀಚೆಗಷ್ಟೇ ಯಡ್ಡಿ ಪರ ಪ್ರಚಾರಕ್ಕಿಳಿದು ಮತ್ತೆ ಬಿಜೆಪಿ ಸಂಗಕ್ಕೆ ಬಿದ್ದ ನಟಿ ಶೃತಿ ಕೂಡ ಕಾಂಗ್ರೆಸ್ ಸರ್ಕಾರದಲ್ಲಿ ಹೆಣ್ಣು ಮಕ್ಕಳಿಗಾದ ದುರ್ಗತಿಯ ಭಾಷಣ ಬಿಗಿಯುತ್ತಿದ್ದಾರೆ.

ಒಪ್ಪಿಕೊಳ್ಳೋಣ. ಆದರೆ ಅತೀ ಹೆಚ್ಚು ಸ್ತ್ರೀಶೋಷಣೆಯ ವರದಿಯಾಗಿದ್ದು ಯಾರ ಸರ್ಕಾರದಲ್ಲಿ?

ಮಂತ್ರಿ ಹಾಲಪ್ಪ ತನ್ನ ಬೆಂಬಲಿಗನ ಪತ್ನಿಯ ಮೇಲೆ ಅತ್ಯಾಚಾರವೆಸಗಿ ಜೈಲು ಪಾಲಾದನಲ್ಲ, ಅತ್ಯಾಚಾರಕ್ಕೀಡಾದ ಮಹಿಳೆಯ ಪರವಾಗಿ ಯಾವೊಬ್ಬ ಬಿಜೆಪಿ ನಾಯಕಿಯೂ ಏಕೆ ಸೊಲ್ಲೆತ್ತಲಿಲ್ಲ? ರೇಣುಕಾಚಾರ್ಯ ನರ್ಸ್ ಜಯಲಕ್ಷ್ಮಿಯನ್ನು ಮುಕ್ಕಿದ. ಜಯಲಕ್ಷ್ಮಿಯ ನೆರವಿಗೆ ಯಾವ ಬಿಜೆಪಿ ಮಹಿಳಾ ಮಣಿಯೂ ದನಿಯೆತ್ತಲಿಲ್ಲ. ಉಡುಪಿ ಶಾಸಕ ರಘುಪತಿ ಭಟ್ಟನ ಪತ್ನಿ ಪದ್ಮಪ್ರಿಯಾ ದುರಂತ ಸಾವಿಗೆ ಬಿಜೆಪಿಯ ಯಾವ ನಾಯಕಿಯರೂ ಮರುಗಲಿಲ್ಲ. ನಾಯಕ ಯಡ್ಡಿಯ ಧರ್ಮಪತ್ನಿಯ ನಿಗೂಢ ಸಾವಿನ ತನಿಖೆಗೆ ಸಂಘ ಪರಿವಾರದ ಯಾವೊಬ್ಬ ಪುಣ್ಯಾತಗಿತ್ತಿಯೂ ಬಾಯಿ ಬಿಡಲಿಲ್ಲ. ಅಷ್ಟೇ ಏಕೆ ಸ್ವತಃ ಪ್ರಧಾನಿ ಅಭ್ಯರ್ಥಿ ಮೋದಿಯೇ ತನ್ನ ಪ್ರೇಯಸಿ ಬೆನ್ನಿಗೆ ಪೊಲೀಸರನ್ನು ಛೂಬಿಟ್ಟು ಕಾಟ ಕೊಟ್ಟಿದ್ದೂ ಅಲ್ಲದೆ ಕಟ್ಟಿಕೊಂಡ ಮಡದಿಯನ್ನೇ ಬೀದಿಗೆ ಹಾಕಿದ್ದ!

ಈಗ ಸುಷ್ಮಾ ಸ್ವರಾಜ್ ಆದಿಯಾಗಿ ಕರಂದ್ಲಾಜೆ ತನಕ ಮಹಿಳೆಯರ ಮಾನ ಪ್ರಾಣ ಕುರಿತಂತೆ ಬೊಬ್ಬೆ ಹಾಕುತ್ತಿದ್ದಾರೆ. ತಮಾಷೆಯೆಂದರೆ ಯಡ್ಡಿ ಪರ ಸ್ತ್ರೀ ಕಾಳಜಿಯ ಭಾಷಣ ಬಿಗಿಯುತ್ತಿರುವ ನಟಿ ಶೃತಿಯೇ ಇನ್ನೊಬ್ಬ ಮಹಿಳೆಯ ಬದುಕಿಗೆ ಬೆಂಕಿ ಇಟ್ಟ ಕ್ರಾಂತಿಕಾರಿಣಿ. ವಿಧಾನಸಭೆಯೊಳಗೆ ಕಾಮಕೇಳಿ ವೀಕ್ಷಿಸುತ್ತಿದ್ದ ತಮ್ಮದೇ ಮಂತ್ರಿಗಳ ಬಗ್ಗೆಯೇ ತೆಪ್ಪಗೆ ಸಹಿಸಿಕೊಂಡಿದ್ದ ಈ ವೀರವನಿತೆಯರಿಗೆ ಕಾಂಗ್ರೆಸ್ ಕಾಲದಲ್ಲಿ ಮಹಿಳೆಯರಿಗೆ ರಕ್ಷಣೆಯಿಲ್ಲ ಎನ್ನುವ ಯಾವ ನೈತಿಕತೆಯಿದೆ?

ಹಾವೇರಿ: ಸಲೀಂ ಎಂಟ್ರಿಯೂ, ಉದಾಸಿ ಸೋಲೂ



ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹೀನಾಯವಾಗಿ ಸೋತ ತಂದೆ ಸಿ.ಎಂ.ಉದಾಸಿಯ ಮುಖವನ್ನು ಮುಂದಿಟ್ಟುಕೊಂಡು ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಕನಸು ಕಾಣುತ್ತಿರುವ ಶಿವಕುಮಾರ ಉದಾಸಿಗೆ ಅಪ್ಪನಿಗೆ ಆದ ಗತಿ ಮರುಕಳಿಸುವುದರಲ್ಲಿ ಸಂಶಯವಿಲ್ಲ. ಯಾಕೆಂದರೆ ಒಂದೆಡೆ ಹಾವೇರಿ ಕ್ಷೇತ್ರದ ಜನ ಮುದಿ ಉದಾಸಿಯ ಉರವಣಿಗೆಯಿಂದ ಅರ್ಧ ಬೇಸತ್ತಿದ್ದಾರೆ, ಇನ್ನೊಂದೆಡೆ ಕಳೆದ ಐದು ವರ್ಷದಿಂದ ಶಿವಕುಮಾರ ಉದಾಸಿ ಸಂಸದನಾಗಿ ಕಡಿದು ಗುಡ್ಡೆ ಹಾಕಿದ್ದನ್ನೂ ನೋಡಿದ್ದಾರೆ. ಈ ಕಾರಣಕ್ಕೇ ಓಟು ಕೊಡುವ ಮುನ್ನವೇ ತಂದೆಯೊಂದಿಗೆ ಮಗನಿಗೂ ಹಾನಗಲ್ಲಿನ ದಾರಿ ತೋರಿಸುತ್ತಿದ್ದಾರೆ.

ಶಾಸಕರುಗಳನ್ನು ಜೊತೆಗಿಟ್ಟುಕೊಂಡು ಕಣಕ್ಕಿಳಿದಿದ್ದಾರೆ ಕಾಂಗ್ರೆಸ್‌ನ ಸಲೀಂ ಅಹ್ಮದ್.

ಸಲೀಂ ಅವರು ತಮ್ಮ ಮೂವತ್ತು ವರ್ಷದ ರಾಜಕೀಯ ಜೀವನದಲ್ಲಿ ಎಂದಿಗೂ ಹೆಸರು ಕೆಡಿಸಿಕೊಂಡವರಲ್ಲ. ಸಜ್ಜನ ಎನಿಸಿಕೊಳ್ಳುವುದರ ಜೊತೆಗೆ ಪ್ರಾಮಾಣಿಕ ಎಂಬ ಹಣೆಪಟ್ಟಿ ಕೂಡ ಸಲೀಂ ಅವರಿಗೆ ಪ್ಲಸ್ ಪಾಯಿಂಟ್ ಆಗಿದೆ. ಎಲ್ಲ ಜನಾಂಗದ ಜನರೊಂದಿಗೆ ವಿಶ್ವಾಸ ಬೆಳೆಸಿಕೊಂಡಿರುವ ಸಲೀಂ ಹಾವೇರಿಯನ್ನು ತಮ್ಮ ರಾಜಕೀಯ ಕ್ಷೇತ್ರವನ್ನಾಗಿ ಮಾಡಿಕೊಂಡಾಗಿನಿಂದ ಪ್ರತಿಯೊಬ್ಬರಿಗೂ ಚಿರಪರಿಚಿತ. ಹೀಗಾಗಿ ಕಾಂಗ್ರೆಸ್‌ನ ಅಲೆಯೊಂದಿಗೆ ಅವರ ಉತ್ತಮ ರಾಜಕೀಯ ಚಾರಿತ್ರ್ಯ ಕೂಡ ಈ ಬಾರಿಯ ಚುನಾವಣೆಯಲ್ಲಿ ಅವರನ್ನು ಗೆಲುವಿನತ್ತ ಕರೆದೊಯ್ಯಲಿದೆ.


ಹಾವೇರಿ ಲೋಕಸಭಾ ಕ್ಷೇತ್ರ ಸದ್ಯ ಹೆರಿಗೆ ನೋವನ್ನು ಅನುಭವಿಸುತ್ತಿದೆ. ಕೂಸು ಹುಟ್ಟುವ ಮುನ್ನವೇ ಉದಾಸಿ ಪಡೆ ಕುಲಾವಿ ಹೊಲಿಸಿಕೊಂಡು ಕುಣಿದಾಡುತ್ತಿದೆ. ಕಾಂಗ್ರೆಸ್ ತನ್ನ ಅಭ್ಯರ್ಥಿಯ ಆಯ್ಕೆಯನ್ನು ತಡವಾಗಿ ಘೋಷಣೆ ಮಾಡಿದ್ದನ್ನು ಲಾಭವನ್ನಾಗಿಸಿಕೊಂಡು ಒಂದು ತಿಂಗಳ ಹಿಂದೆಯೇ ಪ್ರಚಾರಕ್ಕೆ ಇಳಿದ ಉದಾಸಿ ಅಪ್ಪ ಮಗ ಗೆದ್ದುಬಿಟ್ಟವರಂತೆ ಅಬ್ಬರಿಸುತ್ತಿದ್ದಾರೆ. ನಾಮಪತ್ರ ಸಲ್ಲಿಸುವ ಕೊನೆಯ ದಿನ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಎಂದು ಘೋಷಣೆಯಾಗಿ ನಂತರ ಕಣಕ್ಕಿಳಿದಿರುವ ಸಲೀಂ ಅಹ್ಮದ್ ಮಾತ್ರ ತಣ್ಣಗೆ ಶಾಕ್ ನೀಡುವ ತಯಾರಿ ಮಾಡಿದ್ದಾರೆ.

ಹಾವೇರಿ ಕ್ಷೇತ್ರದಲ್ಲಿ ಪ್ರಭಾವಿ ಪಂಚಮಸಾಲಿಗರೇ ಅಭ್ಯರ್ಥಿಯನ್ನು ಗೆಲ್ಲಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಆದರೆ ತನ್ನ ಬೆಂಬಲ ಯಾರಿಗೆ ಎಂಬುದನ್ನು ಈ ಸಮುದಾಯ ಇನ್ನೂ ಸ್ಪಷ್ಟಪಡಿಸಿಲ್ಲ. ಹಾಗಂತ ಲಿಂಗಾಯತ ಪಾಲಿಟಿಕ್ಸ್‌ನಡಿ ಶಿವಕುಮಾರ ಉದಾಸಿ ಗೆದ್ದುಬಿಡುತ್ತಾನೆ ಎನ್ನುವುದು ಮೂರ್ಖತನವೆನಿಸಿಕೊಳ್ಳುತ್ತದೆ. ಯಾಕೆಂದರೆ ಕ್ಷೇತ್ರದ ಶೇ. 90 ರಷ್ಟು ಲಿಂಗಾಯತ ಮಠಗಳು ಸೇರಿದಂತೆ ಅನೇಕ ಧಾರ್ಮಿಕ ಮುಖಂಡರು ಸಲೀಂ ಅಹ್ಮದ್‌ರಿಗೆ ಬಹಿರಂಗ ಬೆಂಬಲ ಘೋಷಿಸಿದ್ದಾರೆ.

ಕೆಳಿದ ರೈತರ ಮೇಲೆ ಗೋಲಿಬಾರ್ ಮಾಡಿಸಿದ್ದು, ಸಹಕಾರಿ ಬ್ಯಾಂಕುಗಳನ್ನು ದಿವಾಳಿಗೆ ಹಚ್ಚಿದ್ದು, ಅಧಿಕಾರದಲ್ಲಿದ್ದಾಗ ಸರ್ಕಾರಿ ಗೋಮಾಳ ಜಾಗವನ್ನು ಬಿಡದಂತೆ ಭೂಲೂಟಿ ಮಾಡಿದ್ದು, ಕಳೆದ ಐದು ವರ್ಷ ಸಂಸದಗಿರಿಯಲ್ಲಿ ಅನುದಾನವನ್ನು ಬೇಕಾಬಿಟ್ಟಿ ಹಂಚಿಕೆ ಮಾಡಿದ್ದು ಶಿವಕುಮಾರ್ ಉದಾಸಿಯನ್ನು ಕಾಡುತ್ತಿದೆ.

ಅಖಂಡ ಧಾರವಾಡ ಜಿಲ್ಲೆಯ ಕಬ್ಬು ಬೆಳೆಗಾರರ ಪಾಲಿಗೆ ಕಾಮಧೇನುವಿನಂತಿದ್ದ ಸಂಗೂರು ಸಕ್ಕರೆ ಕಾರ್ಖಾನೆಗೆ ಉದಾಸಿ ಮತ್ತವನ ಖಾಸಾ ಚೇಲಾ ಮಾಜಿ ಶಾಸಕ ಶಿವರಾಜ ಸಜ್ಜನ ಕಾಲಿಟ್ಟ ನಂತರ ಇಡೀ ಫ್ಯಾಕ್ಟರಿಯನ್ನು ನುಂಗಿ ನೀರುಕುಡಿದುಬಿಟ್ಟರು. ಅದು ಸಾಲದೆಂಬಂತೆ 18 ತಿಂಗಳಿನಿಂದ ಕಾರ್ಖಾನೆಯ ಕಾರ್ಮಿಕರಿಗೆ ಸಂಬಳ ಸಿಗದಂತೆ ಮಾಡಿ ದುರ್ಗಪ್ಪ ತಳವಾರ ಮತ್ತು ಹನುಮಂತಪ್ಪ ಕಾಳೆ ಎಂಬ ಕಾರ್ಮಿಕರಿಬ್ಬರೂ ಆತ್ಮಹತ್ಯೆ ಮಾಡಿಕೊಳ್ಳುವಂತಹ ಸ್ಥಿತಿ ತಂದಿಟ್ಟರು. ಕಾರ್ಮಿಕರ ಭವಿಷ್ಯ ನಿಧಿಯಲ್ಲೂ ಕತ್ತರಿ ಪ್ರಯೋಗಿಸಿದ ಉದಾಸಿ ಪಡೆ ವಿಆರ್‌ಎಸ್ ಭೂತವನ್ನು ಬಲವಂತವಾಗಿ ಕಾರ್ಖಾನೆ ಅಂಗಳಕ್ಕೆ ಎಳೆತಂದು ನೂರಾರು ಬಡ ಕುಟುಂಬಗಳ ಮನೆಯ ದೀಪ ಆರಿಸಿಬಿಟ್ಟರು. ಇಲ್ಲಿಯತನಕ ಸುಮಾರು 45 ವರ್ಷಗಳಿಂದ ಸಿ.ಎಂ. ಉದಾಸಿಯ ಉಪಟಳಗಳನ್ನು ಸಹಿಸಿಕೊಂಡು ಬಂದಿರುವ ಹಾವೇರಿ ಜಿಲ್ಲೆಯ ಜನರಿಗೆ ಅವನ ಮಗ ಶಿವಕುಮಾರ ಉದಾಸಿಯ ಹುಚ್ಚಾಟವನ್ನು ಕಳೆದ ಐದು ವರ್ಷಗಳಿಂದ ಸಹಿಸಿಕೊಳ್ಳುವಂತಾಗಿತ್ತು. ಕಳೆದ ಬಾರಿ ಮಾಡಿದ ತಪ್ಪನ್ನು ಈ ಬಾರಿ ಮಾಡಿದರೆ, ವನವಾಸ ಗ್ಯಾರಂಟಿ ಎಂಬ ನಿರ್ಧಾರಕ್ಕೆ ಬಂದಿರುವ ಇಲ್ಲಿಯ ಪ್ರಜ್ಞಾವಂತ ಮತದಾರರು ಸಜ್ಜನ ಸಲೀಂ ಕಡೆ ವಾಲುತ್ತಿದ್ದಾರೆ.


ಶಿವಕುಮಾರ ಉದಾಸಿ ಮೂಲತಃ ರಾಜಕಾರಣದ ಪೂರ್ಣ ಪಾಠ ಗೊತ್ತಿಲ್ಲದ ಆಸಾಮಿ. ರಾಜಕಾರಣವೆಂದರೆ ನೆಲ ಮಾರಿ ದುಡ್ಡು ಗಳಿಸುವ ದಂಧೆ ಎಂದುಕೊಂಡಿರುವ ಈತ ಪಾರ್ಲಿಮೆಂಟ್‌ಗೆ ಆಯ್ಕೆಯಾದಾಗಲೂ ಹೈಟೆಕ್ ರಿಯಲ್ ಎಸ್ಟೇಟ್‌ಗೆ ಹೊಸ ಟಚ್ ಕೊಟ್ಟಂತಹ ಮನುಷ್ಯ. ಕೇವಲ ಬೆಂಗಳೂರಿಗೆ ಸೀಮಿತವಾಗಿದ್ದ ತನ್ನ ಭೂ ಮಾಫಿಯಾವನ್ನು ರಾಜ್ಯದ ಪ್ರಮುಖ ಪಟ್ಟಣಗಳಿಗೂ ವಿಸ್ತರಿಸಿದ್ದಲ್ಲದೆ, ದಿಲ್ಲಿಯಲ್ಲೂ ಈ ದಂಧೆಯ ಕಡ್ಡಿಯಾಡಿಸಿದ್ದ ಎಂಬ ರೂಮರ್ ಇದೆ. ಇಂತಹ ಆಸಾಮಿ ಅಪ್ಪನೊಂದಿಗೆ ಕೆಜೆಪಿ ಸೇರಿದಾಗ ಸ್ವತಃ ಇದೇ ಜಿಲ್ಲೆಯ ಬಿಜೆಪಿ ಚೆಡ್ಡಿಗಳು "ಪೀಡೆಗಳು ತೊಲಗಿದವು" ಎಂದಿದ್ದರು. ಪಾರ್ಲಿಮೆಂಟಿಗೂ ಹೊಸ ಕ್ಯಾಂಡಿಡೇಟ್ ಹುಡುಕುವ ಗೋಜಿಗೂ ಇಳಿದಿದ್ದರು. ಆದರೆ, ಹೋದ್ಯಾ ಪಿಶಾಚಿ ಎಂದರೆ ಬಂದೆ ಗವಾಕ್ಷೀಲಿ.. ಎಂಬಂತೆ ಅಧಿಕಾರಕ್ಕಾಗಿ ಮತ್ತೆ ಚೆಡ್ಡಿ ತೊಟ್ಟು ತಮ್ಮ ಹೀನಚರಿತ್ರೆಯನ್ನು ಮತ್ತೊಮ್ಮೆ ಬೆತ್ತಲಾಗಿಸಿದ್ದಾರೆ.




ಸಿ.ಎಂ. ಉದ

ಹೀನಾಯವಾಗಿ ಸೋಲುಂಡು ರಾಜಕೀಯ ನಿ ಘೋಷಿಸುವ ಮಟ್ಟಿಗೆ ಜನರಲ್ಲಿ ಬೇಸರ ಮೂಡಿಸಿ ರಾಣೆಬೆನ್ನೂರಿನ ಜಿ.ಶಿವಣ್ಣ, ಹಾವೇರಿಯ ನೆಹರು ಓಲೇ ಶಿವರಾಜ ಸಜ್ಜನ, ಬ್ಯಾಡಗಿಯ ಬಳ್ಳಾರಿ ಸಾಹುಕ ಶಿರಹಟ್ಟಿಯ ರಾಮಣ್ಣ ಲಮಾಣಿ, ಗದುಗಿನ ರ ರಾಮುಲೂನ ಚೇಲಾಗಳನ್ನು ಬೆನ್ನಿಗಿಟ್ಟುಕೊಂಡು ಕೇಳಲು ಬೀದಿಗಿಳಿದಿರುವ ಮುದುಡಿದ ತಾವರೆ ಚೆಡ್ಡಿಗಳು ಗೆಲುವಿನ ಹಗಲುಗನಸಿನಲ್ಲಿದ್ದಾರೆ.

ಬಿಜೆಪಿ ಮತ್ತು ಸಂಯುಕ್ತ ಜನತಾದಳದ ಅಲಯ ಅಭ್ಯರ್ಥಿಯಾಗಿ ಈ ಹಿಂದೆ ಲೋಕಸಭೆಗೆ ಗೆ ಹಾವೇರಿಯ ಬಿ.ಎಂ. ಮೆಣಸಿನಕಾಯಿ ಅವರ




ಎಚ್.ಕೆ. ಪಾಟೀಲ್




ಕೆ.ಬಿ. ಕೋಳಿವಾಡ್



ಮನೋಹರ್ ತಹಶೀಲ್ದಾರ್



ರುದ್ರಪ್ಪ ಲಮಾಣಿ



ಶಿವಕುಮಾರ್ ಉದಾಸಿ



ಶಿವಣ್ಣವರ್



ಶಿವರಾಜ್

ಕಳೆದ ಬಾರಿಯಂತೆ ಈ ಬಾರಿಯೂ ಈ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಸಲೀಂ ಅಹ್ಮದ್ ಮತ್ತು ಬಿಜೆಪಿಯ ಶಿವಕುಮಾರ ಉದಾಸಿಯ ಮಧ್ಯೆ ನೇರ ಹಣಾಹಣಿ ನಡೆಯಲಿದೆ. ಹೋದ ಸಾರಿ ಜೆಡಿಎಸ್‌ನ ಶಿವಕುಮಾರಗೌಡನ ಜೊತೆ ಬಿಜೆಪಿ ಕೊನೆ ಘಳಿಗೆಯಲ್ಲಿ ಡೀಲು ಕುದುರಿಸಿಕೊಂಡಿದ್ದ ಉದಾಸಿ ಗೆದ್ದಿದ್ದ. ಆದರೆ ಈಗ ಪರಿಸ್ಥಿತಿ ಬದಲಾಗಿದೆ.

ಐದು ವರ್ಷಗಳ ಕಾಲ ಅಪ್ಪನ ಮಂತ್ರಿಗಿರಿ ಮತ್ತು ತನ್ನ ಪುಂಡಾಟಿಕೆ ಸಾಮ್ರಾಜ್ಯದಲ್ಲಿ ಸಾಮಾನ್ಯ ಜನರನ್ನು ಮರೆತು ಹೈಟೆಕ್ ರಾಜಕಾರಣ ಮಾಡಿದ ಶಿವಕುಮಾರ ಜನರ ಬಾಯಲ್ಲಿ ಸದ್ಯ ಗಮಾರನಾಗಿದ್ದಾನೆ. ಮಗನನ್ನು ಮತ್ತೆ ಗೆಲ್ಲಿಸಿ ಸೋತ ಮುಖದಲ್ಲೇ ಗೆಲುವು ಕಾಣುವ ಕನಸು ಕಾಣುತ್ತಿರುವ ಮುದಿ ಉದಾಸಿಗೆ ಮತ್ತೊಂದು ಸೋಲು ಕಣ್ಮುಂದಿದೆ ಎನ್ನುವುದು ಪ್ರಚಾರಕ್ಕೆ ಹೊರಟ ದಿನದಿಂದಲೇ ಅರ್ಥವಾಗಿರಲಿಕ್ಕೂ ಸಾಕು. ಅಧಿಕಾರದಲ್ಲಿದ್ದಾಗ ಲೂಟಿಯೊಂದೇ ದಂಧೆ ಮಾಡಿಕೊಂಡಿದ್ದ ಉದಾಸಿಯ ಪಟಾಲಂನ ಸೋತ ಮಾಜಿ ಮುಖಗಳೆಲ್ಲಾ ಹಲ್ಲುಕಿರಿಯುತ್ತಾ ಬಯಲಿಗೆ ಬಿದ್ದಿವೆ. ಸೋತವರನ್ನು ಕಟ್ಟಿಕೊಂಡು ಉದಾಸಿ ಹಗಲಲ್ಲೇ ನೇಣು ಹಾಕಿಕೊಳ್ಳುವಂತಹ ಸ್ಥಿತಿಯನ್ನು ತಂದುಕೊಳ್ಳುವುದರಲ್ಲಿ ಎರಡು ಮಾತಿಲ್ಲ.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಹಾವೇರಿಯ ನಾಲ್ಕು ಮತ್ತು ಗದಗ ಜಿಲ್ಲೆಯ ಮೂರು ಕ್ಷೇತ್ರಗಳನ್ನು ವಶ ಮಾಡಿಕೊಂಡಿರುವ ಕಾಂಗ್ರೆಸ್ ಈ ಬಾರಿ ಇಲ್ಲಿ ಪ್ರಬಲವಾಗಿದೆ. ಸಚಿವ ಹೆಚ್.ಕೆ ಪಾಟೀಲರಿಂದ ಹಿಡಿದು ರಾಣೆಬೆನ್ನೂರಿನ ಕೆ.ಬಿ.ಕೋಳಿವಾಡ, ಬ್ಯಾಡಗಿಯ ಬಸವರಾಜ ಶಿವಣ್ಣವರ, ಹಾನಗಲ್ಲಿನ ಮನೋಹರ ತಹಶೀಲ್ದಾರ, ಹಾವೇರಿಯ ರುದ್ರಪ್ಪ ಲಮಾಣಿ, ರೋಣದ ಜಿ.ಎಸ್. ಪಾಟೀಲ ಮತ್ತು ಶಿರಹಟ್ಟಿಯ ರಾಮಕೃಷ್ಣ ದೊಡ್ಡಮನಿಯಂತಹ ಗೆಲುವಿನ ನಗೆ ಬೀರಿದ

ಹದಿನೈದು ಲೋಕಸಭೆಗಳಲ್ಲಿ 13 ಬಾರಿ ನೇರ ಹಣಾಹಣಿಯನ್ನು ಕಂಡಿರುವ ಈ ಕ್ಷೇತ್ರ ಈ ಬಾರಿಯೂ ಅದೇ ಚಿತ್ರಣವನ್ನು ಹೊರಹಾಕಿದೆ. ಬಿ.ಎಂ. ಮುಜಾವುದ್ದೀನ ಮೂರು ಬಾರಿ, ಅಜೀತ್ ಶೇಟ್ ಮೂರು ಬಾರಿ, ಪ್ರೊ. ಐ. ಜಿ ಸನದಿಯಂತಹ ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿಗಳನ್ನು ಹೆಚ್ಚು ಬಾರಿ ಆರಿಸಿ ಕಳುಹಿಸಿದ್ದು ಈ ಕ್ಷೇತ್ರದ ಹೆಗ್ಗಳಿಕೆ. ಹಾಗೆ ನೋಡಿದರೆ, ಉಳಿದೆಲ್ಲಾ ಲೋಕಸಭಾ ಕ್ಷೇತ್ರಗಳ ಎಲೆಕ್ಷನ್‌ಗಿಂತ ಭಿನ್ನವಾಗಿ ಹಾವೇರಿ ಕ್ಷೇತ್ರದ ಚುನಾವಣೆ ನಡೆಯುವುದು ಬಹಿರಂಗ ಸತ್ಯ. 7,84,464 ಪುರುಷರು, 7,27,634 ಮಹಿಳೆಯರನ್ನು ಒಳಗೊಂಡು ಒಟ್ಟು 15,12,151 ಮತದಾರರನ್ನು ಹೊಂದಿರುವ ಹಾವೇರಿ ಕ್ಷೇತ್ರ ಡಿಲಿಮಿಟೇಶನ್ ನಂತರದಲ್ಲಿ ಎದುರಿಸುತ್ತಿರುವ ಎರಡನೇ ಚುನಾವಣೆ ಇದಾಗಿದೆ. ಧಾರವಾಡ ದಕ್ಷಿಣ ಎಂದು ಕರೆಸಿಕೊಳ್ಳುತ್ತಿದ್ದುದು ಹಾವೇರಿ ಎಂದಾದನಂತರ ಎಂಟು ವಿಧಾನಸಭಾ ಕ್ಷೇತ್ರಗಳನ್ನು, ಒಂಭತ್ತು ತಾಲೂಕುಗಳನ್ನು ಹೊಂದಿದೆ. ಹಾವೇರಿ ಜಿಲ್ಲೆಯ ಶಿಗ್ಗಾಂವಿ ಕ್ಷೇತ್ರವನ್ನು, ಗದಗ ಜಿಲ್ಲೆಯ ನವಲಗುಂದವನ್ನು ಹೊರತುಪಡಿಸಿ ಉಳಿದ ಒಂಭತ್ತು ತಾಲೂಕುಗಳು ಈ ಲೋಕಸಭಾ ಕ್ಷೇತ್ರದಲ್ಲಿ ಲೀನಗೊಂಡಿವೆ.

ಧಾರವಾಡ ದಕ್ಷಿಣ ಕ್ಷೇತ್ರವಾಗಿದ್ದಾಗ ಶಿಗ್ಗಾಂವಿ ಮತ್ತು ಸವಣೂರು ತಾಲೂಕುಗಳೆರಡೂ ಕ್ಷೇತ್ರದಲ್ಲಿದ್ದ ಕಾರಣಕ್ಕೆ ಇಲ್ಲಿ ಅಲ್ಪಸಂಖ್ಯಾತರ ಗೆಲುವು ಕಟ್ಟಿಟ್ಟಬುತ್ತಿಯಂತಿತ್ತು. ಆದರೆ, ಇವತ್ತು ಮುಸ್ಲಿಂ ಪ್ರಾಬಲ್ಯದ ಶಿಗ್ಗಾಂವಿ ಮತ್ತು ಸವಣೂರುಗಳೆರಡೂ ಧಾರವಾಡ ಕ್ಷೇತ್ರಕ್ಕೆ ಸೇರ್ಪಡೆಯಾಗಿವೆ. ಹೀಗಾಗಿ ಸಲೀಂ ಅಹ್ಮದ್‌ಗೆ ಇದೇ ಕೊರತೆಯಾಗಿ ಕಾಡುತ್ತಿದೆ.

ಹಾಗೆಯೇ ಸಿ.ಎಂ. ಉದಾಸಿ ನೇತೃತ್ವದ ಬಿಜೆಪಿ ಸಂಗೂರು ಸಕ್ಕರೆ ಕಾರ್ಖಾನೆ ನಷ್ಟಕ್ಕೆ ದೂಡಿದ್ದು, ಗೊಬ್ಬರ

ರವಿ ಮೆಣಸಿನಕಾಯಿ ಜೆಡಿಎಸ್ ಅಭ್ಯರ್ಥಿಯ ಉದಾಸಿಯನ್ನು ಹಣಿಯಲೆಂದೇ ಕಣಕ್ಕಿಳಿದಿದ್ದಾರೆ. ಪ್ರ ಲಿಂಗಾಯತ ಜಾತಿಯ ಮತಗಳನ್ನು ಅದರಲ್ಲೂ ಬಿ ಓಟ್ ಬ್ಯಾಂಕ್‌ಗೆ ಕತ್ತರಿ ಹಾಕಬಲ್ಲ ರವಿ ಅಖಾಡ ಸ್ವಲ್ಪ ಕಸರತ್ತು ಮಾಡಿದರೆ, ಕಾಂಗ್ರೆಸ್‌ನ ಸಲೀಂ ಗೆ ನಿಚ್ಚಳವಾದಂತೆ.

ಉದಾಸಿ ಎಂಬ ಅಪ್ಪ ಮಕ್ಕಳ ಉರವಣಿಗೆಗೆ ಬಾರಿ ಜನ ಬ್ರೇಕ್ ಹಾಕದಿದ್ದರೆ ಸೌಹಾರ್ದತೆಗೆ ಹೆಸರಾಗಿ ಕ್ಷೇತ್ರದಲ್ಲಿ ಕೊಳ್ಳಿ ದೆವ್ವಗಳ ಕಾಟ ದುಪ್ಪಟ್ಟಾಗುವುದ ಸಂದೇಹವಿಲ್ಲ.

■ ವಿನಯ

ಅತ್ರೆ ರಾಜಕುಮಾರನಂಗೆ ಅಳಬೇಕು ಸಾರ್

ಥೂತ್ತೇರಿ

ಯಾಹೂ

ಚರ್ಚ್‌ನ ಮೇಲೆ ದಾಳಿ ಮಾಡುವುದು, ಮಸೀದಿಯ ಮೇಲೆ ಪಿಗ್ ಮಟನ್ ಎಸೆಯುವುದು, ಹುಡುಗ-ಹುಡುಗಿ ಹತ್ತಿರ ಕುಳಿತಿದ್ದರೆ ಹಲ್ಲೆ ಮಾಡುವುದು ಇಂತಹ ಘನ ಕಾರ್ಯಗಳನ್ನ ಮಾಡುತ್ತ ಬರುತ್ತಿರುವ ವಾನರ ಸೇನೆಯ ಮುಖಂಡನಾದ ಪ್ರಮೋದ್ ಮುತಾಲಿಕ್ ಎಂಬ ಮಂದಮತಿಯನ್ನ ಈಶ್ವರಪ್ಪ ಜೋಷಿ ಇತ್ಯಾದಿ ಬಿಜೆಪಿ ಮಹಸ್ಥಗಳು ಸಂಧಿಸಿದರಂತಲ್ಲಾ. "ಮುತಾಲಿಕ್‌ರವರೆ, ನಮ್ಮ ಇಂತಹ ಸ್ಥಿತಿಯಲ್ಲಿ ನಿಮ್ಮ ಅಗತ್ಯ ತುಂಬ ಇದೆ. ಜೋಷಿ ಎಂಬ ರಾಮನಿಗೆ ಸುಗ್ರೀವನ ಪರಿವಾರ ಸಿಕ್ಕಿದಂತೆ ನಮಗೀಗ ನೀವು ಸಿಕ್ಕಿರುವುದು. ನಿಮ್ಮಿಂದ ಮಾತ್ರ ಜೋಷಿ ಈ ಯುದ್ಧದಲ್ಲಿ ಗೆಲ್ಲಲು ಸಾಧ್ಯ" ಎಂದು ಚೆಡ್ಡಿಗಳು ಹೊಗಳಿದರಂತಲ್ಲಾ. ಅದನ್ನು ಕೇಳಿ ಪ್ರಮೋದ್ ಮುತಾಲಿಕ್ ಬಾಲ ಉಬ್ಬಿಸಿ ಥೇಟ್ ವಾನರವೀರನಂತೆ ನಗೆ ಬೀರಿದನಂತಲ್ಲಾ. ಆ ಕೂಡಲೇ ರಾಮಮಂದಿರದಂತಹ ಮನೆಯೊಳಕ್ಕೆ ಮುತಾಲಿಕ್‌ನನ್ನು ಕರೆದುಕೊಂಡು ಹೋಗಿ ಚಿತ್ರಶಾಲಾಕಿ ಕೂರಿಸಿ, ಹುರಿದ ಖರಿದ ಪದಾರ್ಥಗಳನ್ನ ಮುತಾಲಿಕ್‌ನ ಮುಂದೆ ಸುರಿದು ತಿನ್ನಿಸಿ, ರಾಮರಸ ಕುಡಿಸಿದರಂತಲ್ಲಾ. ಸಂತೃಪ್ತಿಗೊಂಡ ಮುತಾಲಿಕ್ "ಸ್ವಲ್ಪ ವಿರಾಮದ ನಂತರ ವಾಯುವಿಹಾರಕ್ಕೆ ಹೋಗಿ ಬಂದು ಲಘುಪಾಹಾರ ಸೇವಿಸುತ್ತೇನೆ" ಎಂದು ಹೇಳುವಷ್ಟರಲ್ಲಿ ಅಳು ಶುರುಮಾಡಿದ ಜೋಷಿ "ಕ್ಷಮಿಸಬೇಕು ಮುತಾಲಿಕ್" ಎಂದನಂತಲ್ಲಾ. ಆಗ "ಯಾಕೆ ಏನಾಯ್ತು?" ಎಂದು ಮುತಾಲಿಕ್ ಕೇಳಲಾಗಿ, "ನೀವು ವಾಯುವಿಹಾರಕ್ಕೆ ಹೋದವರು ಮತ್ತೆ ಬರುವುದು ಬೇಡಿ. ಬೇರೆ ದಾರದ್ದಾದರೂ ಮನೆಗೆ ಹೋಗಿ. ಈ ವಿಷಯದಲ್ಲಿ ನಾವು ನಿಸ್ಸಹಾಯಕರು" ಎಂದರಂತಲ್ಲಾ, ಥೂತ್ತೇರಿ!

* * *

ಜೋಷಿ ಮಾತಿನಿಂದ ಘಾಸಿಯಾದ ಮುತಾಲಿಕ್, "ನಿಮ್ಮ ಮಾತು ನನಗರ್ಥವಾಗುತ್ತಿಲ್ಲ. ನೇರವಾಗಿ ಮಾತನಾಡಿ. ಯಾಕೆಂದರೆ ನಾನು ಕೂಡ ನೇರವಾಗಿ ಮಾತನಾಡುವವನು" ಎಂದನಂತಲ್ಲಾ. ಕೂಡಲೇ ಈಶ್ವರಪ್ಪ "ಮುತಾಲಿಕ್‌ರವರೆ, ನೀವು ನನ್ನ ಸಹೋದರನಂತೆ. ನಾವು ಜೊತೆಯಲ್ಲಿರಬೇಕಾದದ್ದು ಧರ್ಮ. ಆದರೆ ಈ ಸಮಯದಲ್ಲಲ್ಲ. ಈ ಚುನಾವಣೆ ಮುಗಿದಕೂಡಲೇ ನಿಮ್ಮನ್ನ ಮತ್ತೆ ಕರೆದು ಹೋಳಿಗೆ ಊಟ ಹಾಕುತ್ತೇವೆ. ಈಗ ಎದ್ದು ಸ್ವಲ್ಪ ಹೊರಗೆ ಬಂದರೆ ನಿಜವಾದ ವಿಷಯ ಏನೆಂದು ನಾನು ಹೇಳುತ್ತೇನೆ" ಎಂದರಂತಲ್ಲಾ. ಆಗ ಯಾವುದೋ ಗಹನವಾದ ವಿಷಯವೇ ಇರಬೇಕೆಂದು ಬಗೆದ ಮುತಾಲಿಕ್ ಎದ್ದು ಹೊರ ಬರಲಾಗಿ ಈಶ್ವರಪ್ಪ "ಏನಿಲ್ಲಾ, ನಮ್ಮ ಹೈಕಮಾಂಡು ಕೊಟ್ಟ ಸೂಚನೆ ಪ್ರಕಾರ ನೀವು ಪಾರ್ಟಿಯ ಹೊರಗಿದ್ದು ಪಾರ್ಟಿಯನ್ನ ಅಧಿಕಾರಕ್ಕೆ ತರುವ ಕೆಲಸ ಮಾಡ ಬೇಕಂತೆ. ಆದರೆ ಪಾರ್ಟಿಯೊಳಕ್ಕೆ ಬರಬಾರದಂತೆ. ನೀವು ಹೊರಗಿದ್ದರೂ ಬಂಧುಗಳೇ ಅಲ್ಲವೆ. ನಾವು ಗುಡಿಯ ಒಳಗಿದ್ದೇವೆ, ನೀವು ಹೊರಗಿದ್ದೀರಿ ಅಷ್ಟೆ. ಬೇಸರವಾಗಬೇಡಿ. ಹೋಗಿಬನ್ನಿ" ಎಂದರಂತಲ್ಲಾ. ಆ ಕೂಡಲೇ ಕೆಂಡಮಂಡಲ ವಾದ ಮುತಾಲಿಕ್ "ಇನ್ನ ಮುಂದೆ ಕ್ರಿಶ್ಚಿಯನ್ನರು ಮತ್ತು ಮುಸ್ಲಿಮರನ್ನು ಬಿಟ್ಟು ನಿಮ್ಮ ಮೇಲೆ ಕಾರ್ಯ ಕ್ರಮ ಹಾಯ್ಕೊಳ್ತಿನಿ. ಮನೆಗೆ ಕರೆದು ಊಟ ಹಾಕಿ ಅವಮಾನ ಮಾಡ್ತಿರ, ನಿಮ್ಮನ್ನ ಸುಮ್ಮನೆ ಬಿಡೋದಿಲ್ಲ, ಆ ಮೋದಿ ಮೇಲಾಣೆ" ಎಂದು ಹೊರಟನಂತಲ್ಲಾ, ಥೂತ್ತೇರಿ!!

* * *

ನಗುವ ಗಂಡಸನ್ನ ಅಳುವ ಹೆಂಗಸನ್ನ ನಂಬಬಾರದು ಎಂಬುದು ಒಂದು ಲೋಕೋತ್ತರವಾದ ನಾಣ್ಣುಡಿ. ಈ



ನಾಣ್ಣುಡಿಗಿರುವ ಆಧಾರ ಯಾವುದೆಂದರೆ, ದುಶ್ಯಾಸನನಿಂದ ಮುಡಿ ಬಿಚ್ಚಿಸಿಕೊಂಡ ದ್ರೌಪದಿ ಕಡೆಯವರೆಗೂ ಜಡೆ ಹಾಕಲಿಲ್ಲವಂತೆ. ಯಾವಾಗಲೂ ಅಳುಮೊಗದಿಂದ ತಿರುಗುತ್ತಿದ್ದ ಆಕೆ ಪಾಂಡವರು ಒಟ್ಟಿಗೆ ಕಂಡಕೂಡಲೇ ಕಣ್ಣೀರ ಕೋಡಿ ಹರಿಸುತ್ತಿದ್ದಳಂತೆ. ಇನ್ನ ಆಕೆಯ ಅಂತರಂಗದ ದೈವವಾದ ಕೃಷ್ಣ ಯಾವಾಗಲೂ ನಗುತ್ತಿದ್ದನಂತೆ. ತನ್ನನ್ನು ಹೀನಾಯವಾಗಿ ಜರಿದಾಗಲೂ ನಗುತ್ತಿದ್ದನಂತೆ. ಮರ್ಮಾಘಾತದ ಮಾತುಗಳನ್ನಾಡಿದರೂ ನಗುತ್ತಿದ್ದನಂತೆ. ಅವನ ಮುಖದಲ್ಲಿ ಯಾವ ನವರಸಗಳ ಭಾವಗಳೂ ಪ್ರಕಟವಾಗದೆ ಕೇವಲ ನಗು ಮಾತ್ರ ಕೊರೆದು ನಿಲ್ಲಿಸಿದ ಕಾರಣನಾಗಿ ತುಂಬ ಅಪಾಯಕಾರಿ ಮನುಷ್ಯನಾಗಿ ಕಂಡು ಆತನಿಂದ ನಗುವ ಗಂಡಸನ್ನು ದ್ರೌಪದಿಯಿಂದ ಅಳುವ ಹೆಂಗಸನ್ನು ನಂಬಬಾರದೆಂಬ ನಾಣ್ಣುಡಿ ನಾಡಿನ ತುಂಬ ಹರಡಿತಂತೆ. ಆದರೆ ಈ ಸಿದ್ದರಾಮಯ್ಯ ದೇವೇಗೌಡರ ದ್ವೇಷದಿಂದಾಗಿ ನಾಣ್ಣುಡಿಯ ಪುಲ್ಲಿಂಗ-ಸ್ತ್ರೀಲಿಂಗವನ್ನೇ ಬದಲಿಸಿ ಅಪ್ಪಮಕ್ಕಳನ್ನ ಟೀಕಿಸುತ್ತಿದ್ದಾರಂತಲ್ಲಾ.

ಈ ಬಗ್ಗೆ, ಅಂದರೆ ಈ ಕಣ್ಣೀರಿಗೆ ಸಂಬಂಧಪಟ್ಟಂತೆ, ಮೊದಲು ಕುಮಾರಣ್ಣನನ್ನು ಮಾತನಾಡಿಸಿದರೆ ಹೇಗೆ ಅನ್ನಿಸಿ ಫೋನ್ ಮಾಡಲಾಗಿ ರಿಂಗಾಯ್ತು.

ರಿಂಗ್‌ಟೋನ್: "ಕಣ್ಣೀರಧಾರೆ ಇದೇಕೇ ಇದೇಕೇ... ನನ್ನೊಲವಿನಾ ಹೂವೆ ಈ ಶೋಕವೇಕೆ..."

"ಹಲೋ ಯಾರ್ರಿ?"

"ನಾನು ಸಾರ್ ಯಾಹು."

"ಎಲ್ಲಿದ್ದೀರ?"

"ಚಿಕ್ಕಬಳ್ಳಾಪುರದಲ್ಲಿದ್ದಿನಿ ಸಾರ್."

"ಅಲ್ಲಿಗ್ಯಾಕ್ರಿ ಹೋದ್ರಿ?"

"ನೀವು ಬರ್ತೀರಿ ಅಂತ ಗೊತ್ತಾಯ್ತು, ಅದ್ಕೆ ಬಂದೆ ಸಾರ್."

"ನಾನಿನ್ನೂ ರಾಮನಗರದಲ್ಲೇ ಇದ್ದಿನಿ ಕಂಡ್ರಿ."

"ಯಾಕ್ ಸಾರ್. ದನಿ ಒಂಥರಾ ಅಳತಾಯಿರಂಗಿದೆ?"

"ಹೌದು ಕಂಡ್ರಿ. ಅತ್ತೂ ಅತ್ತೂ ಬಿಸಿಲಿಗೂ ಅದಕೂ ತಲೆನೋವು ಬಂತು ಕಂಣ್ರೀ..."

"ಸಮಾಧಾನ ಮಾಡಿಕೊಳ್ಳಿ ಸಾರ್."

"ಏನು ಸಮಾಧಾನ ಮಾಡಿಕೊಳ್ಳೊದ್ರಿ. ಈ ರಾಮನಗರದ ಕಾರ್ಯಕರ್ತರು ಏನಿದಾರೆ ಅವ್ರುರು ನಮ್ಮ ಅಣ್ಣತಮ್ಮಂದಿರ ತರ ಇದ್ರು. ಇನ್ನ ನಮ್ಮ ತಂದೆಯವರು, ಇವುರ್‍ಯಾರು ನಮ್ಮ ಭಾವನೆಗಳು ಏನಿದಾವೆ ಅವನ್ನೆ ಅರ್ಥ ಮಾಡಿಕೊಳ್ತಾಯಿಲ್ಲ."

"ಹೇಳಿ ಸಾರ್ ನಿಮ್ಮ ಭಾವನೆ ಏನು ಅಂತ?"

"ಈ ರಾಮನಗರ ನನ್ನನ್ನ ಒಂದು ಚಿಕ್ಕ ಮಗುತರ ಅಂದ್ರೆ ಆಗುಟ್ಟಿದ ಮಗುವನ್ನ ಹೇಗೆ ಜೋಪಾನ ಮಾಡ್ತಕಂತ ಕರ್ತವ್ಯ ಏನಿದೆ ಅದನ್ನ ಮೊದಲಿಂದ್ಲೂ ಮಾಡಿದಾರೆ. ಇಲ್ಲಿಂದ ನಾನು ಎಂ.ಪಿ. ಆಗಿ ರಾಜಕಾರಣ ಶುರು ಮಾಡಿ ಬಿ.ಎಲ್. ಶಂಕರ್, ಸಿಂಧ್ಯಾ, ಸಿದ್ದರಾಮಯ್ಯ ಈ ತರದ ಜನಗಳನ್ನೆಲ್ಲಾ ಪಾರ್ಟಿಯಿಂದ ಹೊರಗೆ ಕಳಸತಕ್ಕಂತ ಶಕ್ತಿ ತುಂಬಿದ್ದೇ ಈ ರಾಮನಗರದ ರಾಜಕಾರಣ. ಇದೊಂದು ರೀತಿ ನನ್ನ ತವರುಮನೆ ಇದ್ದಂಗೆ. ಇಂತ ಜಾಗವನ್ನ ಬಿಟ್ಟು ಚಿಕ್ಕಬಳ್ಳಾಪುರಕ್ಕೆ ಹೋಗಿ ನಿಂತಗೊ ಅಂತ ನಮ್ಮ ತಂದೆಯವರು ಒತ್ತಾಯ ಮಾಡ್ತಯಿದಾರೆ."

"ನೀವು ತಂದೆ ಮಾತನ್ನ ಕೇಳಬೇಕಾಗುತ್ತೆ ಸಾರ್."

"ಕೇಳಿ ಕೇಳಿ ಸಾಕಾಗಿದೆ ಕಂಡ್ರಿ. ಈ ಹಾಳು ರಾಜಕಾರಣವೇ ಸಾಕಾಗಿದೆ."

"ರಾಜಕಾರಣ ನಿಮ್ಮಂಥವರಿಗೆ ಬೇಸರವಾಗಬಾರ್ದು ಸಾರ್. ಆದರಿಂದ್ಲೆ ಧನಕನಕ, ಸ್ತ್ರೀರತ್ನವೆಲ್ಲಾ ಪ್ರಾಪ್ತಿಯಾಗಿದೆ. ಅದನ್ನ ದಕ್ಕಿಸಿಕೊಬೇಕು ಅಂದ್ರೆ ನೀವು ರಾಜಕಾರಣ ಮಾಡ್ಬೇಕು. ತಂದೆ ಹೇಳಿದಂಗೆ ಕೇಳಲೇಬೇಕು. ಇಲ್ಲ ಅಂದ್ರೆ ತುಂಬ ಕಷ್ಟ."

"ಅದ್ಕೆ ಕಂಡ್ರೀ ಈಗ ಚಿಕ್ಕಬಳ್ಳಾಪುರಕ್ಕೆ ಹೋಗ್ತಾಯಿದೀನಿ. ಸೋಲುಗೆಲುವು ಚಿಕ್ಕಬಳ್ಳಾಪುರದ ಜನಕ್ಕೆ ಸೇರಿದ್ದು."

"ಸೋತ್ರು ಹೆದರಂಗಿಲ್ಲ ಸಾರ್. ಹ್ಯಂಗಿದ್ರು ಶಾಸಕರಾಗಿದ್ದಿರಿ. ವಿಧಾನಸಭೆಗೋಗಿ ಸಿದ್ದರಾಮಯ್ಯನ್ನ ವಿಚಾರಿಸಿಕೊಬಹುದು. ಅದಕ್ಕಂತ ಯಾರನ್ನ ಸೋಲಿಸಬೇಕು ಅಂತ ಚಿಕ್ಕಬಳ್ಳಾಪುರಕ್ಕೆ ಹೋಗಿ ನಿಂತಿದ್ದಿರೀ?"

"ನಮ್ಮ ತಂದೆ ಹೇಳಿದ್ದು ಆ ಬಚ್ಚೇಗೌಡನ್ನ ತಗೀಬೇಕು ಅಂತ."

"ಅಂಗಿದ್ರೆ ಅವರ ಮನಸ್ಸಿನಾಳದಲ್ಲಿ ಮೊಯ್ಲಿ ಹೋಗ್ಲಿ ಅಂತ ಇದೆ ಸಾರ್. ಯಾಕಂದ್ರೆ ಮೊಯ್ಲಿ ಕಾಂಗ್ರೆಸ್. ಈ ಕಾಂಗ್ರೆಸ್ ಹೆಚ್ಚು ಸ್ಥಾನ ಸೋತರೆ ಸಿದ್ದರಾಮಯ್ಯನ ಅಹಂಕಾರ ಮುರಿಬಹುದು ಅನ್ನದು ದೇವೇಗೌಡ್ರು ಪ್ಲಾನು ಸಾರ್."

"ಅವ್ರುರ ಪ್ಲಾನು ಹಾಗಿರ್ಲಿ, ಈಗ ಮೊಯ್ಲಿ, ಬಚ್ಚೇಗೌಡನ್ನ ಮೀರಿ ಹಣ ಖರ್ಚು ಮಾಡಬೇಕಲ್ರೀ, ಎಲ್ಲಿಂದ ತರಲಿ ಅಂ...."

"ಅಳಬೇಡಿ ಸಾರ್. ಬೇಕಾದ್ರೆ ಫೋನಲ್ಲಿ ಅಳಿ. ಬಹಿರಂಗ ಸಭೇಲಿ ಅಳಬಾರ್ದು ಸಾರ್."

"ಅಳು, ನಗು ನಮ್ಮ ಭಾವನೆ ಅಲ್ಲವೇನ್ರಿ. ಅವ್ರನ್ನ ಹ್ಯಂಗೆ ತಡೆಹಿಡಿದು ನಿಲ್ಸಕ್ಕಾಯ್ತದೆ. ನಮ್ಮ ಅಳುನೆ ಇವರಿಗೆ ಅರ್ಥ ಆಯ್ತಾಯಿಲ್ಲವಲ್ಲ."

"ಸಾರ್ ಒಂದು ವಿಷಯ ತಿಳಕಳಿ. ನಾಯಕನಾದವನು ಅತ್ರೆ ಜನಕ್ಕೆ ಅಧೈರ್ಯವುಂಟಾಗುತ್ತೆ, ನೀವು ಕಲ್ಲು ಗುಂಡಿದ್ದಂಗೆ ಇರಬೇಕು. ಎಂಥಾ ಟೈಮಲ್ಲೂ ಎದೆಗುಂದಲ್ಲ ಕಣಯ್ಯ ನಮ್ಮ ಕುಮಾರಣ್ಣ ಅನ್ನೋ ಹೆಸರು ಸಂಪಾದಿಸಬೇಕು. ಆಮ್ಯಾಲೆ ನೀವು ಅತ್ರೆ ಚನ್ನಾಗಿ ಕಾಣಲ್ಲ ಸಾರ್, ಅದ್ಕೆ ಅಳಬ್ಯಾಡಿ."

"ಅತ್ರೂ ಚನ್ನಾಗಿ ಕಾಣದ್ಯಂಗ್ರೀ?"

"ಡಾ. ರಾಜ್‌ಕುಮಾರ್ ಅಳತಿದ್ರಲ್ಲ ಅಂಗಳಬೇಕು. ನೀವಂಗೆ ರಘುವೀರನಂಗೆ ಅಳತಿರಿ. ಇನ್ನು ಕೆಟ್ಟದಾಗಿ ಹೇಳಬೇಕಾದ್ರೆ ತಾಯಿ ಕಳಕಂಡ ಎಮ್ಮೆ ಕರಿನಂಗೆ ಅಳತಿರಿ. ಆದ್ರಿಂದ ಮುಂದೆ ಅಳಕ್ಕೆ ಹೋಗಬೇಡಿ. ಜನರ ಮನಸ್ಸು ಕರಗಂಗೆ ಮಾತಾಡಿ."

"ಅಂಗೆ ಮಾತಾಡಕ್ಕೆ ಆಗದೆಯಿರೋದಕ್ಕಲ್ಲವೇನ್ರಿ ಅಳದು?"

"ಥೂತ್ತೇರಿ!!!" ●

ಒದ್ದು ವಿಚ್ಛೇದನ!


11 ⏮

ಯಾವತ್ತು ಪ್ರಹ್ಲಾದ್ ಜೋಷಿ ಮತ್ತು ಸಂಘ ಪರಿವಾರದಿಂದ ರಾಜಿಯ ಕರೆ ಬಂತೋ ಮುತಾಲಿಕ್ ನೀರೆಯುದೇ ಲೆಕ್ಕಾಚಾರಕ್ಕೆ ಬಂದಿದ್ದ. ಏನೇ ಆದರೂ ಬಿಜೆಪಿಯನ್ನು ಸೋಲಿಸಬಹುದೇ ಹೊರತು ತಾವ್ಯಾರೂ ಗೆಲ್ಲಲಾಗದು. ಈಗ ತವರು ಪರಿವಾರವೇ ರಾಜಿಗೆ ಬಂದಿರುವುದರಿಂದ ಮುಂದೆ ತನಗೆ ರಾಜ್ಯಸಭಾ ಸ್ಥಾನವನ್ನೋ ಅಥವಾ ಕೇಂದ್ರದ ಯಾವುದಾದರೂ ನಿಗಮ ಮಂಡಳಿಗೋ ನೇಮಕಾತಿಗೆ ಒತ್ತಾಯಿಸಿಬಿಟ್ಟರೆ ಸ್ವಾಮಿ ಕಾರ್ಯ ಸ್ವಕಾರ್ಯ ಒಟ್ಟೊಟ್ಟಿಗೆ ಈಡೇರಿದಂತಾಯ್ತು, ಬಿಜೆಪಿ ಪಾಲಿಗೆ ತಾನು ಅನಿವಾರ್ಯ ಎಂಬುದೂ ಸಾಬೀತಾಯ್ತು, ಮುಂದೆ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಪಕ್ಷದಲ್ಲಿ ತನ್ನ ಬೆಂಬಲಿಗರಿಗಿಷ್ಟು ಅನುಕೂಲ ಕಲ್ಪಿಸಬಹುದು. ಇದು ಮುತಾಲಿಕ್ ಹಾಕಿದ್ದ ಎಣಿಕೆಯಾದರೆ ಆತನನ್ನೂ ಸೇರಿದಂತೆ ಶ್ರೀರಾಮಸೇನೆಯ ಹುಡುಕೀಕ ಕಾರ್ಯಕರ್ತರಿಗೆ ಮತ್ತೆ ಬಿಜೆಪಿ ಸೇರ್ಪಡೆ ದೊಡ್ಡ ಸಂಭವವನ್ನೇ ಕಲ್ಪಿಸಲಿತ್ತು.

ಏಕೆಂದರೆ ಸಂಘ ಪರಿವಾರದ ನೀರು ನೆರಳಿಲ್ಲದ ಬಂದೂತ್ಸದ ಆಯುಧ ಹಿಡಿದು ಇನ್ನು ಹೆಚ್ಚು ಕಾಲ ಗುಟುಕು ಹುಮ್ಮಸ್ಸಾಗಲಿ, ತಾಕತ್ತಾಗಲಿ ಶ್ರೀರಾಮ ಸೇನೆಗಿರಲಿಲ್ಲ!

ಹೊಟ್ಟೆ ಹಳಸಿತ್ತು ನಾಯಿಯೂ ಹಸಿದಿತ್ತು ಎಂಬಂತೆ ಅತ್ತ ತವರು ಸೇರ್ಪಡೆಯ ಪ್ರಸ್ತಾಪಕ್ಕೆ ಮುತಾಲಿಕ್ ಸಂತಸದಿಂದ ಒಪ್ಪಿಬಿಟ್ಟ. ಆದರೆ ತನ್ನ ಪಾಪಕರ್ಮಗಳು ತನಗಷ್ಟೇ ಅಲ್ಲದೆ ಬಿಜೆಪಿಗೂ ಮುಳುವಾಗುತ್ತದೆಯೆಂಬ ಲಕ್ಷಣವೇ ಆತನಿಗಿರಲಿಲ್ಲ. ಬೆಳಗ್ಗೆ ವೀರಾವೇಶದಿಂದ ಬಿಜೆಪಿ ಪ್ರವೇಶಿಸಿದವನಿಗೆ ಸಂಜೆ ಹೊತ್ತಿಗೆ ಅದೇ ಮುಳುವಾಗಿತ್ತು. ರಾಷ್ಟ್ರಮಟ್ಟದಲ್ಲಿ ಬಿಜೆಪಿ ಮುತ್ತು ಮೋದಿಗಂತೂ ಇದೇ ಮಂಗಳಾರತಿ ತುತ್ತಾಗಿತ್ತು. ಗೋವಾದ ಮಾಜಿ ರಕ್ಷಣೆಯ ಬಿಜೆಪಿ ಘೋಷಣೆಗೆ ಮುತಾಲಿಕ್ ಎಂಟ್ರಿಯೆಂಬುದು ನೊಣ ತಿಂದು ಕುಲಕೆಡಿಸಿಕೊಂಡಂತ ಪಜೀತಿಯಾಯಿತು. ಗೋವಾದ ಮಾಜಿ ಮುಖ್ಯಮಂತ್ರಿ ಪರಿಕ್ಕರ್ ಮುತಾಲಿಕ್ ಪ್ರವೇಶದ ವಿರುದ್ಧ ಕಿಡಿಕಾರಿದ್ದು ಒಂದೆಡೆಯಾದರೆ ಮತ್ತೊಂದೆಡೆ ಅನಂತ್ ಕುಮಾರ್ ಕಂಗಾಲಾಗಿ ರಾಜನಾಥ್‌ಗೆ ಫೋನಾಯಿಸಿ ಬಿಟ್ಟರು.

ಸಂಜೆ ಹೊತ್ತಿಗೆಲ್ಲಾ ತನ್ನ ಬಿಜೆಪಿ ಸೇರ್ಪಡೆ ರದ್ದಾಗಿದ್ದರ ಸುದ್ದಿ ಕೇಳಿದ ಮುತಾಲಿಕ್ ಪತ್ರಕರ್ತರೆದುರಿಗೇ ಗಳಗಳನೇ ಅತ್ತುಬಿಟ್ಟ. ರೊಚ್ಚಿಗೆದ್ದ ಶ್ರೀರಾಮಸೇನೆಯ ಕಾರ್ಯಕರ್ತರು ಮೆರವಣಿಗೆಯಲ್ಲಿ ಬರುತ್ತಿದ್ದ ಪ್ರಹ್ಲಾದ್ ಜೋಷಿಯತ್ತ ಬೂಟು ತೂರಿ ಧಿಕ್ಕಾರ ಹಾಕಿಬಿಟ್ಟರು. ಕೊನೆಕೊನೆಗೆ ಮುತಾಲಿಕ್ ಎಂಥಾ ಹತಾಶೆಗಿಳಿದನೆಂದರೆ ಇನ್ನೊಂದು ವಾರದಲ್ಲಿ ಮತ್ತೆ ತನ್ನನ್ನು ಬಿಜೆಪಿಗೆ ಸೇರಿಸಿಕೊಳ್ಳದೆ ಹೋದರೆ



ಮಂಗಳೂರು ಪಬ್ ದಾಳಿಯಲ್ಲಿ ಮುತಾಲಿಕ್ ಬಂಟರು

ತಾನು ಬಿಜೆಪಿ ನಾಯಕರ ಬುಡಕ್ಕೇ ಕೈಹಾಕುತ್ತೇನೆಂದು ಹೂಂಕರಿಸಿದ. ಸುಷ್ಮಾ ಸ್ವರಾಜ್ ಮಗಳು ಪಬ್‌ಗೆ ಹೋಗುತ್ತಾಳೆಂದು ಮುತಾಲಿಕ್ ಬಾಯಿಂದಲೇ ಸತ್ಯ ಹೊರಬಿದ್ದದ್ದು, ಅನಂತ್‌ಕುಮಾರ್ ಹದಿನಾಲ್ಕು ಸಾವಿರ ಕೋಟಿ ರೂಪಾಯಿಗಳ ಭ್ರಷ್ಟಾಚಾರ ಎಸಗಿದ್ದಾರೆಂಬುದು. ಯಡಿಯೂರಪ್ಪನಂಥ ಭ್ರಷ್ಟನನ್ನು ಸೇರಿಸಿಕೊಂಡು ತನ್ನನ್ನು ದೂರವಿಟ್ಟದ್ದು, ಗಣಿಕಳ್ಳರ ಕೈಗೊಂಬೆ ಶ್ರೀರಾಮುಲುವನ್ನು ಸೇರಿಸಿಕೊಳ್ಳಬಹುದಾದರೆ ತಾನು ಆತನಿಗಿಂತ ಕೆಟ್ಟವನೆ? ಎಂದು ಮುತಾಲಿಕ್ ಪ್ರಶ್ನಿಸಿದ್ದೆಲ್ಲವೂ ಸರಿಯೆ. ಆದರೆ ಉತ್ತರಿಸುವವರ್‍ಯಾರು?

ಅಂತೂ ಚೆಡ್ಡಿಗಳ ಮಾನ ಅವರ ಕಚ್ಚಾಟದ ಮೂಲಕವೇ ಮತ್ತೆ ಮತ್ತೆ ಬೀದಿಗೆ ಬೀಳುತ್ತಿದೆ. ಸದ್ಯ ಮೋದಿ ಭ್ರಷ್ಟಾಚಾರದ ವಿರುದ್ಧ ಮಾತಾಡುವಂತಿಲ್ಲ, ಏಕೆಂದರೆ ಯಡಿಯೂರಪ್ಪನನ್ನು ಮತ್ತೆ ಸೇರಿಸಿಕೊಂಡಾಗಿದೆ. ನೈಸರ್ಗಿಕ ಸಂಪತ್ತಿನ ರಕ್ಷಣೆ ಬಗ್ಗೆಯಾಗಲಿ ಪರಿಸರ ಸಂರಕ್ಷಣೆ ಕುರಿತಾಗಲಿ ಮೋದಿ ಭಾಷಣಕ್ಕೆ ನಿಂತರೆಂದರೆ ಗಣಿಕಳ್ಳ ಶ್ರೀರಾಮುಲು ಭೂತ ಎದುರು ನಿಂತಂತಾಗುತ್ತದೆ. ಇನ್ನು ಮಹಿಳೆಯರ ಮಾನ ಪ್ರಾಣದ ಬಗ್ಗೆ ಮೋದಿ ಭಾಷಣಕ್ಕೆ ನಿಲ್ಲುವ ಯೋಗ್ಯತೆಯನ್ನೂ ಕಳೆದುಕೊಂಡಾಗಿದೆ.

ಏಕೆಂದರೆ ಪಬ್ ದಾಳಿಯಲ್ಲಿ ಯುವತಿಯರನ್ನು ಹಾಕಿ ತುಳಿದ ಮುತಾಲಿಕ್ ಸಾಹಸಕ್ಕೂ ಮೋದಿಯೇ ಉತ್ತರ ನೀಡಬೇಕಾಗುತ್ತದೆ. ಮಾಡಿದ ಪಾಪ ಬೆಂಬಿಡದೆ ಕಾಡುವುದು ಎಂದರೆ ಇದೇನಾ?


ದುರಂತವೆಂದರೆ ಮುತಾಲಿಕ್ ಓರ್ವ ಧರ್ಮರಕ್ಷಕನೆಂಬಂತೆ ಈಶ್ವರಪ್ಪ ಗುಣಗಾನ ಮಾಡುತ್ತಿದ್ದರೆ, ಯುವ ನಾಯಕ ಸಿ.ಟಿ. ರವಿ ಶ್ರೀರಾಮಸೇನೆಯನ್ನು ಕಾರ್ಗಿಲ್ ವೀರರಂತೆ ಕೊಂಡಾಡುತ್ತಿದ್ದಾರೆ. ಚುನಾವಣೆ ಮುಗಿಯುತ್ತಿದ್ದಂತೆ ಮತ್ತೆ ಮುತಾಲಿಕ್‌ನನ್ನು ಪಕ್ಷಕ್ಕೆ ಸೇರಿಸಿಕೊಳ್ಳುತ್ತಾರಂತೆ. ಮುತಾಲಿಕ್ ಕುರಿತಂತೆ ಕೇಂದ್ರ ನಾಯಕರಿಗೆ ತಪ್ಪು ಸಂದೇಶ ರವಾನೆಯಾಗಿದೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಜೋಷಿಯೇ ತಿಪ್ಪೆ ಸಾರಿಸುತ್ತಿದ್ದಾರೆಂದರೆ, ಮುತಾಲಿಕ್ ಸೇರ್ಪಡೆ ರದ್ದಾಗಿರುವುದು ಕೇವಲ ಕಣ್ಣೊರೆಸುವ ತಂತ್ರವೇ ಹೊರತು ಅದು ಮಹಿಳಾ ಕಾಳಜಿಯಾಗಲಿ, ಮೋದಿಯ ಮಾನವೀಯತೆಯಾಗಲಿ ಅಲ್ಲ.

ಅಷ್ಟಕ್ಕೂ ಮೋದಿ ತಾನೆ ಯಾವ ಮಹಾ ಮಹಿಳಾ ಹಿತಚಿಂತಕ?

ಮಾನಸಿ ಎಂಬ ತನ್ನ ಬೆಂಗಳೂರಿನ ಮಾಜಿ ಪ್ರೇಯಸಿಯನ್ನೇ ಪೊಲೀಸರನ್ನು ಛೂಬಿಟ್ಟು ಪೀಡಿಸಿದ ಮೋದಿಗೆ ಮುತಾಲಿಕ್ ತಾನೇ ಯಾವ ತಲೆನೋವು ತರಬಲ್ಲ!

● ರಾ.ಸೋಮನಾಥ್

ಬೀದರ್: ಧರ್ಮಸಿಂಗ್ ತಂತ್ರ ಶುರು



ಬೀದರ್ ಲೋಕಸಭಾ ಕ್ಷೇತ್ರದ ಚುನಾವಣೆಯ ಕಣ ದಿನದಿಂದ ದಿನಕ್ಕೆ ರಂಗೇರುತ್ತ ನಡೆದಿದೆ. ಇದಕ್ಕೆ ಹಲವಾರು ಕಾರಣಗಳೂ ಇವೆ. ಹಾಗೆ ನೋಡಿದರೆ ಬೀದರ್ ಸಂಸದಿಯ ಕ್ಷೇತ್ರವನ್ನು ದಿ.ರಾಮಚಂದ್ರವೀರಪ್ಪ ಎಂಬ ಸಭ್ಯ ನಡಾವಳಿಯ ವ್ಯಕ್ತಿಗೆ ಹಿಂದೆ ಉಡುಗೊರೆಯಾಗಿ ನೀಡಲಾಗಿತ್ತು ಏಕೆಂದರೆ ರಾಮಚಂದ್ರವೀರಪ್ಪ ಹಿಂದೆ ಬಂದರೆ ಒದೆಯಲಾರೆ, ಮುಂದೆ ಬಂದರೆ ಹಾಯಲಾರೆ ಎಂಬ ಗೋವಿನಂತೆ ಬದುಕಿದವರು. ಜೊತೆಗೆ ಎಲ್ಲಾ ಜಾತಿ ಜನಾಂಗದವರೊಂದಿಗೆ ಸಹಜವಾಗಿ ಬೆರೆಯುತ್ತಿದ್ದರು. ಅಷ್ಟೇ ಸರಳವಾಗಿ ಬದುಕುತ್ತಿದ್ದರು. ಆದರೆ ಇದೀಗ ಅವರ ನಿಧನದ ತರುವಾಯ ಜನತೆ ಅನಿವಾರ್ಯವಾಗಿ ಬೇರೊಬ್ಬರನ್ನು ಆಯ್ಕೆ ಮಾಡಲೇಬೇಕಾಗಿದೆ. ಅಂದಂತೆ ಕಳೆದ ಸಲ ಜೇವರ್ಗಿ ಮತಕ್ಷೇತ್ರ ಬಿಟ್ಟು ಧರ್ಮ ಸಿಂಗ್ ಎಂಬ ಮಾಜಿ ಮುಖ್ಯಮಂತ್ರಿ ಬೀದರ್‌ಗೆ ಹೋಗಿ ಒಮ್ಮಿಂದೊಮ್ಮೆ ಆಟಕಾಯಿಸಿಕೊಂಡು ಬಿಟ್ಟರು. ವಿರೋಧಿಗಳನ್ನು ತನ್ನ ಹಣ ಬಲ ತೋಳ್ಬಲಗಳಿಂದ ಹಿಂದೆ ಸರಿಸಿ ಮುಂದೆಹೋಗುವ ದಾರ್ಷ್ಟ್ಯ ಹೊಂದಿದ್ದ ಗುರುಪಾದಪ್ಪ ನಾಗಮಾರಪಳ್ಳಿ ಪಟಾಲಂನ್ನು ಧರ್ಮಸಿಂಗ್ ತನ್ನ ಚಾಣಾಕ್ಷ ಮಾತುಗಳಿಂದ ಹಿಂದೆ ಸರಿಸಿ ಗೆದ್ದುಬಿಟ್ಟರು.


ಈ ಬಾರಿ ಗುರುಪಾದಪ್ಪ ನಾಗಮಾರಪಳ್ಳಿ ಪುತ್ರ ಉಮಾಕಾಂತ ನಾಗಮಾರಪಳ್ಳಿ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಈ ಹಿಂದೆ ಇವರು ಯಡ್ಡಿಯ ಗುಂಪು ಸೇರಿದ್ದರು ಮಾತ್ರವಲ್ಲ ಮುಂದೆ ಯಾವುದೇ ಪಕ್ಷಕ್ಕೆ ಪಲಾಯನ ಮಾಡಬಹುದು ಎಂಬ ಕಾರಣಕ್ಕಾಗಿ ಟಿಕೆಟ್ ನಿರಾಕರಿಸಲಾಯಿತು. ತಮಗೆ ಬಿಜೆಪಿ ಟಿಕೆಟ್ ನಿರಾಕರಿಸಿದೆ ಎಂಬ ಕಾರಣವನ್ನೇ ಮುಂದೆ ಮಾಡಿಕೊಂಡು ನಾಗಮಾರಪಳ್ಳಿ ಸಾಕಷ್ಟು ದಾಂಧಲೆಯನ್ನುಂಟುಮಾಡಿದರು. ಅವರ ಹಿಂಬಾಲಕರು ಜಿಲ್ಲಾ ಬಿಜೆಪಿ ಕಚೇರಿಯನ್ನು ಧ್ವಂಸಗೊಳಿಸಿದರು. ಪಕ್ಷೇತರರಾಗಿ ಚುನಾವಣೆಗೆ ನಿಲ್ಲುವ ಸವಾಲನ್ನೂ ಹಾಕಿದರು. ಅದೆಲ್ಲ ಆದನಂತರ ಈಗ ಅದ್ಯಾವ ಕಾರಣಕ್ಕೋ ನಾಗಮಾರಪಳ್ಳಿ ಗ್ಯಾಂಗ್ ಎಲ್ಲವನ್ನು ಬಿಟ್ಟು ಸುಮ್ಮನಾಗಿದೆ.

ಈಗ ಇಲ್ಲಿ ಬಿಜೆಪಿಯ ಭಗವಂತ ಖೂಬಾ ಸಂಸತ್ ಚುನಾವಣೆಯ ಅಭ್ಯರ್ಥಿ. ಈವರೆಗೆ ಯಾವುದೇ ಚುನಾವಣೆಯನ್ನೂ ಎದುರಿಸಿಲ್ಲದ, ಕೇವಲ ಆರೆಸ್ಸೆಸ್ ನಿಷ್ಠ ಕಾರ್ಯಕರ್ತನಾಗಿರುವ ಭಗವಂತ ಖೂಬಾ ಮೆಕ್ಯಾನಿಕಲ್ ಇಂಜನಿಯರಿಂಗ್ ಅಭ್ಯಾಸ ಮಾಡಿರುವ ಓರ್ವ ಕಂಟ್ರ್ಯಾಕ್ಟರ್. ರಾಜಕೀಯದಲ್ಲಿ ಹೊಸ ಮುಖ. ಬಾಬಾ ರಾಮದೇವ ಮೂಲಕ ಬಿಜೆಪಿ ಟಿಕೆಟ್ ಗಿಟ್ಟಿಸಿದ್ದಾರೆ ಎಂಬ ವದಂತಿ ಕ್ಷೇತ್ರದ ತುಂಬಾ ಹಬ್ಬಿದೆ. ಕಳೆದ ಸಲ ಬೀದರ್ ಸಂಸದಿಯ ಕ್ಷೇತ್ರದಿಂದ ಆಯ್ಕೆಯಾಗಿದ್ದ ಧರ್ಮಸಿಂಗ್ ಯಾವ ಕೆಲಸವನ್ನೂ ಮಾಡದೆ ಹಾಯಾಗಿ ಮಲಗಿದ್ದನ್ನೇ ಬಂಡವಾಳ ಮಾಡಿಕೊಳ್ಳಲು ಹೊರಟಿರುವ ಭಗವಂತ ಖೂಬಾ ಮೋದಿಯ ಅಲೆಯಲ್ಲಿ ತಾನು ಸಂಸದನಾಗಬಹುದು ಎಂಬ ಭರವಸೆ ಹೊಂದಿದ್ದಾರೆ.

ಜೆಡಿಎಸ್‌ನಿಂದ ಸ್ಪರ್ಧಿಸಿರುವ ಬಂಡೆಪ್ಪ ಕಾಶೆಂಪುರ "ನಾನು ಸ್ಥಳೀಯವನಾಗಿದ್ದೇನೆ. ಕ್ಷೇತ್ರದಲ್ಲಿ ಈಗಾಗಲೇ ಸಾಕಷ್ಟು ಕಡೆ ತಿರುಗಾಡಿ ಕ್ಷೇತ್ರಕಾರ್ಯ ಮಾಡಿದ್ದೇನೆ. ಒಂದು ಬಾರಿ ಸಚಿವನಾಗಿ, ಎರಡು ಬಾರಿ ಶಾಸಕನಾಗಿ ಆಯ್ಕೆಯಾಗಿ ನನ್ನ ಕ್ಷೇತ್ರಕ್ಕೆ ಸಾಕಷ್ಟು ಕೆಲಸ ಮಾಡಿದ್ದೇನೆ. ರಾಜಕೀಯದ ಸೋಲು- ಗೆಲುವುಗಳನ್ನು ಕಂಡಿರುವ ನನಗೆ ಬೀದರ್ ಕ್ಷೇತ್ರದ ಅಭಿವೃದ್ಧಿಗಾಗಿ ನನ್ನನ್ನು "ಆಯ್ಕೆ ಮಾಡುತ್ತಾರೆ" ಎಂದು ನಂಬಿದ್ದಾರೆ. ಆದರೆ ಈ ನಂಬಿಕೆ ಎಷ್ಟು ಫಲಕೊಡುತ್ತದೊ ಎಂಬುದನ್ನು ಮುಂದಿನ ದಿನಗಳೆ ನಿರ್ಧರಿಸಲಿವೆ.

ಆಮ್ ಆದ್ಮಿ ಪಕ್ಷದಿಂದ ಉಪನ್ಯಾಸಕ ಚಂದ್ರಕಾಂತ ಕುಲಕರ್ಣಿ ಸ್ಪರ್ಧಿಸಿದ್ದಾರೆ. ದೆಹಲಿಯ ಎಚ್ಚೆತ್ತ ಪ್ರಜೆಗಳು ಇಲ್ಲಿ ಇಲ್ಲದಿರುವುದು ಕುಲ್ಕರ್ಣಿಗೆ ಕಷ್ಟವಾಗುತ್ತದೆ. "ರಾಜಕೀಯದ ಅನುಭವದ ಕೊರತೆ ನನಗಿದ್ದರೂ ಪ್ರಾಮಾಣಿಕ ಜೀವನ ನಡೆಸಿದ್ದೇನೆ. ಮುಂದೆಯೂ ಪ್ರಾಮಾಣಿಕವಾಗಿಯೇ ಇರುತ್ತೇನೆ" ಎನ್ನುತ್ತಾರೆ ಕುಲ್ಕರ್ಣಿ. ಆದರೆ ಕೋಟ್ಯಂತರ ರೂಪಾಯಿಗಳ ಅಕ್ರಮ ನಡೆಯುವ ಇಂದಿನ ಚುನಾವಣೆಯಲ್ಲಿ ಇವರು ಎಷ್ಟು ಲೆಕ್ಕಕ್ಕೆ ಬರುತ್ತಾರೆ ಎಂಬುದು ಯಕ್ಷಪ್ರಶ್ನೆಯಾಗಿದೆ.

ಇವರೆಲ್ಲರಿಗಿಂತಲೂ ಮಾಜಿ ಮುಖ್ಯಮಂತ್ರಿ ಧರ್ಮ ಸಿಂಗ್ ತನ್ನ ಎಂದಿನ ನಿಗೂಢ ನಡೆಯನ್ನು ಈಗಾಗಲೇ ಕ್ಷೇತ್ರದ ತುಂಬೆಲ್ಲ ಹರಡಿಸಿದ್ದಾರೆ. ಫೀನಿಕ್ಸ್ ಹಕ್ಕಿಯಂತೆ ಸಾವಿನ ಕೊನೆ ಗಳಿಗೆಯಲ್ಲಿಯೂ ಎದ್ದು ಬರುವ ಚಮತ್ಕಾರಿಕ ರಾಜಕೀಯ ದಾಳವನ್ನು ಬಳಸುವುದರಲ್ಲಿ ನಿರತರಾಗಿದ್ದಾರೆ. ಸಾಕಷ್ಟು ಕೆಲಸ ಮಾಡದೆ ಇರಬಹುದು. ಆದರೆ ಯಾರಿಗೂ ಕೇಡನ್ನು ಉಂಟುಮಾಡದ ರಾಜಕಾರಣಿಯಾಗಿದ್ದಾರೆ. "ಮಹಾಭಾರತದ ರಾಷ್ಟ್ರಕಟ್ಟುವ ಅಗತ್ಯವಿಲ್ಲ, ಬಸವರಾಜ್ಯವನ್ನು ಕಟ್ಟಬೇಕಾದರೆ ನನ್ನನ್ನು ಆರಿಸಿ" ಎಂಬ ಮಾತುಗಳ ಮೂಲಕ ಬಿಜೆಪಿಯ ಮತಬ್ಯಾಂಕ್‌ಗೆ ಕೈಹಾಕಿರುವ ಧರ್ಮ ಸಿಂಗ್




ಇಲ್ಲಿನ ಲಿಂಗಾಯತ ಮತಗಳನ್ನು ಸೆಳೆಯುವ ಹುನ್ನಾರ ನಡೆಸಿದ್ದಾರೆ.

ಬಂಡೆಪ್ಪ ಕಾಶಂಪುರ ಹಿಂದುಳಿದ ಅಲ್ಪಸಂಖ್ಯಾತರ ಮತಗಳನ್ನು ಹೆಚ್ಚು ತಿಂದರೆ ಧರ್ಮ ಸಿಂಗ್‌ಗೆ ಸಂಕಟವನ್ನು ಉಂಟುಮಾಡುತ್ತದೆ. ಮೋದಿ ಅಲೆಯನ್ನು ಹಿಂದಿಕ್ಕಿ ತನ್ನ ಜಾಣಬಲವನ್ನು ಧರ್ಮ ಸಿಂಗ್ ಪ್ರದರ್ಶಿಸಿದರೆ ಖಂಡಿತವಾಗಿಯೂ ಇಲ್ಲಿ ಧರ್ಮ ಸಿಂಗ್ ಮತ್ತೊಮ್ಮೆ ಸಂಸತ್ ಸದಸ್ಯನಾಗಿ ಆಯ್ಕೆಯಾಗುವ ಸಾಧ್ಯತೆಗಳು ಹೆಚ್ಚಿವೆ. ಬಿಜೆಪಿಯ ಟಿಕೆಟ್ ಸಿಗದೆ ಮುನಿಸಿಕೊಂಡಿರುವ ನಾಗಮಾರಪಳ್ಳಿ ಗುಂಪಿನ ಲಾಭವೂ ಧರ್ಮ ಸಿಂಗ್ ಕಡೆಗೆ ವಾಲುವ ಲಕ್ಷಣಗಳಿವೆ.

● ವಿಶ್ವಾರಾಧ್ಯ ಸತ್ಯಂಪೇಟೆ


ಗುಲ್ಬರ್ಗಾ: ವಿರೋಧಿಗಳಿಗೆ ಬ್ರೇಕ್ ಹಾಕುತ್ತಿರುವ ಖರ್ಗೆ



ಗುಲ್ಬರ್ಗಾ ಲೋಕಸಭಾ ಕ್ಷೇತ್ರದಲ್ಲಿ ರೇವೂ ನಾಯಕ ಬೆಳಮಗಿ ಬಿಜೆಪಿ ಅಭ್ಯರ್ಥಿಯಾಗಿ ಈಗಾಗಲೇ ಕ್ಷೇತ್ರದ ಪ್ರಮುಖ ಧಾರ್ಮಿಕ ಕೇಂದ್ರಗಳಿಗೆ ಭೇಟಿ ನೀಡಿ ಪೂಜೆ ಪುನಸ್ಕಾರಗಳನ್ನು ಮಾಡಿ ಜನತೆಯನ್ನು ಧಾರ್ಮಿಕ ಭಾವನೆಗಳಿಂದ ಶೋಷಿಸಬೇಕೆನ್ನುವ ಬಿಜೆಪಿ ಸಂಸ್ಕೃತಿಯ ವಕ್ತಾರರಾಗಿ ಕಂಗೊಳಿಸುತ್ತಿದ್ದಾರೆ. ಮೋದಿ ಮೇನಿಯಾ ಕೆಲಸ ಮಾಡಿದ್ದೆ ಆದರೆ ದೆಹಲಿಗೂ ಹೋಗಿ ಕುಸ್ತಿ ಆಡಬೇಕೆನ್ನುವ ಇರಾದೆ ಇಟ್ಟುಕೊಂಡಿದ್ದಾರೆ. ಬಿಜೆಪಿಯ ಶಶೀಲ ನಮೋಶಿ, ದೊಡ್ಡಪ್ಪಗೌಡ ನರಬೋಳಿ, ವಾಲ್ಮೀಕಿ [illegible] ಶಿವಾನಂದ ಪಾಟೀಲ ಕಲ್ಲೂರ, ಶಾಸಕರಾದ ಅಮರನಾಥ ಪಾಟೀಲ, ಕೆ.ಬಿ.ಶರಣಪ್ಪ, ರಘುನಾಥ [illegible] ಮುಂತಾದವರ ದೊಡ್ಡ ಸಮೂಹ ತನ್ನ ಹಿಂದೆ ಇಟ್ಟುಕೊಂಡು ಈಗಾಗಲೇ ಕ್ಷೇತ್ರದ ತುಂಬೆಲ್ಲ ಓಡಾಡುತ್ತಿದ್ದಾರೆ. ಸಂಸತ್ ಕ್ಷೇತ್ರ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸುವುದಕ್ಕಿಂತ ಮುಂಚೆಯೂ "ಕಾಂಗ್ರೆಸ್‌ನ ಮಲ್ಲಿಕಾರ್ಜುನ ಖರ್ಗೆ ಮುಕ್ತ ಚುನಾವಣೆ ನಡೆಸುವುದು ಕಷ್ಟ" ಎಂಬ ಹೇಳಿಕೆಗಳ ಮೂಲಕ ತಮ್ಮ ಸೋಲಿನ ಮುನ್ಸೂಚನೆಯನ್ನು ತಮ್ಮ ಮಾತುಗಳಲ್ಲಿ ಮೊದಲೇ ಸೂಚಿಸಿದ್ದಾರೆ. ನಮೋ ಭಾರತ ಎಂಬ ಸಾರ್ವಜನಿಕ ರ್‍ಯಾಲಿಯನ್ನು ಏರ್ಪಡಿಸಿ ಸಾಕಷ್ಟು ಸಂಖ್ಯೆಯ ಜನಗಳನ್ನೂ ಬಿಜೆಪಿ ಕಲೆಹಾಕಿತ್ತು. ಮೋದಿಯೂ ಗುಲ್ಬರ್ಗಾಕ್ಕೆ ಬಂದು ಆರ್ಭಟಿಸಿ ಹೋದ. ಮೋದಿಯ ಅಲೆಯಲ್ಲಿ ತೇಲಿ ದಿಲ್ಲಿಗೂ ತಲುಪಬೇಕೆಂಬ ಆಕಾಂಕ್ಷೆಗೆ ಖರ್ಗೆಯ ಕೆಲಸಗಳು ಬ್ರೇಕ್ ಹಾಕುತ್ತಿವೆ.


ಕಳೆದ ಬಾರಿ ಕಲಬುರ್ಗಿ ಮತಕ್ಷೇತ್ರದಿಂದ ಆಯ್ಕೆಯಾದ ಮಲ್ಲಿಕಾರ್ಜುನ ಖರ್ಗೆ ನಿಜಕ್ಕೂ ವಿರೋಧಿಗಳೂ ಮೆಚ್ಚುವ ಅಭೂತಪೂರ್ವ ಕೆಲಸಗಳನ್ನು ತನ್ನ ಸಂಸದಿಯ ಕ್ಷೇತ್ರಕ್ಕೆ ಮಾಡಿದ್ದಾರೆ. ಖರ್ಗೆಯವರ ಕೆಲವು ನಡಾವಳಿಗಳು ವೀರಶೈವ ವಿರೋಧಿಯಾಗಿರಬಹುದೆಂದು ಕಂಡರೂ ಅವುಗಳೆಲ್ಲ ಲಿಂಗಾಯತ ಸಂಸ್ಕೃತಿಯನ್ನು ಅಪ್ಪಿಕೊಂಡಿರುವುದು ಸುಳ್ಳಲ್ಲ. ಹೀಗಾಗಿಯೆ ಇಲ್ಲಿನ ಬಸವ ಕೇಂದ್ರದ ಪದಾಧಿಕಾರಿಗಳು ಚುನಾವಣೆ ದಿನಾಂಕ ನಿಗದಿಯಾಗುವುದಕ್ಕಿಂತ ಪೂರ್ವದಲ್ಲಿ ಅವರನ್ನು ಸತ್ಕರಿಸುವ ಮೂಲಕ ಹೊಸದೊಂದು ಪರಂಪರೆಗೆ ನಾಂದಿಹಾಡಿದರು. ಹೈದ್ರಾಬಾದ್ ಕರ್ನಾಟಕ ಹಿಂದುಳಿವಿಕೆಯನ್ನು ಅಲ್ಪಮಟ್ಟಿಗೆ ಹಿಂದೆ ಮಾಡಬಹುದಾದ 371 ಕಲಂನ್ನು ಜಾರಿಗೆ ತರಲು ಖರ್ಗೆಯವರ ಪರಿಶ್ರಮವನ್ನು ಕಡೆಗಣಿಸಲಿಕ್ಕೆ ಆಗುವುದಿಲ್ಲ. ಗುಲ್ಬರ್ಗಾದಲ್ಲಿಯೆ ಈಗಾಗಲೇ ಕಾರ್ಯಾರಂಭ ಮಾಡಿರುವ ಬೃಹತ್ ಇ.ಎಸ್.ಐ. ಆಸ್ಪತ್ರೆಗಳು ಇವರ ಪರಿಶ್ರಮ ಫಲ ಎಂಬುದು ಎಲ್ಲರಿಗೂ ಗೊತ್ತಿರುವ ಸಂಗತಿ. ಕೇಂದ್ರ ರೈಲ್ವೆ ಸಚಿವನಾಗಿ ಈ ಭಾಗದ ಯಾದಗಿರಿಗೆ ರೈಲ್ವೆ ವಲಯವನ್ನು ಮಾಡಿದ್ದು ಸಣ್ಣ ಕೆಲಸವೇನಲ್ಲ, ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ ವಾಡಿ ಹೊಸಪೇಟೆ ರೈಲು ಮಾರ್ಗಕ್ಕೆ ಹಸಿರು ನಿಶಾನೆ ತೋರಿದ್ದು ಇಲ್ಲಿನ ಜನರಲ್ಲಿ ಹೊಸ ಕನಸುಗಳನ್ನು ಹುಟ್ಟುಹಾಕಿದೆ.

ಆದರೆ ಕಾಂಗ್ರೆಸದೊಳಗೆ ಇರುವ ಒಂದು ಬಣ ಹೇಗಾದರೂ ಖರ್ಗೆಯವರನ್ನು ಹಣಿಯಬೇಕೆಂದು ಹೊಂಚುಹಾಕಿದೆ. ಏತನ್ಮಧ್ಯೆ ಖರ್ಗೆ ಗೆದ್ದು ಬಂದರೆ



ರಾಜ್ಯದಲ್ಲಿ ಮುಖ್ಯಮಂತ್ರಿಯೂ ಆಗುವ ಸಾಧ್ಯತೆಗಳಿವೆ ಎಂಬ ಊಹಾಪೋಹಗಳು ಇದಕ್ಕೆ ಕಾರಣವಾಗಿದೆ. ಆದರೆ ಆಳಂದದ ಕೆಜೆಪಿ ಪಕ್ಷದ ಶಾಸಕ ಬಿ.ಆರ್.ಪಾಟೀಲ ಮಾತ್ರ ಬಹಿರಂಗವಾಗಿಯೆ ಖರ್ಗೆಯವರ ಪ್ರಗತಿಪರ ವಿಚಾರ ಹಾಗೂ ಕ್ಷೇತ್ರದಲ್ಲಿ ಮಾಡಿರುವ ಕೆಲಸಗಳನ್ನು ಗಮನಿಸಿ ತಮ್ಮ ಬೆಂಬಲವನ್ನು ಸೂಚಿಸಿದ್ದಾರೆ. ನಾಡಿನ ಹಿರಿಯ ಮುತ್ಸದ್ಧಿ ಪತ್ರಕರ್ತ ಡಾ.ಪಾಟೀಲ ಪುಟ್ಟಪ್ಪನವರೂ ಸಹ ಖರ್ಗೆ ಕ್ಷೇತ್ರದಲ್ಲಿ ಮಾಡಿರುವ ಕೆಲಸಗಳನ್ನು ಗಮನಿಸಿಯಾದರೂ ಅವರನ್ನು ಅವಿರೋಧವಾಗಿ ಆಯ್ಕೆಮಾಡಬೇಕೆಂದು ಪತ್ರಿಕಾ ಹೇಳಿಕೆ ನೀಡಿದ್ದರು. ಖರ್ಗೆ ಮಾತ್ರ ಪಾಪು ಅವರ ಮಾತುಗಳನ್ನು ಅಲ್ಲಗಳೆದು ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆಯಿಂದಲೆ ಅಭ್ಯರ್ಥಿ ಗೆಲ್ಲಬೇಕೆಂಬ ಹೇಳಿಕೆ ನೀಡುವ ಮೂಲಕ ದೊಡ್ಡತನ ಮೆರೆದರು.

ಜೆಡಿಎಸ್ ಪಕ್ಷದ ಡಿ.ಜಿ.ಸಾಗರ ಎಂಬ ದಲಿತ ಪರ ಸಂಘಟನೆಗಳ ಹೋರಾಟಗಾರನಿಗೆ ಹಿಂದುಳಿದವರ ಬೆಂಬಲವಿದೆ. ಸಾಕಷ್ಟು ವರ್ಷಗಳಿಂದ ಹೋರಾಟವನ್ನೆ ತಮ್ಮ ಜೀವನವನ್ನಾಗಿ ರೂಪಿಸಿಕೊಂಡು ಬಂದಿದ್ದಾರೆ. ನಿಷ್ಕಳಂಕ ಜೀವನವೂ ಇದೆ. ಆದರೆ ಇವೆಲ್ಲವೂ ಸಂಸತ್



ಕ್ಷೇತ್ರ ಚುನಾವಣೆಯಲ್ಲಿ ಬಳಕೆಗೆ ಬರುತ್ತವೆಯೆ ಎಂಬುದು ಪ್ರಶ್ನೆಯಾಗಿದೆ. ಇದೇ ಮಾತನ್ನು ಆಮ್ ಆದ್ಮಿ ಪಕ್ಷದಿಂದ ಸ್ಪರ್ಧಿಸಿರುವ ನಾಡಿನ ಹಿರಿಯ ಲೇಖಕಿ ಕವಯಿತ್ರಿ ಬಂಡಾಯಗಾರ್ತಿ ಬಿ.ಟಿ.ಲಲಿತಾ ನಾಯಕ ಅವರಿಗೂ ಇಲ್ಲಿಯ ಜನ ಕೇಳುತ್ತದೆ. ರೇವುನಾಯಕ ಓಟುಗಳನ್ನು ಬಿ.ಟಿ.ಲಲಿತಾನಾಯಕ ಕಸಿದುಕೊಂಡರೆ, ಖರ್ಗೆಯವರ ಓಟುಗಳನ್ನು ಸಾಗರ ಕಸಿದುಕೊಳ್ಳುತ್ತಾರೆ. ಇವರಲ್ಲಿ ಯಾರು ಹೆಚ್ಚು ಓಟು ಕಸಿದುಕೊಳ್ಳುತ್ತಾರೋ ಎಂಬುದನ್ನು ಕಾಲವೆ ನಿರ್ಣಯಿಸಲಿದೆ.

ಆದರೂ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮತದಾರ ನಿಚ್ಚಳವಾಗಿ ಅಪ್ಪಿಕೊಳ್ಳುವ ಮಾನಸಿಕ ಸಿದ್ಧತೆಯಲ್ಲಿದ್ದಾನೆ. ಡಿ.ಜಿ.ಸಾಗರ ಸಂಪೂರ್ಣ ತನ್ನ ಉಮೇದುವಾರಿಕೆಯನ್ನು ಜಿದ್ದಾಜಿದ್ದಿಯಿಂದ ನಡೆಸಿದ್ದೆ ಆದರೆ ಆ ಪೆಟ್ಟು ಖರ್ಗೆಯವರಿಗೆ ಬೀಳುವುದರಲ್ಲಿ ಯಾವುದೇ ಅನುಮಾನವಿಲ್ಲ, ಜೆಡಿಎಸ್ ಅಭ್ಯರ್ಥಿ ಪರವಾಗಿರುವ ಕೇದಾರಲಿಂಗಯ್ಯ ಹಿರೇಮಠ, ಡೇವಿಡ್ ಸಿಮೆಯೋನ್ ಮೊದಲಾದವರು ಬುಕ್ಕಿಂಗ್ ಗಿರಾಕಿಗಳು ಎಂಬುದು ಇಲ್ಲಿ ಜನಜನಿತ.

● ವಿಶ್ವಾರಾಧ್ಯ ಸತ್ಯಂಪೇಟೆ

ದಾವಣಗೆರೆ: ಸಿದ್ದೇಶ್ವರರಿಗೆ ಚೆಡ್ಡಿಗಳೇ ತೊಡರುಗಾಲು

ದಾವಣಗೆರೆಯಲ್ಲಿ ಪಾರ್ಲಿಮೆಂಟ್ ಚುನಾವಣೆ ರಂಗೇರತೊಡಗಿದೆ. ಈ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ಜಿದ್ದಾಜಿದ್ದಿನ ಚುನಾವಣೆ ನಡೆಯಲಿದೆ. ಹಾಲಿ ಸಂಸದ ಸಿದ್ದೇಶ್ವರ ಬಿಜೆಪಿಯಿಂದ ಮರು ಆಯ್ಕೆ ಬಯಸಿದ್ದಾರೆ. ದಾವಣಗೆರೆ ಉತ್ತರ ಕ್ಷೇತ್ರದ ಶಾಸಕ ಎಸ್.ಎಸ್.ಮಲ್ಲಿಕಾರ್ಜುನರಿಗೆ ಕಾಂಗ್ರೆಸ್ ಟಿಕೆಟು ಕೊಟ್ಟು ಕಣಕ್ಕಿಳಿಸಿದೆ. ಈ ಚುನಾವಣೆ ಇವರಿಬ್ಬರಿಗೂ ಪ್ರತಿಷ್ಠೆಯ ಸ್ಪರ್ಧೆಯಾಗಿದೆ.

2009ರ ಪಾರ್ಲಿಮೆಂಟ್ ಚುನಾವಣೆಯಲ್ಲೂ ಸಿದ್ದೇಶ್ವರ ಮತ್ತು ಮಲ್ಲಿಕಾರ್ಜುನರ ನಡುವೆ ಸ್ಪರ್ಧೆ ನಡೆದಿತ್ತು. ಆದರೆ ಆಗ ಮಲ್ಲಿಕಾರ್ಜುನರು ಕೇವಲ ಎರಡು ಸಾವಿರ ಮತಗಳಿಂದ ಸೋಲನುಭವಿಸಿದ್ದರು. ಆ ಸೋಲಿನ ನಂತರ ಪಾರ್ಲಿಮೆಂಟ್ ಚುನಾವಣೆಯ ಸಹವಾಸ ಬೇಡವೆಂದೇ 2013ರ ಅಸೆಂಬ್ಲಿ ಚುನಾವಣೆಯಲ್ಲಿ ದಾವಣಗೆರೆ ಉತ್ತರ ಕ್ಷೇತ್ರದಿಂದ ಸ್ಪರ್ಧಿಸಿ ಶಾಸಕರಾಗಿ ಆಯ್ಕೆಯಾದರು.

ಆದರೆ ಈಗ ಪಾರ್ಲಿಮೆಂಟ್ ಚುನಾವಣೆಯಲ್ಲಿ ಬಿಜೆಪಿಯ ಸಿದ್ದೇಶ್ವರರ ಜಾತಿಯ ಪ್ರಭಾವ ಮತ್ತು ಹಣದೆದುರು ಹೆಣಗಾಡುವ ಶಕ್ತಿಯಿರುವ ಅಭ್ಯರ್ಥಿಗಳೇ ಕಾಂಗ್ರೆಸ್‌ನಲ್ಲಿ ಇಲ್ಲದಂತಾಗಿದೆ. ಹಾಗಾಗಿಯೇ ಮತ್ತೆ ಮಲ್ಲಿಕಾರ್ಜುನರನ್ನೇ ಕಾಂಗ್ರೆಸ್ ಕಣಕ್ಕಿಳಿಸಿದೆ. ಇವರಿಬ್ಬರೂ ಸಾಧು ಲಿಂಗಾಯತರ ಸಮುದಾಯದವರು. ಜೊತೆಗೆ ಬೀಗರು ಕೂಡ.


ದಾವಣಗೆರೆ ಜಿಲ್ಲೆಯ ಎಂಟು ವಿಧಾನಸಭಾ ಕ್ಷೇತ್ರಗಳಲ್ಲಿ ಹರಿಹರ ಒಂದನ್ನು ಬಿಟ್ಟು ಉಳಿದ ಏಳೂ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನ ಶಾಸಕರೇ ಇದ್ದಾರೆ. ಜೊತೆಗೆ ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿಗಳೂ ಕಾಂಗ್ರೆಸ್ಸಿಗರ ವಶದಲ್ಲಿವೆ. ಅಷ್ಟೇ ಅಲ್ಲದೆ, ದಾವಣಗೆರೆ ಮಹಾನಗರಪಾಲಿಕೆಯಲ್ಲೂ 40 ಕಾಂಗ್ರೆಸ್ ಕಾರ್ಪೊರೇಟರುಗಳಿದ್ದಾರೆ. ಎಂ.ಎಲ್.ಸಿ ರಘು ಆಚಾರ್ಯ ಪಕ್ಷೇತರರಾಗಿ ಗೆದ್ದು ಬಂದಿದ್ದರೂ ಈಗ ಕಾಂಗ್ರೆಸ್‌ಗೆ ಬಂದುನಿಂತಿದ್ದಾರೆ.

ಹಿಂದಕ್ಕೆ ಹೋಲಿಸಿದರೆ, 2009ರ ಪಾರ್ಲಿಮೆಂಟ್ ಚುನಾವಣೆಯ ಸಂದರ್ಭದಲ್ಲಿ ಈ ಜಿಲ್ಲೆಯು ಬಿಜೆಪಿ ಭದ್ರಕೋಟೆಯಾಗಿತ್ತು. ಇಲ್ಲಿಂದ ಮೂರು ಜನ ಮಂತ್ರಿಗಳಾಗಿದ್ದರು, ಏಳು ಜನ ಚೆಡ್ಡಿ ಶಾಸಕರಿದ್ದರು. ಮಹಾನಗರಪಾಲಿಕೆ ಮತ್ತು ಜಿಲ್ಲಾ ಪಂಚಾಯತಿಯೂ ಬಿಜೆಪಿ ಕೈಯಲ್ಲಿದ್ದವು. ಇಷ್ಟೆಲ್ಲಾ ಇದ್ದರೂ ಸಿದ್ದೇಶ್ವರರು ಕೇವಲ ಎರಡು ಸಾವಿರ ಮತಗಳ ಅಂತರದಿಂದ ಗೆದ್ದು ಬಂದಿದ್ದರು.

ಬಿ.ಜೆ.ಪಿ.ಯೊಳಗಿನ ಮುನಿಸು

ಈಗ ಬಿಜೆಪಿಯೊಳಗೇ ಎಲ್ಲವೂ ಸರಿಯಾಗಿಲ್ಲ. ಈ ಕ್ಷೇತ್ರದಲ್ಲಿ 'ಮೋದಿ ಹವಾ' ಎಂಬ ಕಪೋಲಕಲ್ಪಿತ ಅಲೆಯೂ ಇಲ್ಲ, ಯಡ್ಡಿ ಪರವಾದ ಅಲೆಯೂ ಇಲ್ಲ. ಮುಖ್ಯವಾಗಿ ಯಾವಾಗ ಯಡಿಯೂರಪ್ಪ ಕೆಜೆಪಿ ತೊರೆದು ಬಿಜೆಪಿಗೆ ಮರು ಸೇರ್ಪಡೆಗೊಂಡರೋ ಆಗಲೇ ಇಲ್ಲಿನ ಬಿಜೆಪಿಯೊಳಗೆ ಅಸಮಾಧಾನ ಕುದಿಯಲಾರಂಭಿಸಿತು. ಮೊದಲೇ ಮಾಜಿ ತರಕಾರಿ ಮಂತ್ರಿ ರವೀಂದ್ರನಾಥ್ ಮತ್ತು ಸಿದ್ದೇಶ್ವರರ ನಡುವೆ ಜಿಲ್ಲಾ ಚೆಡ್ಡಿ ರಾಜಕೀಯದ ಪಾರುಪತ್ಯಕ್ಕೆ ಸಮರ ನಡೆಯುತ್ತಿತ್ತು, ಈಗ ಅದೇ ಸಿದ್ದೇಶ್ವರ ಬೆಂಬಲದಿಂದ ಯಡ್ಡಿ ಬಿಜೆಪಿಗೆ ವಾಪಸ್ ಬಂದಿರುವುದು ಇವರಿಬ್ಬರ ನಡುವಿನ ಜಗಳಕ್ಕೆ ಇಂಬು ತುಂಬಿದೆ.

ಜೊತೆಗೆ ಈ ಕ್ಷೇತ್ರದ ವ್ಯಾಪ್ತಿಗೆ ಬರುವ ವಿಧಾನ ಸಭಾದ ಕ್ಷೇತ್ರಗಳಲ್ಲಿನ ಸ್ಥಿತಿಯೂ ಸಿದ್ದೇಶ್ವರರ ಪಾಲಿಗೆ ಕಟುವಾಗಿವೆ. ಯಾಕೆಂದರೆ ಹರಪ್ಪನಹಳ್ಳಿ ವಿಧಾನ ಸಭಾ ಕ್ಷೇತ್ರದಿಂದ ಗೆದ್ದು ಯಡ್ಡಿಯ ಚೆಡ್ಡಿ ಸರ್ಕಾರದಲ್ಲಿ ಮಂತ್ರಿಯಾಗಿದ್ದ ಗಣಿ ಕಳ್ಳರ ಟೀಮಿನ ಕರುಣಾಕರ 2013ರ ಚುನಾವಣೆಯಲ್ಲಿ ಸೋತದ್ದೇ ತಡ ರಾಜಕಾರಣದ ಮೊಗಸಾಲೆಯಿಂದಲೇ ಕಾಲುಕಿತ್ತಿದ್ದಾರೆ. ಸದ್ಯದ









ಪಾರ್ಲಿಮೆಂಟ್ ಚುನಾವಣೆಯಲ್ಲಿ ತಟಸ್ಥರಾಗುವ ಮೂಲಕ ಸಿದ್ದೇಶ್ವರರ ಗೆಲುವಿಗೆ ತೊಡರು ಹಾಕಿದ್ದಾರೆ.

ಹಾಗೆಯೇ ಹೊನ್ನಾಳಿಯ ಮಾಜಿ ಹೆಂಡದ ಮಂತ್ರಿ ಮತ್ತು ನರ್ಸ್ ಜಯಲಕ್ಷ್ಮಿ ಕುಖ್ಯಾತಿಯ ರೇಣುಕಾಚಾರ್ಯ ಕೂಡ ಸಿದ್ದೇಶ್ವರರಿಗೆ ಅಡ್ಡಗಾಲಿಕ್ಕುವ ಸಾಧ್ಯತೆಗಳಿವೆ. ಹಿಂದೊಮ್ಮೆ ಯಡ್ಡಿಯ 'ಮಾನಸಿಕ ಪುತ್ರ' ಎನಿಸಿಕೊಂಡಿದ್ದ ರೇಣುಕಾಚಾರಿ ಯಡ್ಡಿಯ ಹಿಂದೆ ಕೆಜೆಪಿ ಸೇರಿಕೊಂಡಿದ್ದ. ಯಾವಾಗ ಯಡ್ಡಿ ಬಿಜೆಪಿಗೆ ಮತ್ತೆ ವಲಸೆ ಬಂದರೋ ಆಗ ರೇಣುಕಾಚಾರಿಯೂ ಬಿಜೆಪಿ ಸೇರಲು ಬಯಸಿದ್ದ. ಆದರೆ ಚೆಡ್ಡಿ ನಾಯಕರು ರೇಣುಕಾಚಾರಿಯನ್ನು ಪಾರ್ಟಿಗೆ ಮರುಸೇರ್ಪಡಿಸಿಕೊಳ್ಳದಂತೆ ಸತಾಯಿಸಿದ್ದರು. ಅಂತಹ ವಿರೋಧದ ನಡುವೆಯೂ ಬಿಜೆಪಿ ಸೇರಿಕೊಂಡ ರೇಣುಕಾಚಾರಿ ಈಗ ಅಲ್ಲಿ ಸಂತಸದಿಂದಿಲ್ಲ, ಒಂದು ಮೂಲದ ಪ್ರಕಾರ ಸದ್ಯದಲ್ಲೇ ಆತ ಕಾಂಗ್ರೆಸ್ ಬಾಗಿಲು ತಟ್ಟುವ ಸಾಧ್ಯತೆ ಇದೆ. ಹಾಗಾದರೆ ಹೊನ್ನಾಳಿಯಲ್ಲೂ ಸಿದ್ದೇಶ್ವರರಿಗೆ ದೊಡ್ಡ ಪೆಟ್ಟು ಬೀಳಲಿದೆ.

ಮಾಯಕೊಂಡದ ಮಾಜಿ ಚೆಡ್ಡಿ ಶಾಸಕ ಬಸವರಾಜನಾಯ್ಕನೂ ಯಡ್ಡಿಯ ವಿರೋಧಿಯೇ. ರವೀಂದ್ರನಾಥರ ಪರಮಶಿಷ್ಯನಾಗಿರುವ ಬಸವರಾಜನಾಯ್ಕ ಯಡ್ಡಿಯ ದೋಸ್ತ್ ಸಿದ್ದೇಶ್ವರರ ಗೆಲುವಿಗೆ ಅಡ್ಡಗಾಲಾಗುತ್ತಾನೆ.

ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಬಿ.ಜೆ.ಪಿ.ಯಿಂದ ಟಿಕೆಟು ಸಿಕ್ಕರೂ ಕೆ.ಜೆ.ಪಿಯಿಂದ ಕಣಕ್ಕಿಳಿದ ನಿಂಗಪ್ಪ ತನಗೆ ಬರಬೇಕಿದ್ದ ಮತಗಳಿಗೆ ಕತ್ತರಿ ಹಾಕಿ ಸೋಲಿಸಿದನೆಂಬ ಸಿಟ್ಟು ಬಸವರಾಜನಾಯ್ಕನಿಗೆ ಇನ್ನೂ ಇದೆ. ಆಗ ಸಿದ್ದೇಶ್ವರ ಕೂಡ ಕೆ.ಜೆ.ಪಿ.ಯ ಪರ ಇದ್ದರೆಂಬ ಸಿಟ್ಟೂ ಬಸವರಾಜನಾಯ್ಕನನ್ನು ಕೆರಳಿಸಿದೆ. ಆದ್ದರಿಂದ ಆತ ಸಿದ್ದೇಶ್ವರರ ಪರ ನಿಲ್ಲುವುದು ಕಷ್ಟವೇ.

ಸಿದ್ದೇಶ್ವರರ ಪಾಲಿಗೆ ಒಂದು ಸಮಾಧಾನದ ಸಂಗತಿಯಾವುದೆಂದರೆ ಚನ್ನಗಿರಿಯ ಮಾಜಿ ಚೆಡ್ಡಿ ಶಾಸಕ ಮಾಡಾಳು ವಿರೂಪಾಕ್ಷಪ್ಪ ಅವರ ಪರ ನಿಂತಿರುವುದು. ಕಳೆದ ಬಾರಿ ಚನ್ನಗಿರಿ ಕ್ಷೇತ್ರವೇ ಸಿದ್ದೇಶ್ವರರ ಕೈ ಹಿಡಿದು ಮಲ್ಲಿಕಾರ್ಜುನರಿಗೆ ಕೈ ಕೊಟ್ಟಿತ್ತು, ಈ ಬಾರಿಯೂ ಚನ್ನಗಿರಿ ಬಿಜೆಪಿ ಪರ ಹೋಗುವ ಲಕ್ಷಣಗಳಿವೆ. ಹಾಗೆಯೇ ಜಗಳೂರು ಕ್ಷೇತ್ರದಲ್ಲಿ ಎಸ್.ವಿ.ರಾಮಚಂದ್ರರು ಸಿದ್ದೇಶ್ವರ ಪರವಾಗಿ ಚುರುಕಾಗಿದ್ದಾರೆ.

ಒಟ್ಟಾರೆಯಾಗಿ ಹೇಳುವುದಾದರೆ ದಾವಣಗೆರೆ ಪಾರ್ಲಿಮೆಂಟ್ ಕ್ಷೇತ್ರದ ಎಂಟು ವಿಧಾನ ಸಭಾಕ್ಷೇತ್ರಗಳಲ್ಲಿ ಹೆಚ್ಚಿನ ಕಡೆ ಸಿದ್ದೇಶ್ವರರಿಗೆ ಅವರದೇ ಬಿಜೆಪಿಯ ಮಾಜಿಗಳು ವಿರೋಧಿಗಳಾಗಿದ್ದಾರೆ.

ಮಹಿಮಾ ಎಡವಟ್ಟು

ಮಹಿಮಾ ಪಟೇಲರ ರಾಜಕೀಯ ಮಹಿಮೆಯೇ ವಿಚಿತ್ರವಾಗಿದೆ. 2013ರ ಅಸೆಂಬ್ಲಿ ಚುನಾವಣೆಯಲ್ಲಿ ಚನ್ನಗಿರಿ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಪಡೆಯಲು ಇನ್ನಿಲ್ಲದ ಪ್ರಯತ್ನ ಮಾಡಿದ್ದರು ಮಹಿಮಾ. ಆದರೆ ಕಾಂಗ್ರೆಸ್ ಅವರಿಗೆ ಟಿಕೆಟ್ ನಿರಾಕರಿಸಿತ್ತು, ಹೋಗಲಿ, ಚನ್ನಗಿರಿ ಟಿಕೆಟ್ ಕೊಡದಿದ್ದರೂ ಪರವಾಗಿಲ್ಲ, ದಾವಣಗೆರೆ ಟಿಕೆಟ್ ಕೊಡಿ ಎಂದು ಮಹಿಮಾ ದುಂಬಾಲು ಬಿದ್ದಿದ್ದರು. ಶಾಮನೂರರ ಅಖಾಡವಾದ ದಾವಣಗೆರೆಯಲ್ಲಿ ಮಹಿಮನಿಗೆ ಕಾಂಗ್ರೆಸ್ ಟಿಕೆಟ್ ಕೊಡಲು ಕಾಂಗ್ರೆಸ್ ಹೈಕಮಾಂಡ್‌ಗೆ ಹುಚ್ಚು ಹಿಡಿದಿರಲಿಲ್ಲ, ಆದ್ದರಿಂದ ಅಲ್ಲಿಂದಲೂ ಮಹಿಮನಿಗೆ ಟಿಕೆಟ್ ಸಿಗಲಿಲ್ಲ, ಈಗ ನೋಡಿದರೆ ವಿಧಾನ ಸಭಾ ಟಿಕೆಟ್ ಕೊಡದಿದ್ದರೂ ಪರವಾಗಿಲ್ಲ ಪಾರ್ಲಿಮೆಂಟ್ ಟಿಕೆಟ್ ಕೊಡಿ ಎಂಬುದು ಮಹಿಮಾರ ಒತ್ತಾಸೆಯಾಗಿತ್ತು. ಚನ್ನಗಿರಿಯಲ್ಲೇ ಸೋತಿದ್ದ ಮಹಿಮನಿಗೆ ಪಾರ್ಲಿಮೆಂಟ್ ಟಿಕೆಟ್ ಅನ್ನು ಅದ್ಯಾವ ಕಾರಣಕ್ಕೆ ಕಾಂಗ್ರೆಸ್ ಹೈಕಮಾಂಡ್ ಕೊಡುತ್ತದೆ. ಮಹಿಮನ ಅಹವಾಲನ್ನು ಕಾಂಗ್ರೆಸ್ ತಿರಸ್ಕರಿಸಿತು. ಅಕಸ್ಮಾತ್ ಮಹಿಮರಿಗೆ ಕಾಂಗ್ರೆಸ್ ದಾವಣಗೆರೆ ಪಾರ್ಲಿಮೆಂಟ್ ಚುನಾವಣೆಯಲ್ಲಿ ಟಿಕೆಟ್ ನೀಡಿದ್ದರೆ ಸಿದ್ದೇಶ್ವರರೆದುರು ಮಹಿಮನಿಗೆ ಠೇವಣಿಯೂ ಸಿಗುತ್ತಿರಲಿಲ್ಲ ಎಂಬುದು ದಿಟ.

ಕಾಂಗ್ರೆಸ್ ಮಹಿಮಾರ ಟಿಕೆಟ್ ಆಕಾಂಕ್ಷೆಗಳನ್ನು ನಿರ್ಲಕ್ಷಿಸಿದ್ದೇ ತಡ ಮಹಿಮಾ ಪಟೇಲ ಮತ್ತೊಂದು ಸುತ್ತಿನ ಪಕ್ಷಾಂತರಕ್ಕೆ ಸಿದ್ಧರಾದರು. ಈಗ ಅವರು ಜೆ.ಡಿ.ಎಸ್ ಅಭ್ಯರ್ಥಿಯಾಗಿ ಕಣಕಿಳಿದಿದ್ದಾರೆ.

ಯಾರಿಗೆ ಲಾಭ

ಮಹಿಮಾ ಪಟೇಲರ ಸ್ಪರ್ಧೆಯನ್ನು ಅಷ್ಟು ಸುಲಭವಾಗಿ ತಳ್ಳಿಹಾಕುವಂತಿಲ್ಲ, ಯಾಕೆಂದರೆ ಪಾರ್ಲಿಮೆಂಟ್ ಕ್ಷೇತ್ರದ ಚನ್ನಗಿರಿ–ಹೊನ್ನಾಳಿ–ಹರಿಹರ ಮತ್ತು ದಾವಣಗೆರೆ ಅಸೆಂಬ್ಲಿ ಕ್ಷೇತ್ರಗಳಲ್ಲಿ ಅವರ ತಂದೆ ದಿವಂಗತ ಜೆ.ಹೆಚ್.ಪಟೇಲರ ಅಭಿಮಾನಿಗಳಿದ್ದಾರೆ. ಪಟೇಲರ ಪ್ರಭಾವ ಇಲ್ಲಿನ ಕುರುಬರ, ನಾಯಕರ, ಮುಸ್ಲಿಮರ ಮತ್ತು ಉಪ್ಪಾರ ಮತದಾರರ ಮೇಲೆ ಇನ್ನೂ ಉಳಿದಿದೆ.

ಜೊತೆಗೆ ಇಲ್ಲಿ ಮಹಿಮಾರ ಬಣಜಿಗ ಲಿಂಗಾಯತ ಸಮುದಾಯಕ್ಕೆ ಸೇರಿರುವ 1.5 ಲಕ್ಷದಷ್ಟು ಮತದಾರರಿದ್ದಾರೆ. ಸುಮಾರು ಅವರಷ್ಟೇ ಸಂಖ್ಯೆಯಲ್ಲಿರುವ ಸಾಧು ಲಿಂಗಾಯತರೂ ಯಡ್ಡಿಯ ಕಾರಣಕ್ಕೆ ಬಿಜೆಪಿಯ ಬೆಂಬಲಿಗರಾಗಿದ್ದಾರೆ. ಕಾಂಗ್ರೆಸ್ ಮತ್ತು ಬಿಜೆಪಿ ಸಾಧು ಲಿಂಗಾಯತರಿಗೆ ಟಿಕೆಟ್ ಕೊಡುವ ಮೂಲಕ ತಮ್ಮನ್ನು ನಿರ್ಲಕ್ಷಿಸಿದೆ ಎಂಬ ಕಾರಣಕ್ಕೆ ಬಣಜಿಗ ಲಿಂಗಾಯತರು ಜೆಡಿಎಸ್‌ನಿಂದ ಸ್ಪರ್ಧಿಸಿರುವ ಮಹಿಮಾ ಪಾಟೀಲರನ್ನು ಬೆಂಬಲಿಸಿದರೂ ಅಚ್ಚರಿ ಇಲ್ಲ.

ಜೊತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲಿರುವ ಅಲ್ಪಸಂಖ್ಯಾತರೂ ಮಹಿಮಾ ಪರ ನಿಲ್ಲಬಹುದು. ಯಾಕೆಂದರೆ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿಯಾಗಿ ಸೈಯದ್ ಸೈಫುಲ್ಲ ಎಂಬ ಮುಸಲ್ಮಾನರು ದಾವಣಗೆರೆ ದಕ್ಷಿಣದಿಂದ ಸ್ಪರ್ಧಿಸಿ ಶಿವಶಂಕರಪ್ಪನವರಿಗೆ ಪ್ರಬಲ ಪೈಪೋಟಿ ನೀಡಿದ್ದರು. ಅದೇ ಮತಗಳು ಈ ಬಾರಿ ಮಹಿಮಾ ಪಟೇಲರಿಗೆ ಬೀಳುವ ಸಾಧ್ಯತೆಗಳಿವೆ.

ಇಲ್ಲಿ ಸಿದ್ದೇಶ್ವರರಿಗೆ ಮತ್ತೊಂದು ಆಘಾತವಾಗಿದೆ. ಈ ಹಿಂದೆ ಯಡ್ಡಿಯ ಬಾಲಂಗೋಚಿಯಂತಿದ್ದ ಹರಿಹರದ ಮಾಜಿ ಬಿಜೆಪಿ ಶಾಸಕ ಹರೀಶರಿಗೆ ತಾನು ಯಡ್ಡಿಯನ್ನು ನಂಬಿ ಕೆಟ್ಟೆ ಎಂಬ ಸತ್ಯ ಅರಿವಾಗಿದೆ. ಯಾವಾಗ ಯಡ್ಡಿ ಬಿಜೆಪಿಗೆ ಕೆಜೆಪಿಯನ್ನು ಅನಾಮತ್ತು ಎತ್ತಿ ಹಾಕಿದರೋ ಆಗಲೇ ಯಡ್ಡಿ ರಾಜಕೀಯ ಚಂಚಲತೆ ಬಗ್ಗೆ ಹರೀಶ್ ಬೇಸತ್ತಿದ್ದರು. ಯಡ್ಡಿಯೊಂದಿಗೆ ಅವರೂ ಬಿಜೆಪಿ ಸೇರಿದರಾದರೂ ಪಾರ್ಟಿಯಲ್ಲಿ ಮೂಲೆಗುಂಪಾದರು. ಮುಂದೆಂದೂ ಬಿಜೆಪಿ ತನಗೆ ಹರಿಹರದ ಟಿಕೆಟ್ ಕೊಡುವುದಿಲ್ಲ ಎಂದು ಗೊತ್ತಾಗಿದ್ದೇ ತಡ ಹರೀಶ್ ಬಿಜೆಪಿಗೆ ಗುಡ್‌ಬೈ ಹೇಳಿ ಇತ್ತೀಚೆಗೆ ಕಾಂಗ್ರೆಸ್ ಸೇರಿದ್ದಾರೆ.

ಇದರ ಹಿಂದೆ ಒಂದು ತರ್ಕವೂ ಇದೆ. ಮಲ್ಲಿಕಾರ್ಜುನ್ ಗೆದ್ದು ದೆಹಲಿಗೆ ಹೋದರೆ ಅವರು ತೊರೆಯುವ ದಾವಣಗೆರೆ ಉತ್ತರ ಕ್ಷೇತ್ರದಿಂದ ವಿಧಾನಸಭೆಗೆ ನಡೆಯಲಿರುವ ಉಪಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಹರೀಶರ ಮುಂದಾಲೋಚನೆ.

ಒಟ್ಟಾರೆಯಾಗಿ ಜಾತಿ ಮತ್ತು ಹಣಬಲವೇ ಪ್ರಮುಖವಾಗಿರುವ ದಾವಣಗೆರೆ ಮತಕ್ಷೇತ್ರದಲ್ಲಿ ಸದ್ಯಕ್ಕೆ ಬಿಜೆಪಿಯ ಸಿದ್ದೇಶ್ವರರು ಹಲವಾರು ತರಹದ ತೊಡರುಗಾಲುಗಳನ್ನು ಎದುರಿಸುತ್ತಿರುವ ಕಾರಣಕ್ಕೆ ಕಾಂಗ್ರೆಸ್‌ನ ಮಲ್ಲಿಕಾರ್ಜುನ್ ಮುಂದಿದ್ದಾರೆ ಎನ್ನಬಹುದು.

● ಟಿ.ಎನ್.ಷಣ್ಮುಖ

ಹೋರಾಟಗಾರ ಕರಿಯಪ್ಪ ಗುಡಿಮನಿ ಪೊಲೀಸರ ದೃಷ್ಟಿಯಲ್ಲಿ ರೌಡಿ!

ಕರಿಯಪ್ಪ ಗುಡಿಮನಿಯವರು ಕಳೆದ 40 ವರ್ಷಗಳಿಂದ ದಲಿತ ಕ್ರಾಂತಿಕಾರಿ ...ಪರ ಚಳವಳಿಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಹೋರಾಟದೊಂದಿಗೆ ...ಸಿಕೊಂಡಿದ್ದಾರೆ. ಒಮ್ಮೆ ಬಿ.ಎಸ್.ಪಿ. ಪಕ್ಷದಿಂದ ಚುನಾವಣೆಗೆ ನಿಂತು ...ಗವನ್ನು ಸಹ ಮಾಡಿದ್ದರು. ಈಗಲೂ ಬಳ್ಳಾರಿ, ಕೊಪ್ಪಳ ಜಿಲ್ಲೆಗಳಲ್ಲಿ ...ಪ್ರದೇ ಜನಪರ ಹೋರಾಟಗಳು ನಡೆದರೂ ಅದಕ್ಕೆ ಧ್ವನಿಗೂಡಿಸಲು ...ಸಿದ್ಧರಾಗಿರುತ್ತಾರೆ ಕರಿಯಪ್ಪ ಗುಡಿಮನಿ.

ಕರ್ನಾಟಕ ಮಾದಿಗರ ರಕ್ಷಣಾ ವೇದಿಕೆ (ಕರ್ನಾಟಕ ಜನಶಕ್ತಿಯ ಅಂಗ ಸಂಘಟನೆ)ಯನ್ನು ಸ್ಥಾಪಿಸಿ ಶೋಷಿತ ಸಮುದಾಯಗಳಿಗೆ ನ್ಯಾಯವನ್ನು, ಸ್ವಾಭಿಮಾನದ ಬದುಕನ್ನು ದೊರಕಿಸಲು ಪ್ರಯತ್ನಿಸುತ್ತಿರುತ್ತಾರೆ. ಆದರೆ ಒಂದು ...ಗೆ ಅಂಟಿಕೊಳ್ಳದೆ ಸಮಸ್ತ ಶೋಷಿತ ಸಮುದಾಯಗಳು ಒಂದಾಗಬೇಕೆಂಬ ...ವನ್ನು ಹೊತ್ತವರಾಗಿದ್ದಾರೆ. ಹಂಪಿಯಲ್ಲಿರುವ ಮಾತಂಗ ಪರ್ವತದ ...ಲ್ಲಿ ಬಿ.ಜೆ.ಪಿ ಮತ್ತು ಆರ್.ಎಸ್.ಎಸ್‌ನ ಜಾತಿವಾದಿಗಳು ಆ ಪರ್ವತವನ್ನು ... [illegible] ಪ್ರಯತ್ನಕ್ಕೆ ದೊಡ್ಡ ಪೆಟ್ಟನ್ನು ಕೊಟ್ಟವರು ಗುಡಿಮನಿ. ಆ ...ದಲ್ಲಿ ಕೋಮುವಾದಿಗಳನ್ನು ಒದ್ದೋಡಿಸಿ, ಮಾತಂಗ ಪರ್ವತವನ್ನು ...ಗ ಸಮುದಾಯದ ಸಂಕೇತವಾಗಿ ಉಳಿಸಿಕೊಂಡಿದ್ದಾರೆ ಗುಡಿಮನಿಯವರು. ...ಯ ಠಾಣೆಯ ವ್ಯಾಪ್ತಿಯಲ್ಲಿ ಬರುವ ಶ್ರೀರಾಮ...



ರಂಗಾಪುರ(ಎಸ್.ಆರ್.ಪುರ)ದಲ್ಲಿ ದಿವಂಗತ ಭೀಮಸೇನಿ ಕೊಂಡಯ್ಯನವರ ಕುಟುಂಬ ವರ್ಗದವರು ದೌರ್ಜನ್ಯದಿಂದ ದಲಿತರ ನೂರಾರು ಎಕರೆ ನೀರಾವರಿ

ಭೂಮಿಯನ್ನು ತಮ್ಮ ವಶದಲ್ಲಿಟ್ಟುಕೊಂಡಿದ್ದಾರೆ. ಭೂಮಾಲೀಕರ ಬಗ್ಗೆ ಭಯಭೀತರಾಗಿದ್ದ ದಲಿತ ಕುಟುಂಬಗಳಿಗೆ ಧೈರ್ಯತುಂಬಿದ ಗುಡಿಮನಿಯವರು ಕಳೆದ 35 ವರ್ಷಗಳಿಂದ ಭೂಮಿವಂಚಿತರಾಗಿರುವವರನ್ನು ಹೋರಾಟಕ್ಕೆ ಅಣಿಗೊಳಿಸಿದ್ದಾರೆ.

ಈಗ ಲೋಕಸಭೆ ಚುನಾವಣೆ ಸಮೀಪಿಸುತ್ತಿದ್ದಂತೆ ಇತ್ತೀಚೆಗೆ ಹೊಸಪೇಟೆ ತಾಲ್ಲೂಕಿನ ಪೊಲೀಸರು ಗುಡಿಮನಿಯವರ ವಿರುದ್ಧ 107 ಕೇಸು ದಾಖಲಿಸಿಕೊಂಡು ಈ ಹೋರಾಟಗಾರರನ್ನು ರೌಡಿಯೆಂದು ಪರಿಗಣಿಸಿದ್ದಾರೆ.

ಅಂದರೆ, ಪೊಲೀಸರ ದೃಷ್ಟಿಯಲ್ಲಿ ಹೋರಾಟಗಾರರು ರೌಡಿಗಳೆ? ಗುಡಿಮನಿಯವರು ಯಾವಾಗ ರೌಡಿ ಆದರು? ಇವರಿಂದ ಚುನಾವಣೆಗೆ ಭಂಗ ಬಂದಿರುವುದಾದರೂ ಹೇಗೆ? ಇದು ಹೋರಾಟಗಾರರನ್ನು, ಜನಪರ ಮತ್ತು ಪ್ರಗತಿಪರ ಹೋರಾಟವನ್ನು ತುಳಿಯುವ ಪ್ರಯತ್ನವಲ್ಲವೇ? ಇದಕ್ಕೆ ಕೇಸು ದಾಖಲಿಸಿದ ಅಧಿಕಾರಿಗಳೆ ಹೊಣೆಯನ್ನು ಹೊರಬೇಕಾಗಿದೆ.

ಕರಿಯಪ್ಪ ಗುಡಿಮನಿಯವರು ಮುಂದೆ ನಡೆಸುವ ಹೋರಾಟಗಳಿಗೆ ಎಲ್ಲಾ ಪ್ರಗತಿಪರ ಸಂಘಟನೆಗಳು ಕೈಜೋಡಿಸಬೇಕಿದೆ. ... ಮೇಲೆ ಹಾಕಿರುವ ರೌಡಿ ಕೇಸನ್ನು ವಾಪಸ್ ತೆಗೆದುಕೊಳ್ಳಲು ಮತ್ತು ಕೇಸು ದಾಖಲಿಸಿದ ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಒತ್ತಾಯಿಸಬೇಕಿದೆ. ●

ಗಾಂಧಿ ಮತ್ತು ಕೋಮುವಾದ

ನಾವು ಇಂದು ಅತ್ಯಂತ ಆತಂಕದ ಸ್ಥಿತಿಯಲ್ಲಿದ್ದೇವೆ. ಮನುಷ್ಯನ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಅಭಿವೃದ್ಧಿಯ ಕುರಿತು ಮಾಡಬೇಕಾದ ಚಿಂತನೆಗೆ ಬೇಕಾದ ಸಮಯವನ್ನೆಲ್ಲ ಕೋಮುವಾದದ ವಿರುದ್ಧ ಹೋರಾಡಲು ಬಳಸುವ ಪರಿಸ್ಥಿತಿ ಬಂದೊದಗಿದೆ. ಸಮಾಜದಲ್ಲಿ ಕೋಮುಸೌಹಾರ್ದವು ಸಹಜವಾಗಿ ಇರುವಂಥ ವಾತಾವರಣವಿದ್ದಾಗ ಮಾತ್ರ ಮಾನವ ಅಭಿವೃದ್ಧಿಪಥದಲ್ಲಿ ಮುಂದುವರಿಯಲು ಸಾಧ್ಯ; ಇಲ್ಲದಿದ್ದರೆ ಜೀವಂತವಾಗಿ ಇರುವುದೊಂದೇ ಅವನ ಗುರಿಯಾಗುತ್ತದೆ. ಕೋಮುವಾದವು ಮನುಷ್ಯನ ಎಲ್ಲಾ ಒಳ್ಳೆಯತನದ ಮೇಲೆ ಕ್ಯಾಕರಿಸಿ ಉಗುಳುತ್ತದೆ. ಎಲ್ಲಾ ಸೂಕ್ಷ್ಮ ಭಾವನೆಗಳನ್ನು ಹಾಳು ಮಾಡುತ್ತದೆ. ಮನುಷ್ಯ ಮನುಷ್ಯನನ್ನು ಅರಿಯುವ ಸಂದರ್ಭದಲ್ಲಿ ಅಡ್ಡಗೋಡೆಯಾಗಿ ನಿಲ್ಲುತ್ತದೆ. ಈ ಸಂದರ್ಭದಲ್ಲಿ ಗಾಂಧೀಜಿಯವರು ಕೋಮುಸೌಹಾರ್ದಕ್ಕಾಗಿ ಮತ್ತು ಮನುಷ್ಯನ ಸದ್ಭಾವನೆಗಳನ್ನು ರಕ್ಷಿಸುವುದಕ್ಕಾಗಿ ಮಾಡಿದ ಪ್ರಯತ್ನಗಳು ನಮ್ಮ ದೇಶಕ್ಕೆ ದಾರಿದೀಪಗಳಾಗಿವೆ. ದೇಶ ಯಾವ ರೀತಿ ಮುಂದುವರಿಯಬೇಕೆಂಬುದನ್ನು ಸೂಚಿಸುತ್ತವೆ.

ಗಾಂಧೀಜಿಯವರು ಮಾನವೀಯತೆಗೆ ಬದ್ಧವಾಗಿದ್ದಂಥ ಒಬ್ಬ 'ಬಂಡುಕೋರ' ಸನಾತನವಾದಿಗಳಾಗಿದ್ದರು. ಅವರ ಸನಾತನವಾದವು ಪರಿಶುದ್ಧವಾಗಿದೆ; ಇಡೀ ಲೋಕದ ಹಿತವನ್ನು ಕಾಪಾಡುವಂಥದ್ದಾಗಿದೆ. ಅಂತೆಯೆ ಗಾಂಧೀಜಿಯವರು ವ್ಯಾಖ್ಯಾನಿಸುವ ಹಿಂದೂ ಧರ್ಮವು ಇಡೀ ವಿಶ್ವಕ್ಕೆ ಆದರ್ಶಪ್ರಾಯವಾಗಿದೆ. ಅವರ ಹಿಂದೂ ಧರ್ಮದಲ್ಲಿ ಕ್ರೈಸ್ತರು, ಮುಸ್ಲಿಮರು, ಬೌದ್ಧರು ಹೀಗೆ ಎಲ್ಲರೂ ಮಾನವ ಘನತೆಯನ್ನು ಪಡೆಯುತ್ತಾರೆ. ಪರಿಶುದ್ಧವಾದ ಹಿಂದೂಗಳು, ಮುಸ್ಲಿಮರು, ಸಿಖ್ಖರು, ಕ್ರೈಸ್ತರು ಎಲ್ಲರೂ ಗಾಂಧೀಜಿಯವರ ಕಣ್ಣಲ್ಲಿ ಒಂದೇ ಆಗುತ್ತಾರೆ. ಹೀಗಾಗಿ ನಿಜವಾದ ಆಚರಣೆಯಲ್ಲಿ ಅವರಿಗೆ ಧರ್ಮಗಳ ಮಧ್ಯೆ ವ್ಯತ್ಯಾಸವೇ ಕಾಣುವುದಿಲ್ಲ. ಈ ಮನಸ್ಥಿತಿಯೇ ಕೋಮುವಾದವೆಂಬ ರೋಗಕ್ಕೆ ಮದ್ದಾಗಿದೆ.

"ಮುಹಮ್ಮದ್, ಝುರತುಷ್ಟ್ರ ಮತ್ತು ಮೋಸೆಸರಿಗೆ ಇರುವಂತೆಯೆ ಏಸುವಿಗೂ ಹಿಂದೂ ಧರ್ಮದಲ್ಲಿ ಸಾಕಷ್ಟು ಸ್ಥಾನವಿದೆ. ವಿವಿಧ ಧರ್ಮಗಳು ನನಗೆ ಒಂದೇ ತೋಟದ ಸುಂದರ ಪುಷ್ಪಗಳು ಅಥವಾ ಅವು ಒಂದೇ ಮಹಾವೃಕ್ಷದ ಕೊಂಬೆಗಳು" ಎಂದು ಗಾಂಧೀಜಿಯವರು ಹೇಳಿದ್ದು ಕೋಮುವಾದಕ್ಕೊಂದು ಪ್ರಬಲ ಉತ್ತರವಾಗಿದೆ. ಎಲ್ಲ ಮತಗಳು ಸತ್ಯ ಮಾತ್ರವಲ್ಲ ಸಮಾನ ಕೂಡ ಎಂದು ಗಾಂಧೀಜಿಯವರು ನಂಬಿದ್ದರು. ಎಲ್ಲಾ ಪ್ರವಾದಿಗಳು ಸಮಾನರು ಎಂದು ಅವರು ಹೇಳುತ್ತಿದ್ದರು. ಭಾರತದಂಥ ಬಹು ಸಾಂಸ್ಕೃತಿಕ ಮತ್ತು ಬಹು ಧಾರ್ಮಿಕ ದೇಶದಲ್ಲಿ ಗಾಂಧೀಜಿಯವರ ಸಂಯಮ ಮತ್ತು ಮನುಷ್ಯಪ್ರೇಮ ಮಾತ್ರ ಜನಸಮುದಾಯಕ್ಕೆ ಉದ್ವಿಗ್ನವಿಲ್ಲದ ವಾತಾವರಣವನ್ನು ಸೃಷ್ಟಿಸಬಲ್ಲುದು.


"ಹಿಂದೂ ಧರ್ಮ ಪಟ್ಟು ಬಿಡದ ಸತ್ಯಾನ್ವೇಷಣೆ" ಎಂಬುದರಲ್ಲಿ ಅವರಿಗೆ ಅಚಲವಾದ ನಂಬಿಕೆ ಇತ್ತು. ಧರ್ಮಗ್ರಂಥವಾದ ಭಗವದ್ಗೀತೆ ಅವರಿಗೆ ಬಾಹ್ಯಪ್ರಪಂಚದ ಗ್ರಂಥವಾಗಿದ್ದಿಲ್ಲ, ಮನುಷ್ಯನ ಅಂತರಿಕ ಜಗತ್ತು ಮತ್ತು ಅಲ್ಲಿರುವ ಕುರುಕ್ಷೇತ್ರಕ್ಕೆ ಸಂಬಂಧಿಸಿದುದಾಗಿತ್ತು.

"ದುರ್ಯೋಧನನ ಮತ್ತು ಅವನ ಪಕ್ಷದವರನ್ನು ನಾನು ಮಾನವನಲ್ಲಿರುವ ಅಧಮ ಪ್ರವೃತ್ತಿಗಳೆಂದೂ ಅರ್ಜುನನ ಮತ್ತು ಅವನ ಪಕ್ಷದವರನ್ನು ಉತ್ತಮ ಪ್ರವೃತ್ತಿಗಳೆಂದೂ ಪರಿಗಣಿಸುತ್ತೇನೆ. ನಮ್ಮ ಸ್ವಂತ ದೇಹವೇ ಯುದ್ಧರಂಗ, ಈ ಎರಡೂ ಪಕ್ಷಗಳಲ್ಲಿ ಶಾಶ್ವತವಾದ ಯುದ್ಧ ನಡೆಯುತ್ತಿದೆ. ಋಷಿಕವಿ ಅದನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ. ಶುದ್ಧ ಹೃದಯದಲ್ಲಿ ಸದಾ ಪಿಸುನುಡಿ ನುಡಿಯುತ್ತಿರುವ ಅಂತರ್ಯಾಮಿ ಕೃಷ್ಣ ಗಡಿಯಾರದಂತೆ ಹೃದಯಕ್ಕೆ ಶುದ್ಧತೆಯ ಕೀಲು ಕೊಡುವುದು ಅವಶ್ಯಕ. ಇಲ್ಲದಿದ್ದರೆ ಅಂತರ್ಯಾಮಿ ಮಾತನಾಡುವುದನ್ನು ನಿಲ್ಲಿಸುತ್ತಾನೆ" ಎಂದು ಗಾಂಧೀಜಿ ನಮಗೆ ಕಿವಿಮಾತು ಹೇಳಿದ್ದಾರೆ.

"ನಾನೊಬ್ಬ ಸನಾತನಿ ಹಿಂದೂ" ಎಂದು ಗಾಂಧೀಜಿಯವರು ಹೇಳಿಕೊಂಡರೂ ತಮ್ಮದೇ ಆದ ಮಾನವೀಯ ಮೌಲ್ಯಗಳ ಬೆಳಕಿನ ಮೂಲಕವೇ ಹಿಂದೂ ಧರ್ಮವನ್ನು ಗುರುತಿಸುತ್ತಾರೆ. ವಿಶಾಲ ಕಲ್ಪನೆಗೆ ಅವಕಾಶವಿಲ್ಲದ ಹಿಂದೂ ಧರ್ಮ, ಕೋಮುಭಾವನೆಗಳನ್ನು ಕೆರಳಿಸುವ ಹಿಂದೂ ಧರ್ಮ, ಜಾತೀಯತೆ ಮತ್ತು ಅಸ್ಪೃಶ್ಯತೆ ಆಚರಿಸುವ ಹಿಂದೂ ಧರ್ಮ ಮತ್ತು 'ಗರ್ವದಿಂದ ಹೇಳಿರಿ ನಾವು ಹಿಂದೂಗಳು' ಎಂದು ಹೇಳುವವರ ಹಿಂದೂ ಧರ್ಮ ಗಾಂಧೀಜಿಯವರ ಹಿಂದೂ ಧರ್ಮವಾಗಿರಲಿಲ್ಲ.

"ಅನುವಂಶಿಕತೆಯ ಪ್ರಭಾವದಲ್ಲಿ ನನಗೆ ನಂಬಿಕೆ ಇರುವುದರಿಂದ ಮತ್ತು ಹಿಂದೂ ಕುಟುಂಬವೊಂದರಲ್ಲಿ ಹುಟ್ಟಿರುವುದರಿಂದ ನಾನು ಒಬ್ಬ ಹಿಂದೂ ಆಗಿ ಉಳಿದಿದ್ದೇನೆ. ನನ್ನ ನೈತಿಕ ಪ್ರಜ್ಞೆಗೆ ಅಥವಾ ಆಧ್ಯಾತ್ಮಿಕ ಬೆಳವಣಿಗೆಗೆ ಅದು ಅಸಂಗತವೆಂದು ಕಂಡುಬಂದಲ್ಲಿ ನಾನು ಅದನ್ನು "ಹಿಂದೂಧರ್ಮವನ್ನು ತ್ಯಜಿಸುತ್ತೇನೆ" ಎಂದು ಗಾಂಧೀಜಿಯವರು ಪ್ರಕಟಿಸಿದ್ದಾರೆ.

ಸತ್ಯ, ಪ್ರೇಮ ಮತ್ತು ಅಹಿಂಸೆಗಳು ಅವರು ಪ್ರತಿಪಾದಿಸುತ್ತಿದ್ದ ಹಿಂದೂ ಧರ್ಮದ ಮೂಲಾಧಾರಗಳಾಗಿವೆ. ಆ ಮೂಲಕವೇ ಅವರು ಎಲ್ಲ ಧರ್ಮಗಳನ್ನು ನೋಡುತ್ತಿದ್ದರು ಮತ್ತು ಗೌರವಿಸುತ್ತಿದ್ದರು. "ಅಹಿಂಸೆ ಎಲ್ಲ ಧರ್ಮಗಳಿಗೂ ಸಮಾನವಾಗಿದೆ. ಹಿಂದೂ ಧರ್ಮವು ಕೇವಲ ಮಾನವ ಜೀವನದ ಏಕತೆಯಲ್ಲಿ ಮಾತ್ರ ನಂಬಿಕೆ ಇಡದೆ, ಜೀವಂತವಾಗಿ ಇರುವ ಎಲ್ಲದರ ಏಕತೆಯಲ್ಲಿ ನಂಬಿಕೆ ಇಡುತ್ತದೆ" ಎಂದು ಗಾಂಧೀಜಿ ಹೇಳಿದ್ದಾರೆ. ಈ ಹೇಳಿಕೆಯಲ್ಲಿ ಬದುಕಿನ ಒಳ್ಳೆಯದೆಲ್ಲವನ್ನು ಗೌರವಿಸುವ ಮನೋಭಾವವಿದೆ. ಇಂಥ ಮನಸ್ಥಿತಿಯಲ್ಲಿ ಹಿಂದೂ, ಮುಸ್ಲಿಂ, ಕ್ರೈಸ್ತ ಸಿಖ್ ಎಂಬ ಭೇದಭಾವ ಎಂದಿಗೂ



ಬಾರದು. ಕೋಮುಭಾವನೆ ಎಂದೂ ಕೆರಳದು. ಇಂಥ ಮನಸ್ಥಿತಿಯಲ್ಲಿ ಮಾತ್ರ ಇಡೀ ಮಾನವಕುಲವನ್ನು ಮತ್ತು ಎಲ್ಲಾ ಜೀವರಾಶಿಗಳನ್ನು ಅಂತಃಕರಣದಿಂದ ನೋಡಲು ಸಾಧ್ಯ, ಎಲ್ಲ ಒಳ್ಳೆಯದರ ಬಗ್ಗೆ ಗೌರವ ಮೂಡಲು ಸಾಧ್ಯ.

"ವೇದಗಳು ಮಾತ್ರವೇ ದೈವೀಕವಾದವು ಎಂಬುದನ್ನು ನಾನು ನಂಬುವುದಿಲ್ಲ, ಬೈಬಲ್, ಕುರಾನ್ ಮತ್ತು ಜೆಂದಾ ಅವೆಸ್ತಾ ಸಹ ವೇದಗಳಷ್ಟೇ ದೈವೀಕವಾಗಿ ಪ್ರೇರಿತವಾದುವು ಎಂಬುದು ನನ್ನ ನಂಬಿಕೆ" ಎಂದು ಗಾಂಧೀಜಿಯವರು ಹೇಳುವಾಗ ಕೋಮುವಾದ ಬೇರುಸಹಿತ ಕಿತ್ತುಹೋಗುತ್ತದೆ.

ಚರಕಧರ್ಮ

ಕಾಯಕ ಮತ್ತು ಧರ್ಮವನ್ನು ಅಭೇದ್ಯವಾಗಿ ನೋಡುವ ಗಾಂಧೀಜಿಯವರ ಕ್ರಮವು 12ನೇ ಶತಮಾನದ ಶರಣರನ್ನು ನೆನಪಿಗೆ ತರುತ್ತದೆ. ಚರಕವು ಅವರಿಗೆ ಉತ್ಪಾದನೆಯ ಒಂದು ಮಹತ್ವದ ಸಾಧನವಾಗಿತ್ತು, ಬ್ರಿಟಿಷರ ಜವಳಿ ಗಿರಣಿಗಳನ್ನು ಬಂದ್ ಮಾಡುವ ಶಕ್ತಿ ಅದಕ್ಕಿತ್ತು, ಆ ಮೂಲಕ ಭಾರತೀಯರ ಶೋಷಣೆ ಕಡಿಮೆಗೊಳಿಸುವಲ್ಲಿ ಮತ್ತು ಸ್ವಾತಂತ್ರ್ಯದ ಪ್ರಜ್ಞೆಯನ್ನು ಬೆಳೆಸುವಲ್ಲಿ ಚರಕವು ಮಹತ್ತರ ಪಾತ್ರವನ್ನು ವಹಿಸಿದೆ. ಆದರೆ ಗಾಂಧೀಜಿಯವರಿಗೆ ಚರಕವೆಂಬುದು ಧರ್ಮವಾಗಿತ್ತು, ಎಲ್ಲ ಧರ್ಮಗಳನ್ನು ಒಂದುಗೂಡಿಸುವ ಸಾಧನವಾಗಿತ್ತು; ಕಾಯಕದ ಪಾವಿತ್ರ್ಯದ ಸಂಕೇತವಾಗಿತ್ತು; ಸಾಮ್ರಾಜ್ಯಶಾಹಿಯನ್ನು ವಿರೋಧಿಸುವ ಅಸ್ತ್ರವಾಗಿತ್ತು; ಸತ್ಯಾಗ್ರಹವಾಗಿತ್ತು; ಸ್ವಾತಂತ್ರ್ಯದ ಪಥವಾಗಿತ್ತು; ಆತ್ಮಗೌರವ ಮತ್ತು ರಾಷ್ಟ್ರಗೌರವದ ಸಂಕೇತವಾಗಿತ್ತು; ಮನುಷ್ಯರನ್ನು ನಿಜಮನುಷ್ಯರನ್ನಾಗಿ ಮಾಡುವ ಮಂತ್ರದಂಡವಾಗಿತ್ತು, ಅಂತೆಯೆ ಗಾಂಧೀಜಿಯವರು ಹೀಗೆ ಹೇಳಿದರು:

"ನಾನು ಎಲ್ಲೆಲ್ಲಿಯೂ ಚರಕವನ್ನು ನೋಡಲು ಇಚ್ಛಿಸುತ್ತೇನೆ; ಏಕೆಂದರೆ ನಾನು ಎಲ್ಲೆಲ್ಲಿಯೂ ದಿವಾಳಿತನವನ್ನು ನೋಡುತ್ತಿದ್ದೇನೆ. ಅಸ್ಥಿಪಂಜರಗಳಂತಿರುವ ಭಾರತದ ಜನರಿಗೆ ಉಣಲು ಮತ್ತು ಹೊದೆಯಲು ದೊರೆಯಬೇಕು. ಅಲ್ಲಿಯವರೆಗೆ ಅವರಿಗೆ ಧರ್ಮದ ಅರ್ಥವಿಲ್ಲ, ಇಂದು ಅವರು ಪಶುಗಳಂತೆ ಬಾಳುತ್ತಿರುವುದಕ್ಕೆ ನಾವು ಜವಾಬ್ದಾರರಾಗಿದ್ದೇವೆ. ಆದ್ದರಿಂದ ಚರಕ ನಮಗೊಂದು ಪ್ರಾಯಶ್ಚಿತ್ತ. ಅಸಹಾಯಕರ ಸೇವೆಯೇ ಧರ್ಮ. ದೇವರು ಆ ಸಹಾಯಕರ ಮತ್ತು ದುಃಖಾರ್ತರ ರೂಪದಲ್ಲಿ ನಮಗೆ ಕಾಣುತ್ತಾನೆ. ಆದರೆ ನಾವು ಹಣೆಯ ಮೇಲೆ ಲಾಂಛನಗಳನ್ನು ಧರಿಸಿದ್ದರೂ ಅವನನ್ನು ಎಂದರೆ ದೇವರನ್ನು ಗಮನಿಸುವುದಿಲ್ಲ. ದೇವರು ವೇದಗಳಲ್ಲಿ ಇದ್ದಾನೆ ಹಾಗೂ ಇಲ್ಲ, ವೇದಗಳ ಭಾವವನ್ನು ಗ್ರಹಿಸುವವನು ಅವುಗಳಲ್ಲಿ ದೇವರನ್ನು ಕಾಣುತ್ತಾನೆ. ವೇದಗಳ ಅಕ್ಷರಕ್ಕೆ ಜೋತುಬೀಳುವವನು ಒಬ್ಬ ವೇದೀಯ, ಒಬ್ಬ ಅಕ್ಷರನಿಷ್ಠ.

ವೇದಗಳ ಬರಿಯ ಜ್ಞಾನ ನಮ್ಮ ಬ್ರಾಹ್ಮಣರನ್ನು ಆಧ್ಯಾತ್ಮಿಕ ಗುರುಗಳನ್ನಾಗಿ ಮಾಡಲಾರದು. ಹಾಗೆ ಮಾಡಿದಲ್ಲಿ ಮ್ಯಾಕ್ಸ್ ಮುಲ್ಲರ್ ಒಬ್ಬ ಬ್ರಾಹ್ಮಣನಾಗುತ್ತಿದ್ದ. ಇಂದಿನ ಧರ್ಮವನ್ನು ಅರ್ಥಮಾಡಿಕೊಂಡಿರುವ ಬ್ರಾಹ್ಮಣನು ಖಂಡಿತವಾಗಿಯೂ ವೇದಾಧ್ಯಯನಕ್ಕೆ ಎರಡನೇ ಸ್ಥಾನ ಕೊಡುತ್ತಾನೆ. ಚರಕದ ಧರ್ಮವನ್ನು ಪ್ರಸಾರ ಮಾಡುತ್ತಾನೆ ಮತ್ತು ಉಪವಾಸದಿಂದಿರುವ ತನ್ನ ಲಕ್ಷಾಂತರ ದೇಶಬಾಂಧವರ ಹಸಿವನ್ನು ಇಂಗಿಸುತ್ತಾನೆ.

ನೂಲುವುದನ್ನು ನಾನು ಖಂಡಿತವಾಗಿಯೂ ಧಾರ್ಮಿಕ ಪಂಥಗಳ ಆಚರಣೆಗಿಂತಲೂ ಉತ್ತಮವಾದುದೆಂದು ಪರಿಗಣಿಸಿದ್ದೇನೆ. ಆದರೆ ಇದರ ಅರ್ಥ ಈ ಆಚರಣೆಯನ್ನು ಬಿಟ್ಟುಬಿಡಬೇಕು ಎಂದಲ್ಲ. ಎಲ್ಲ ಧರ್ಮಗಳ ಅನುಯಾಯಿಗಳು ಅನುಸರಿಸಬೇಕಾಗಿರುವ ಧರ್ಮವು ಆ ಧರ್ಮಗಳನ್ನು ಮೀರುತ್ತದೆ ಎಂದಷ್ಟೇ ನನ್ನ ಅರ್ಥ. ಆದ್ದರಿಂದ ಸೇವಾಭಾವದಿಂದ ಚರಕ ತಿರುಗಿಸಿದರೆ ಬ್ರಾಹ್ಮಣ ಉತ್ತಮ ಬ್ರಾಹ್ಮಣನಾಗುತ್ತಾನೆ. ಮುಸಲ್ಮಾನ ಉತ್ತಮ ಮುಸಲ್ಮಾನನಾಗುತ್ತಾನೆ. ವೈಷ್ಣವ ಉತ್ತಮ ವೈಷ್ಣವನಾಗುತ್ತಾನೆ ಎಂದು ನಾನು ಹೇಳುತ್ತೇನೆ.

ನಾನು ಹಾಸಿಗೆಯಲ್ಲಿ ಮಲಗಿರುವಾಗ ಚರಕ ತಿರುಗಿಸುವುದು ನನಗೆ ಸಾಧ್ಯವಾದಲ್ಲಿ ಮತ್ತು ಅದು ದೇವರ ಮೇಲೆ ನನ್ನ ಮನಸ್ಸನ್ನು ಕೇಂದ್ರೀಕರಿಸಲು ಸಹಾಯ ಮಾಡುತ್ತದೆ ಎಂದು ನನಗೆ ಅನಿಸಿದ್ದಲ್ಲಿ, ನಾನು ಖಂಡಿತವಾಗಿಯೂ ಜಪಸರವನ್ನು ಬದಿಗಿಟ್ಟು ಚರಕ ತಿರುಗಿಸುತ್ತೇನೆ. ಚರಕ ತಿರುಗಿಸಲು ನನಗೆ ಶಕ್ತಿಯಿದ್ದು ಮಣಿಗಳನ್ನು ಎಣಿಸುವುದು ಅಥವಾ ಚರಕ ತಿರುಗಿಸುವುದು ಇವುಗಳ ನಡುವೆ ಆಯ್ಕೆ ಮಾಡಬೇಕಾದಲ್ಲಿ ನಾನು ಬಡತನ ಹಾಗೂ ಉಪವಾಸ ದೇಶವನ್ನು ಗುಪ್ತವಾಗಿ ಬೆನ್ನಟ್ಟಿರುವುದನ್ನು ಕಾಣುತ್ತಿರುವವರೆಗೆ ಖಂಡಿತವಾಗಿಯೂ ಚರಕದ ಪರವಾಗಿ ತೀರ್ಮಾನಿಸುತ್ತೇನೆ ಮತ್ತು ಅದನ್ನೇ ನಾನು ನನ್ನ ಜಪಸರವನ್ನಾಗಿ ಮಾಡಿಕೊಳ್ಳುತ್ತೇನೆ. ರಾಮನಾಮದ ಜಪ ಕೂಡ ಒಂದು ಅಡ್ಡಿಯಾಗವಂಥ ಕಾಲವನ್ನು ನಾನು ಎದುರುನೋಡುತ್ತೇನೆ. ರಾಮನು ಮಾತಿಗೂ ಮೀರಿದವನೆಂದು ನಾನು ಅರಿತಾಗ ಆ ಹೆಸರನ್ನು ಜಪ ಮಾಡುವ ಅಗತ್ಯ ನನಗೆ ಇರುವುದಿಲ್ಲ, ಚರಕ, ಜಪಸರ ಮತ್ತು ರಾಮನಾಮ ನನಗೆ ಎಲ್ಲವೂ ಒಂದೇ ಗುರಿಗೆ ಸಾಧಕವಾಗಿದೆ. ಅವು ನನಗೆ ಸೇವಾಧರ್ಮವನ್ನು ಬೋಧಿಸುತ್ತವೆ. ಸೇವಾಧರ್ಮವನ್ನು ಆಚರಿಸದೆ ನಾನು ಅಹಿಂಸೆಯನ್ನು ಪಾಲಿಸಲಾರೆ. ಅಹಿಂಸಾ ಧರ್ಮವನ್ನು ಆಚರಿಸದೆ ನಾನು ಸತ್ಯವನ್ನು ಕಾಣಲಾರೆ. ಸತ್ಯಕ್ಕಿಂತ ಬೇರೆ ಧರ್ಮವಿಲ್ಲ, ಸತ್ಯವೇ ರಾಮ, ನಾರಾಯಣ, ಈಶ್ವರ, ಖುದಾ, ಅಲ್ಲಾ, ಗಾಡ್."

ಗಾಂಧೀಜಿಯವರ ಇಂಥ ಆಲೋಚನಾಕ್ರಮುಗಳಿಂದಾಗಿಯೇ ಹಿಂದೂ ಧರ್ಮಕ್ಕೆ ಒಂದು ಹೊಸರೂಪ ಬಂದಿತು. ಆದರೆ ದುರ್ದೈವದ ಸಂಗತಿ ಎಂದರೆ ವಿಶ್ವಮಾನ್ಯವಾದ ಗಾಂಧೀಜಿಯವರ ಮನೋಲೋಕದ ಈ ಹಿಂದೂ ಧರ್ಮದ ಬಗ್ಗೆ ಭಾರತೀಯ ಅಕ್ಷರಸ್ಥರು ತಲೆ ಕೆಡಿಸಿಕೊಳ್ಳಲಿಲ್ಲ, ಹೀಗಾಗಿ ಗಾಂಧೀಜಿಯವರನ್ನು ಕೊಲೆ ಮಾಡಿದ ನಾಥೂರಾಂ ಗೋಡ್ಸೆಯಂಥವರ ಪರಿಕಲ್ಪನೆಯ ಹಿಂದೂ ಧರ್ಮವೇ ಇಂದಿನ ಸಂದರ್ಭದಲ್ಲಿ ಪ್ರಾಧಾನ್ಯ ಪಡೆಯುತ್ತಿದೆ.

"ಹಿಂದೂ ಧರ್ಮದ ಸ್ವಾರಸ್ಯ ಅದರ ವ್ಯಾಪಕವಾ[ದ] ಸರ್ವಗ್ರಾಹಿತ್ವದಲ್ಲಿ ಅಡಗಿದೆ. ಪ್ರತಿಯೊಬ್ಬನು ತನ್ನ ಸ್ವಂ[ತ] ಮತ ಅಥವಾ ಧರ್ಮಕ್ಕೆ ಅನುಸಾರವಾಗಿ ದೇವರ[ನ್ನು] ಪೂಜಿಸುವಂತೆ ಹಿಂದೂ ಧರ್ಮ ಹೇಳುತ್ತದೆ. ಆದ್ದರಿಂ[ದ] ಅದು ಎಲ್ಲಾ ಧರ್ಮಗಳ ಜೊತೆ ಶಾಂತಿ ಸ್ನೇಹದಿಂ[ದ] ಬಾಳುತ್ತದೆ. ಅಧಿಕೃತ ಸಿದ್ಧಾಂತದಿಂದ ಮುಕ್ತವಾಗಿರು[ವ] ಅದು ನನಗೆ ಹಿಡಿಸುತ್ತದೆ" ಎಂದು ಗಾಂಧೀಜಿಯವರು ಹೇಳಿದ್ದು ಸರ್ವಕಾಲಕ್ಕೂ ಪ್ರಸ್ತುತವಾಗಿದೆ.

"ಧರ್ಮದ ಹೆಸರಿನಲ್ಲಿ ನಾವು ಹಿಂದೂಗಳ[ು] ಬಾಹ್ಯಾಚರಣೆಗಳನ್ನು ಅಂಧಶ್ರದ್ಧೆಯ ಒಂದು ವಿಷಯವನ್ನಾ[ಗಿ] ಮಾಡಿದ್ದೇವೆ ಮತ್ತು ಧರ್ಮಗಳನ್ನು ಕೇವಲ ತಿನ್ನು[ವ] ಕುಡಿಯುವ ವಿಷಯವನ್ನಾಗಿ ಅದನ್ನು ಕೆಳದರ್ಜೆ[ಗೆ] ಇಳಿಸಿದ್ದೇವೆ" ಎಂದು ಗಾಂಧೀಜಿಯವರು ವಿಷಾದಿಸಿದ್ದಾ[ರೆ.] ಈ ವಿಷಾದ ನಮಗೆ ಅರ್ಥವಾಗದ್ದರಿಂದ ನಮ್ಮ ಸಮಾಜದ[ಲ್ಲಿ] ಗ್ರಾಹಂ ಸ್ಟೇನ್ಸ್‌ರಂಥ ಮಾನವತಾವಾದಿಗಳನ್ನು ಜೀವಂ[ತ] ಸುಡುವ ದಾರಾಸಿಂಗ್‌ಗಳು ಹುಟ್ಟುತ್ತಿದ್ದಾರೆ.

"ನಿಜವಾದ ಶುದ್ಧ ಚಳವಳಿಯು ಪ್ರತಿಯೊಬ್ಬನು ತ[ನ್ನ] ಸ್ವಂತ ಧರ್ಮದಲ್ಲಿ ಪರಿಪೂರ್ಣತೆ ತಲುಪಲು ಮಾಡು[ವ] ಪ್ರಯತ್ನವನ್ನು ಒಳಗೊಂಡಿರಬೇಕು. ಅಂಥ ಯೋಜನೆಯ[ಲ್ಲಿ] ಚಾರಿತ್ರ್ಯವು ಏಕಮಾತ್ರ ಪರೀಕ್ಷಾ ಸಾಧನವಾಗುತ್ತದೆ" ಎಂದ[ು] ಗಾಂಧೀಜಿಯವರು ಹೇಳಿದ್ದು ದಾರಾಸಿಂಗ್ ಅಂಥವರನ್[ನು] ಸೃಷ್ಟಿಸಿದವರಿಗೆ ಅರ್ಥವಾಗುವುದೆ?

"ಹಿಂದೂ ಧರ್ಮ ಮತ್ತು ಇತರ ಎಲ್ಲ ಧರ್ಮಗಳನ್[ನು] ತಕ್ಕಡಿಯಲ್ಲಿ ತೂಗಲಾಗುತ್ತಿದೆ. ಶಾಶ್ವತ ಸತ್ಯ ಒಂದೇ[,] ದೇವರು ಒಬ್ಬನೇ. ನಮ್ಮಲ್ಲಿ ಪ್ರತಿಯೊಬ್ಬರೂ ಪರಸ್[ಪರ] ಘರ್ಷಣೆಯಲ್ಲಿರುವ ಮತಗಳು ಮತ್ತು ಆಚಾರಗಳಿಂ[ದ] ದೂರ ಸರಿದು, ಸತ್ಯದ ನೇರಮಾರ್ಗ ಅನುಸರಿಸೋಣ[.] ಆಗ ಮಾತ್ರವೇ ನಾವು ನಿಜವಾದ ಹಿಂದೂಗಳು ಆಗುತ್ತೇವ[ೆ.] ತಮ್ಮನ್ನು ಸನಾತನಿಗಳೆಂದು ಕರೆದುಕೊಳ್ಳುತ್ತ ಅನೇಕ ಜ[ನ] ಭೂಮಿಯ ಮೇಲೆ ಓಡಾಡುತ್ತಿದ್ದಾರೆ. ಅವರಲ್ಲಿ ಎಷ[್ಟು] ಜನರನ್ನು ದೇವರು ಆಯ್ದುಕೊಳ್ಳುತ್ತಾನೆ ಎನ್ನುವುದನ್[ನು] ಯಾರು ಬಲ್ಲರು? ದೇವರ ಅನುಗ್ರಹವು ಅವನ ಸಂಕಲ್ಪವನ್[ನು] ನೆರವೇರಿಸಿ, ಅವನ ಸೇವೆ ಮಾಡುವವರಿಗೆ ದೊರೆಯುತ್ತ[ದೆ,] ಸುಮ್ಮನೆ ರಾಮ ರಾಮ ಎಂದು ವಟಗುಟ್ಟುವವರಿಗಲ್[ಲ]" ಎಂದು ಗಾಂಧೀಜಿಯವರು ಹೇಳಿದ್ದು ಬಾಬ[ರಿ] ಮಸೀದಿಯನ್ನು ಕೆಡವಿದವರಿಗೆ ಅರ್ಥವಾಗುವುದೆ?

"ಹಿಂದೂ ಧರ್ಮದ ಅತ್ಯಂತ ಪರಿಶುದ್ಧ ರೂಪದ[ಲ್ಲಿ] ಒಬ್ಬ ಬ್ರಾಹ್ಮಣ, ಒಂದು ಇರುವೆ, ಒಂದು ಆನೆ ಮತ್[ತು] ಒಬ್ಬ ಶ್ವಪಚ ಸಮಾನ ಸ್ಥಾನ ಹೊಂದಿರುತ್ತಾರೆ... ಹಿಂದ[ೂ] ಧರ್ಮವು ಇಡೀ ಮಾನವಕುಲಕ್ಕೆ ಮಾತ್ರ ಸೀಮಿ[ತ]ವಾದುದಲ್ಲ; ಜೀವಂತವಾಗಿರುವ ಎಲ್ಲದರ ಭ್ರಾತೃತ್ವವನ್[ನು] ಅದು ಒತ್ತಿ ಹೇಳುತ್ತದೆ. ಮನುಷ್ಯ ಮನುಷ್ಯನ ನಡು[ವೆ] ನಾವು ನಿಜವಾದ, ಜೀವಂತವಾದ ಸಮಾನತೆಯನ್[ನು] ಪುನಃಸ್ಥಾಪಿಸಿದ ಕ್ಷಣವೇ ಮಾನವನ ಮತ್ತು ಇಡೀ ಸೃಷ್ಟಿಯ[] ನಡುವೆ ಸಮಾನತೆಯನ್ನು ಸ್ಥಾಪಿಸಲು ನಾವು ಶಕ್ತರಾಗುತ್ತೇವ[ೆ.] ಆ ದಿನ ಬಂದಾಗ ನಾವು ಭೂಮಿಯ ಮೇಲೆ ಶಾಂತಿಯನ್[ನು] ಮತ್ತು ಮನುಷ್ಯರ ಬಗ್ಗೆ ಸದ್ಭಾವನೆಯನ್ನು ಹೊಂದುತ್ತೇವ[ೆ"] ಎಂದು ಗಾಂಧೀಜಿಯವರು ಹೇಳಿದ್ದನ್ನು ನಾವು ಮನ[ನ] ಮಾಡಬೇಕಿದೆ.


"ಪ್ರಭುವಾದ ದೇವರು ಈ ವಿಶ್ವದಲ್ಲಿರುವ ಎ[ಲ್ಲವನ್ನೂ] ವ್ಯಾಪಿಸಿದ್ದಾನೆ. ಆದ್ದರಿಂದ ತ್ಯಾಗಿಗಳಾಗಿ ಮತ್ತು ಎಲ್ಲವನ್[ನೂ] ಅವನಿಗೆ ಸಮರ್ಪಿಸಿ. ಅನಂತರ ನಿಮ್ಮ ಪಾಲಿ[ಗೆ] ಬರಬಹುದಾದುದನ್ನು ಪಡೆಯಿರಿ. ಯಾರದೇ ಆಸ್ತಿಗೆ ಆ[ಸೆ] ಪಡಬೇಡಿ. – ಈಶೋಪನಿಷತ್ತಿನ ಈ ಒಂದು ಮಂತ್ರವನ್[ನು] ನೆನಪಿಡಿ. ಇತರ ಧರ್ಮಗ್ರಂಥಗಳ ವಿಷಯವನ್ನು ಪೂರ್ತಿ[] ಮರೆತುಬಿಡಿ. ಧರ್ಮಗ್ರಂಥಗಳ ಸಾಗರದಲ್ಲಿ ನೀವು ಮುಳು[ಗಿ] ಉಸಿರುಗಟ್ಟಬಹುದು. ವಿನಯವಂತರಾಗಿ ವಿವೇಕಿಗಳಾಗಿದ್[ದರೆ] ಅವು ಪಂಡಿತರಿಗೆ ಒಳ್ಳೆಯವೇ. ಆದರೆ ಸಾಮಾ[ನ್ಯ] ಮನುಷ್ಯನಿಗೆ ಸಾಗರವನ್ನು ದಾಟಲು ಈ ಮಂತ್ರವನ್[ನು] ಬಿಟ್ಟು ಬೇರಾವುದರ ಅಗತ್ಯವಿಲ್ಲ" ಎಂದು ಗಾಂಧೀ[ಜಿ]ಯವರು ತಮ್ಮ ಪರಿಕಲ್ಪನೆಯ ಹಿಂದೂ ಧರ್ಮವನ್[ನು] ಮೇಲಿನ ಈಶೋಪನಿಷತ್ತಿನ ಒಂದು ಮಂತ್ರದ[ಲ್ಲಿ] ಹಿಡಿದಿಟ್ಟರು. ಆ ಮೂಲಕ ತಮ್ಮ ಕಾಲದ ಹಿಂದ[ೂ] ಧರ್ಮದ ಆಚರಣೆಯನ್ನು ಪರಿಶೀಲಿಸಿದರು. "ಇಂದ[ು] ನಾವು ನೋಡುವುದು ಶುದ್ಧವಾದ ಹಿಂದೂ ಧರ್ಮವನ್ನ[ಲ್ಲ,] ಅದರ ವಿಕಟಾನುಕರಣೆಯನ್ನು ಮಾತ್ರ" ಎಂದು ನಿಟ್ಟುಸಿ[ರು] ಬಿಟ್ಟರು.

ಗಾಂಧೀಜಿಯವರ ಈ ನಿಟ್ಟುಸಿರಿನಲ್ಲಿ ಅಡಗಿರು[ವ] ಹಿಂದೂ ಧರ್ಮ ಪ್ರತಿ ಮನುಷ್ಯನೊಳಗಿನ ಧರ್ಮವಾಗ[ಲಿ.] ಆ ಮೂಲಕ ಎಲ್ಲ ಧರ್ಮಗಳ[ು] ಒಂದೇ ಎಂಬುದು ಜನಸಮುದಾ[]ಯಕ್ಕೆ ಅರಿವಾಗಲಿ. ಕೋಮುವಾ[ದ] ಅಳಿಯಲಿ, ಮಾನವೀಯತ[ೆ] ಉಳಿಯಲಿ.



● ರಂಜಾನ್ ದರ್ಗಾ

ಕಾಳಿಯ ನಡಿಗೆ ಶಿವನ ಎದೆಗೆ



ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ದೇವೀಭಾಗವತವನ್ನು ಓದಿದವರಿಗೆ ತಿಳಿಯುವ ಬಹು ಸ್ಪಷ್ಟವಾದ ...ವೆಂದರೆ, ದೇವಿಯು ಒಬ್ಬೊಂಟಿಯಾಗಿದ್ದವಳು ಹಾಗೂ ಮುಂದೆ ಅವಳೇ ...ಹ್ಮ, ವಿಷ್ಣು ಮತ್ತು ಮಹೇಶ್ವರರ ತಾಯಿಯಾದಳು. ಅವಳೇ ಅವರನ್ನು ...ಜಿಸಿ, ಪಾಲಿಸಿ ಪೊರೆದವಳು. ಇದೊಂದು ಸುಂದರ ಪರಿಕಲ್ಪನೆ ಮತ್ತು ...ಕ್ಕೆ ಬಹು ಹತ್ತಿರಕ್ಕೆ ಇರುವ ವಿಚಾರ.

ಆದಿಮ ಕಾಲದ ಆ ಮಾತೆ

ಆದಿವಾಸಿಗಳಿದ್ದ ಆದಿಮ ಕಾಲದಲ್ಲಿ ಹೆಣ್ಣೆಂಬುವಳೇ ಬದುಕನ್ನು ...ಹಿಸುವ ಗುಂಪಿನ ಒಡತಿಯಾಗಿದ್ದು, ಅವಳು ಅಲ್ಲಿ ಲಭ್ಯವಿದ್ದ ಮತ್ತು ...ಮರ್ಥ್ಯವಿದ್ದ ಪುರುಷರ ನೆರವಿನಿಂದ ಮಾಡಿಕೊಳ್ಳುತ್ತಿದ್ದ ...ತಾನೋತ್ಪತ್ತಿಯಿಂದಾಗಿ ಅವಳ ಪಂಗಡವೂ ಬೆಳೆಯುತ್ತಿತ್ತು, ಅವಳನ್ನು ... ಇಂದಿನ ಪರಿಭಾಷೆಯಲ್ಲಿ ಹೆರುವ ಕಾರಣದಿಂದ ತಾಯಿ ಎಂಬ ...ರಿನಿಂದ ಕರೆಯುತ್ತೇವೆ. ಈ ಹೆಸರನ್ನು ಹೊರತು ಪಡಿಸಿದರೆ ಅವಳು ... ಹೆಣ್ಣು. ಆ ಹೆಣ್ಣು ತನ್ನ ಸಂತಾನಾಭಿವೃದ್ಧಿಗೆ ಮತ್ತು ಅದರಿಂದ ... ಗುಂಪು ಬೆಳೆಯಬೇಕಾದ ಅಗತ್ಯದಿಂದ ಅದಕ್ಕೆ ಲೈಂಗಿಕ ಕ್ರಿಯೆಗೆ ...ವಾ ಸೃಷ್ಟಿಯ ಕಾರಣಕ್ಕಾಗಿ ಒಬ್ಬ ಪುರುಷನನ್ನು ತಾನು ...ಯ್ದುಕೊಳ್ಳುತ್ತಿದ್ದಳು. ಆ ಪುರುಷನು ಪುಂಸತ್ವದಲ್ಲಿ ಸಮರ್ಥನೂ, ...ಳಿಗೆ ತಕ್ಕುನಾದ ಗಟ್ಟಿಗನೂ ಆಗಿರಬೇಕಿತ್ತು, ನಂತರ ಮುಂದಿನದು ...ಸೇರುತ್ತಿತ್ತು. ಆಯ್ಕೆಯು ಸ್ತ್ರೀಯದ್ದಾಗಿತ್ತು, ಸ್ತ್ರೀಯು ಮೇಲಿನ ಸ್ಥಾನವನ್ನು ...ಂದಿದ್ದು, ಆಯ್ಕೆಗೊಳಗಾಗುವ ಪುರುಷನು ಎರಡನೆಯ ಸ್ಥಾನದಲ್ಲಿದ್ದ. ...ಲೂ ಪ್ರಕೃತಿಯಲ್ಲಿ ಹೆಣ್ಣುಪ್ರಾಣಿಗಳದೇ ಮೇಲುಗೈ. ಸುಂದರವಾದ ...ರವನ್ನು ಹೊಂದಿರುವ ಗಂಡುಸಿಂಹವು ಹೆಣ್ಣು ಸಿಂಹವು ...ಜೆಯಾಡುವುದನ್ನು ಕಾಯುತ್ತದೆ. ಒಂದು ಹೆಣ್ಣು ಪ್ರಾಣಿಯು ...ವತಿಯಾದರೆ, ಗಂಡು ಪ್ರಾಣಿಗಳ ಬಹುದೊಡ್ಡ ದಂಡೇ ಅಲ್ಲಿ ...ಯುತ್ತದೆ. ಹೆಣ್ಣು ಪ್ರಾಣಿಯ ಮನವೊಲಿಸಿಕೊಳ್ಳಲು ನಾನಾ ರೀತಿಯಲ್ಲಿ ...ರ್ಷಿಸಲು ಯತ್ನಿಸುತ್ತವೆ. ಕೆಲವೊಮ್ಮೆ ಗಂಡು ಪ್ರಾಣಿಗಳ ನಡುವೆ ...ದೊಡ್ಡ ಹೋರಾಟವೇ ನಡೆದು ವಿಜಯಿಯಾದ ಪ್ರಾಣಿ ಹೆಣ್ಣಿನ ... ನಡೆಯುತ್ತದೆ. ನಗರಗಳಲ್ಲೂ ಫಲಕ್ಕೆ ಬರುವ ಹೆಣ್ಣುನಾಯ ...ದೆ ನೆರೆಯುವ ಗಂಡುನಾಯಿಗಳನ್ನೂ, ಅವು ಹಗಲು, ರಾತ್ರಿಯೆನ್ನದೇ ...ಯುವುದನ್ನೂ, ಅವುಗಳಲ್ಲಿ ನಡೆಯುವ ಹೋರಾಟವನ್ನೂ ಯಾರಾದರೂ ...ನಿಸಿರುತ್ತಾರೆ. ಅಷ್ಟಕ್ಕೇ ಹೆಣ್ಣುಪ್ರಾಣಿ ಶರಣಾಗಿ ಬಿಡುವಂತಹದ್ದೇನಲ್ಲ, ...ಸಬಹುದು, ಇಲ್ಲದಿರಬಹುದು. ನಂತರ ಪ್ರಕೃತಿಯ ನೀತಿಯಂತೆ ... ಸಮ್ಮತಿಸುತ್ತದೆ. ಉಳಿದವು ಸುಮ್ಮನಾಗಲೇಬೇಕು.

...ಮನುಷ್ಯನ ಬದುಕಿನ ಕ್ರಮಕ್ಕೆ ಮೊದಲ ಮಾದರಿ ಪ್ರಾಣಿಗಳೇ. ... ಅಂದು – ಸಾಧ್ಯವಾದಷ್ಟು ಇಂದೂ – ನೈಸರ್ಗಿಕವೇ. ಒಂದು ... ಅವುಗಳಲ್ಲಿ ಯಾವುದೇ ಅನೈಸರ್ಗಿಕವಾದ ನಡವಳಿಕೆಯೇನಾದರೂ ...ಬಂದರೆ, ಅದು ಮನುಷ್ಯ ಸಮಾಜದ ಒಡನಾಟದಿಂದ ಮಾತ್ರ.

...ಪ್ರಕೃತಿಗೆ ಯಾವುದೇ ಉದ್ದೇಶಪೂರ್ವಕವಾದ ಶಿಷ್ಟಾಚಾರಗಳಿಲ್ಲ, ... ತನ್ನಲ್ಲಿರುವ ಸ್ವಾಭಾವಿಕವಾದ ಧರ್ಮ(ಗುಣ)ದಂತೆ ಪ್ರಕ್ರಿಯೆಗೆ ...ಳಾಗಿರುತ್ತದೆ.

...ಇರಲಿ, ಹೆಣ್ಣು ಗಂಡನ್ನು ಆಯ್ದುಕೊಳ್ಳುವುದು ಬರಿಯ ಆದಿಮ ಕಾಲಕ್ಕೆ ...ಮಿತವಾಗಿದ್ದು, ನಮ್ಮ ದೃಷ್ಟಿಯಿಂದ ತಪ್ಪಿಸಿಕೊಂಡು ತೀರ ದೂರಕ್ಕೆ ...ಗಿರುವಂತಹುದ್ದೇನಲ್ಲ. ಸ್ವಯಂವರವು ಅದರ ಮುಂದುವರಿದ ನಾಗರಿಕ ...ಮಾಜದ್ದೇ ಭಾಗವಾಗಿದ್ದು, ಗಂಡುಗಳ ದಂಡು ಒಂದು ಹೆಣ್ಣಿಗಾಗಿ ...ಯುವಂತಿದ್ದು, ಹೆಣ್ಣು ಅವರಲ್ಲೊಬ್ಬರಿಗಾರಿಗೋ ವರಿಸುವಂತಿತ್ತು ಅಥವಾ ...ರ್ಯ ಮತ್ತು ಅಪ್ರತಿಮ ಸಾಹಸವನ್ನು ಪ್ರದರ್ಶಿಸಿದ ಗಂಡು ತನ್ನ ...ಮರ್ಥ್ಯದಿಂದಾಗಿ ಹೆಣ್ಣನ್ನು ಹೊಂದುವ ಅರ್ಹತೆಯನ್ನು ಪಡೆಯುತ್ತಿದ್ದ. ...ಜಗತ್ತಿಗೆ ಹೋಲುವ ಈ ಬಗೆಯ ನಿದರ್ಶನಗಳೇನೂ ನಮ್ಮ ...ಗಳಲ್ಲಾಗಲಿ, ಪೌರಾಣಿಕ ಇತಿಹಾಸಗಳಲ್ಲಾಗಲಿ ನಮಗೆ ಹೊಸತಲ್ಲ.


...ಆದರೆ, ಪುರುಷ ಪ್ರಧಾನ ಸಮಾಜಕ್ಕೆ ಆದಿಯಲ್ಲಿ, ತನ್ನ ಬಾಹುಬಲ ...ಸ್ತ್ರ ಸಾಮರ್ಥ್ಯದ ಮೇಲೆ ನಂಬುಗೆಯಿದ್ದ ಶಕ್ತಿವಂತನು ಇಂತಹ ...ಯಂವರಗಳಿಂದ ಹೆಣ್ಣುಗಳನ್ನು ತನ್ನ ಇಚ್ಛೆಗೆ ತಕ್ಕಂತೆ ಅಪಹರಿಸಿಕೊಂಡು ...ಗಲು ಪ್ರಾರಂಭಿಸಿದ. ಇರಲಿ, ಇದರ ಬಗ್ಗೆ ನಂತರ ವಿಚಾರಿಸೋಣ. ...ದಿರೆ ವಿಷಯವು ಕಾಳಿಯನ್ನು ಬಿಟ್ಟುಬಿಡುತ್ತದೆ.

...ದೇವಿಯ ಭಾಗವತಕ್ಕೇ ಬಂದರೆ, ಒಬ್ಬೊಂಟಿಯಾಗಿರುವ ದೇವಿಯು ...ದೆ ಅಸುರಾದಿ ಸಂಹಾರದ ನಂತರ ಶಿವನ ಹೆಂಡತಿ ಪಾರ್ವತಿಯಲ್ಲಿ ...ಗುತ್ತಾಳೆ. ದೇವಿಗೆ ಸಂಬಂಧಪಟ್ಟ ಕಥೆಗಳೇನಕವು ಬೇರೆ ಬೇರೆ ರೀತಿಯಲ್ಲಿ ...ನೊಂದಿಗೆ ಸಂಬಂಧಿತವಾಗುವುದನ್ನು ಹೇಳುವುದಾದರೂ, ಅವಳೇ ಮೊದಲು ...ವುದರಲ್ಲಿ ಯಾವ ಭಿನ್ನಾಭಿಪ್ರಾಯವೂ ಇಲ್ಲ, ಅವಳೇ ಮಹೇಶ್ವರನ ... ಎಂದು ಹೇಳುವುದಲ್ಲದೇ ಅವಳೇ ಮುಂದೆ ಅವನ ಹೆಂಡತಿಯಾಗುವ ...ನ್ನು ಸಾಕ್ಷೀಕರಿಸಿದರೆ, ಆದಿಮ ಕಾಲದ ಹೆಣ್ಣಿನ ಮೇಲ್ಮೈಯು, ಅವಳ ...ನ ಪದ್ಧತಿಯ ಸಂಕೇತವು ಕಾಣುತ್ತದೆ.

ಕಾಳಿಯೆಂಬ ಪ್ರಕೃತಿ

...ಪರಮಹಂಸ ಯೋಗಾನಂದರು ತಮ್ಮ ಯೋಗಿಯ ಆತ್ಮಕಥೆಯಲ್ಲಿ ಕಾಳಿಯ ಬಗ್ಗೆ ಹೀಗೆ ವಿವರಿಸುತ್ತಾರೆ. "ಶಾಶ್ವತಳಾದ ಪ್ರಕೃತಿ ಮಾತೆಯ ಸ್ವರೂಪಿಯಾದ ದೇವತೆಯೇ ಕಾಳಿ" ಎಂದು ಮುಂದುವರೆದು "ಪ್ರಕೃತಿಯ ಶಾಶ್ವತ ತತ್ವವನ್ನು ಕಾಳಿಯು ಪ್ರತಿನಿಧಿಸಲಿದ್ದು, ಮಲಗಿದ ಶಿವನ ಅಥವಾ ಅನಂತತೆಯ ಮೇಲೆ ನಿಂತ ನಾಲ್ಕು ತೋಳುಗಳುಳ್ಳ ಹೆಣ್ಣನ್ನಾಗಿ ಆಕೆಯನ್ನು ಸಾಂಪ್ರದಾಯಿಕವಾಗಿ ಚಿತ್ರಿಸುತ್ತಾರೆ. ಏಕೆಂದರೆ ಪ್ರಕೃತಿಯ ಅಥವಾ ಇಂದ್ರಿಯಗೋಚರ ವಿಶ್ವದ ಕಾರ್ಯಚಟುವಟಿಕೆಗಳು ಉಗಮವಾಗುವುದು ಅವ್ಯಕ್ತ ಪರಮಾತ್ಮನಿಂದ. ನಾಲ್ಕೂ ಕೈಗಳು ಮೂಲಾಧಾರಗಳ ಗುಣಗಳ ಸಂಕೇತವಾಗಿವೆ. ವಸ್ತುವಿನ ಅಥವಾ ಸೃಷ್ಟಿಯ ಅತಿ ಮುಖ್ಯ ದ್ವೈತ ಗುಣಗಳಲ್ಲಿ ಎರಡು ಅನುಗ್ರಹಾರ್ಥ ಗುಣಗಳು, ಎರಡು ನಿಗ್ರಹಾರ್ಥ ಗುಣಗಳು" ಎಂದೂ ಪಾರಮಾರ್ಥಿಕವಾಗಿ ವಿವರಿಸುತ್ತಾರೆ. ಅನುಗ್ರಹದ ಅಭಿಮಾನಕ್ಕಾಗಿ ಮತ್ತು ನಿಗ್ರಹದ ಅಧಿಕಾರಕ್ಕಾಗಿ ಸ್ತ್ರೀ ಮತ್ತು ಪುರುಷ ಸಮಾಜಗಳ ನಡುವಿನ ಸಂಘರ್ಷವಂತೂ ಯಾವಾಗಲೂ ಇದೆ.

ಇರಲಿ, ಗೋಚರಕ್ಕೆ ಪ್ರಕಟವಾಗಿರುವ ಪ್ರಕೃತಿಯನ್ನು ದೇವಿಯೆಂದು ಒಪ್ಪಿಕೊಂಡಾದ ಮೇಲೆ, ನಂತರದ ವಿಕಾಸ ಕ್ರಮದಲ್ಲಿ ಪುರುಷನ ಮೇಲ್ಮೈ ಸಾಧಿಸುವ ಹಂತದ ನಂತರ ಶಿವನನ್ನು, ಅಂದರೆ ಪುರುಷನನ್ನು ಕಾಲನನ್ನಾಗಿಸಿ,



ಅವನನ್ನು ಪ್ರಕೃತಿಗೂ ಮೀರಿದ ಸೆಲೆಯನ್ನಾಗಿ ಚಿತ್ರಿಸಿರುವ ಅಂಶವನ್ನು ಇಲ್ಲಿ ಗಮನಿಸಿ. ಪ್ರಕೃತಿಯನ್ನು ವ್ಯಕ್ತವನ್ನಾಗಿ ಪರಿಗಣಿಸಿದ ಪರಮಹಂಸರು ಅವ್ಯಕ್ತ ಸೆಲೆಯನ್ನು ಅನಂತವೆಂದೂ, ಅದನ್ನು ಪುರುಷವೆಂದೂ ಕರೆದುಬಿಟ್ಟರು.

ಕಾಳಿಯು ಶಿವನ ಎದೆಯನ್ನು ತುಳಿಯುತ್ತಿರುವಲ್ಲಿ ಅವರ ದೃಷ್ಟಿಯು ಆಕೆಯು ಅಧಿಕಾರದಲ್ಲಿ ಮೇಲ್ಪನದಿಂದ ಇರುವಳಾಗಿ ಕಾಣದೇ, ಶಿವನಿಂದ ವಿಕಾಸವಾಗಿರುವ ರೀತಿಯಲ್ಲಿ ಅಥವಾ ಅವನಿಂದ ಅವಳು ಪಡೆಯುವ ರೀತಿಯಲ್ಲಿ ನೋಡಿದ್ದು ಏಕೆ ಎಂದು ಪ್ರಶ್ನೆ ಮೂಡುತ್ತದೆ. ಬಹುಶಃ ಪವಡಿಸಿರುವ ಶಿವನ ಮೇಲೆ ಸೌಮ್ಯಳಾಗಿ ಕುಳಿತಿರುವ ರಾಜರಾಜೇಶ್ವರಿಯ ಚಿತ್ರಕ್ಕೆ ಅವರ ವಿವರಣೆ ಹೊಂದಬಹುದೇನೋ ಎಂದು ನನಗನ್ನಿಸುತ್ತದೆ.

ಇದೇ ಪರಮಹಂಸ ಯೋಗಾನಂದರು ಮುಂದೆ ಘಟನೆಯೊಂದನ್ನು ವಿವರಿಸುತ್ತಾ, ರಾಮಕೃಷ್ಣ ಪರಮಹಂಸರ ಶಿಷ್ಯರಾದ ಮಾಸ್ಟರ್ ಮಹಾಶಯ (ಮಹೇಂದ್ರನಾಥಗುಪ್ತ)ರವರೊಂದಿಗೆ ಕೊಲ್ಕೊತ್ತದ ದಕ್ಷಿಣೇಶ್ವರದ ಕಾಳಿ ದೇವಾಲಯದಲ್ಲಿ ಇಬ್ಬರೂ ಒಟ್ಟಿಗೆ ನಡೆಯುವ ಸಂದರ್ಭದಲ್ಲಿ "ಮಾಸ್ಟರ್ ಮಹಾಶಯರು ಆನಂದಪರವಶತೆಯಿಂದ ಬೆಳಗಿದರು. ಅವರು ತಮ್ಮ ಪ್ರೇಯಸಿಯೊಡನೆ ಅನಂತ ಪ್ರಣಯದಲ್ಲಿ ತೊಡಗಿದರು" ಎಂದು ನಮೂದಿಸುತ್ತಾರೆ. ತಾಯಿ ಎಂದು ಕರೆಯಲ್ಪಡುವ ಕಾಳಿಯು ಪ್ರೇಯಸಿಯೂ ಆದಳು. ಕಾಳಿಯನ್ನು ಯೋಗಾನಂದರು ಪ್ರಕೃತಿಯೆಂದು ಕರೆದುದರಿಂದ ದೇವಿಯೊಡನೆ ಈ ಡಿವೈನ್ ರೊಮ್ಯಾನ್ಸ್ ಸಾಧ್ಯವಾಯಿತು. ಶಂಕರಾಚಾರ್ಯರು ದೇವಿಯನ್ನು ತಾಯಿ ಎಂದು ಕರೆಯುವದರ ಜೊತೆಗೆ ಶಯ್ಯಾಗೃಹದೊಳಗಿರುವ ಪ್ರೇಯಸಿಯನ್ನಾಗಿ ವರ್ಣಿಸುವುದು ಇಲ್ಲಿ ನೆನಪಿಗೆ ಬರುತ್ತದೆ.

ಸಂಘರ್ಷ ಮತ್ತು ಸಂಧಾನಗಳು

ಇನ್ನು ಡಿ.ಡಿ.ಕೋಸಾಂಬಿಯವರು ಕಾಳಿಘಾಟಿನ ವರ್ಣಚಿತ್ರಗಳಲ್ಲಿ ಮತ್ತು ಕೆಲವು ಇತರ ಶಿಲ್ಪಗಳಲ್ಲಿರುವ ಶಿವನ ಎದೆಯ ಮೇಲೆ ಕಾಲಿಟ್ಟಿರುವ ಕಾಳಿಯ ಚಿತ್ರವನ್ನು ಪರಿಗಣಿಸುತ್ತಾ ತಮ್ಮ ಪುರಾಣ ಮತ್ತು ವಾಸ್ತವ ಪುಸ್ತಕದಲ್ಲಿ "ಮೊದಮೊದಲು ಮೂರ್ತವಾದಂತಹ ಒಂದು ನಿರ್ದಿಷ್ಟ ರೂಪವಾಗಲಿ ಹಾಗೂ ಆಕಾರವಾಗಲಿ ಇಲ್ಲದಂತಹ ಪಂಥ ಶಿಲೆಗಳನ್ನು ಶಿವನೆಂದು ಪೂಜಿಸಲಾಗುತ್ತಿತ್ತು, ನಂತರದಲ್ಲಿ ಈ ಆಚರಣೆ ಹಲವಾರು ಸಮಾನಾಂತರ ಹಾದಿಗಳಲ್ಲಿ ಬೆಳೆಯುತ್ತಾ ಕೊನೆಯಲ್ಲಿ ಉದಾತ್ತೀಕರಣಗೊಂಡು, ಶಿವನು ಶ್ರೇಷ್ಠ (ಕೆಲವರ ಪಾಲಿಗೆ) ದೇವತೆಯಾಗಿ ರೂಪುಗೊಂಡ ಈ ರೀತಿಯಾಗಿ ಬೆಳೆಯುತ್ತಿದ್ದಾಗ ಒಂದು ಹಂತದಲ್ಲಂತೂ, ಶಿವನ ಸಮಾನರೂಪದಾದ ದೇವತೆಗಳು ಹಾಗೂ ಅವರಿಗಿಂತ ಮುಂಚೆ ತೀರಾ ಪ್ರಮುಖರಾಗಿದ್ದ ಮಾತೃದೇವತೆಗಳ ನಡುವೆ ತುಂಬಾ ಗಂಭೀರವಾದ ಸಂಘರ್ಷವೇ ನಡೆದುಹೋಗಿದೆ" ಎಂದು ಗುರುತಿಸುತ್ತಾ "ಈ ಸಂಘರ್ಷದ ತೀವ್ರತೆಯನ್ನು ಕಡಿಮೆ ಮಾಡುವ ಉದ್ದೇಶದಿಂದಲೇ ಸೋತು ನೆಲಕಚ್ಚಿರುವ ಶಿವನ ಶರೀರವನ್ನು, ಪ್ರಾಯಶಃ ಅವನ ಶವವನ್ನು, ಕಾಳಿಯ ಅವತಾರದಲ್ಲಿರುವ ಪಾರ್ವತಿಯು ತುಳಿಯುವ ಹಾಗೂ ಆತ ಮತ್ತೆ ಜೀವ ಪಡೆದಂತಿರುವ ಈ ಚಿತ್ರಗಳಿವೆ ಎಂಬುದು ತೀರಾ ಸ್ಪಷ್ಟ. ಮುಂದೆ ಪಗಡೆಯಾಟದಲ್ಲಿ ಪಾರ್ವತಿಯು ಶಿವನ ಬಳಿ ಇದ್ದುದೆಲ್ಲವನ್ನೂ ಕಿತ್ತುಕೊಂಡಳು ಎಂಬ ಪ್ರತೀತಿಯೂ ಇದೆ. ಆದರೆ ಇದರಿಂದ ಅವರಿಬ್ಬರ ವೈವಾಹಿಕ ಜೀವನಕ್ಕೆ ಏನೂ ತೊಂದರೆಯಾಗದೆ ಅದು ಮುಂದುವರೆಯಿತು" ಎಂದು ಮುಂದುವರಿಸುತ್ತಾರೆ. ಶಿವನ ದೇಹವನ್ನು ತುಳಿಯುತ್ತಿರುವ ಕಾಳಿಯೂ, ಬಿದ್ದಿರುವ ಶಿವನಿಂದ ಮತ್ತೊಬ್ಬ ಶಿವನು ಯುವಕನಾಗಿ ಮೇಲೇಳುವ ಚಿತ್ರವನ್ನು ಉದಾಹರಿಸುತ್ತಾರೆ. ಆದರೆ, ಪ್ರಾಕೃತ ಆದಿಮ ಆಚರಣೆಗಳಿಂದಲೇ ಭಾರತದ ಧಾರ್ಮಿಕ ತತ್ವಶಾಸ್ತ್ರವು ಬೆಳೆದು ಬಂದಿತು ಎಂಬ ಅಂಶವನ್ನು ಗಮನದಲ್ಲಿಟ್ಟುಕೊಳ್ಳುತ್ತಾ, ಆದಿಮ ಕಾಲದ ಅಧಿಕಾರಿಣಿಯು ತನ್ನ ಅಸಮರ್ಥ ಹಾಗೂ ಹಳೆಯ ಸಂಗಾತಿಯನ್ನು ಬಿಟ್ಟು ಸಮರ್ಥ ಹಾಗೂ ಯುವ ಸಂಗಾತಿಯನ್ನು ಪರಿಗ್ರಹಿಸುತ್ತಿದ್ದರು ಎಂದು ವಿಶ್ಲೇಷಿಸಬಹುದು.

ಸೆಕೆಂಡ್ ಸೆಕ್ಸ್

ಹಳೆಯ ಒಡಂಬಡಿಕೆಯ (ಬೈಬಲ್) ಆದಿಕಾಂಡದಲ್ಲಿಯೂ ಸರ್ವೇಶ್ವರನು ಪುರುಷನಾಗಿ ಸಂಭೋದಿಸಲ್ಪಡುತ್ತಾನೆ. ಪರಮಹಂಸ ಯೋಗಾನಂದರದೂ ಅದೇ ಧ್ವನಿ. "ದೇವರಾದ ಸರ್ವೇಶ್ವರ ಮನುಷ್ಯನು ಒಂಟಿಯಾಗಿರುವುದು ಒಳ್ಳೆಯದಲ್ಲ, ಅವನಿಗೆ ಸರಿಬೀಳುವ ಸಹಕಾರಿಯನ್ನು ಸೃಷ್ಟಿ ಮಾಡುವೆನು" ಎಂದು ಮುಂದುವರಿದ ದೇವರು "ಮನುಷ್ಯನಿಗೆ ಗಾಢನಿದ್ರೆಯನ್ನು ಬರಮಾಡಿದನು. ಅವನು ನಿದ್ರಿಸುತ್ತಿರುವಾಗ ಅವನ ಪಕ್ಕೆಯ ಎಲುಬುಗಳಲ್ಲಿ ಒಂದನ್ನು ತೆಗೆದುಕೊಂಡು ಮಹಿಳೆಯನ್ನಾಗಿ ಮಾಡಿದನು. ನರನಿಂದ ಉತ್ಪತ್ತಿಯಾದವಳನ್ನು ನಾರಿ ಎಂದು ಕರೆಯುವ ಈ ತಾತ್ವಿಕ ಕಥಾನಕವು ಸ್ತ್ರೀಯ ಲಿಂಗಾಸ್ತಿತ್ವವನ್ನು ದ್ವಿತೀಯಗೊಳಿಸಿದರು. ಆದರೆ ಇದಕ್ಕೆ ವಿರುದ್ಧವಾಗಿ ದೇವಿ ಭಾಗವತದಲ್ಲಿ ಪುಲ್ಲಿಂಗವು ಎರಡನೆಯ ಲಿಂಗವಾಗಿ ಪುರುಷನಾಗಿದ್ದಾನೆ. ಅಂದರೆ ಕಾಳಿಯಿಂದ ಕಾಲನಾಗಿರುವನು ಶಿವ.

ರುರು ಎಂಬ ರಾಕ್ಷಸ ಸ್ವರ್ಗದ ಮೇಲೆ ದಾಳಿ ಮಾಡಿದಾಗ ದೇವತೆಗಳು ದೇವಿಯ ಮೊರೆ ಹೋದರು. ದೇವಿಯು ನಕ್ಕು ತನ್ನ ಬಾಯನ್ನು ಅಗಲವಾಗಿ ತೆರೆದಾಗ ಅದರಿಂದ ಅವಳ ಸೈನ್ಯವು ಹೊರಬಂದು ರುರುವಿನ ಸೇನೆಯನ್ನು ಸವರಿಬಿಟ್ಟಳು. ಯುದ್ಧಾನಂತರ ದೇವಿಯ ಹಸಿವು ತೀರದೇ ಮತ್ತಷ್ಟು ಆಹಾರಕ್ಕಾಗಿ ನೋಡಿದಾಗ, ಪಶುವಿನ ವಾಸನೆ ಹೊಡೆಯುತ್ತಿರುವ ಶಿವನನ್ನು ತಿನ್ನಲು ಮುಂದಾದಳು. ಆದರೆ ಶಿವ 'ತಮ್ಮ ಸ್ಪರ್ಶದಿಂದ ಕಳಂಕಗೊಳಿಸುವ ಎಲ್ಲಾ ಗರ್ಭಿಣಿ ಸ್ತ್ರೀಯರನ್ನೂ, ಭ್ರೂಣಗಳನ್ನೂ, ನವಜಾತರನ್ನೂ ಮತ್ತು ಸದಾ ಗೋಳಾಡುವ ಹೆಂಗಸರನ್ನೆಲ್ಲಾ' ತಿಂದು ತೃಪ್ತಿಪಡಲು ಸೂಚಿಸುತ್ತಾನೆ. ಆದರೆ ದೇವಿಯು ಅದನ್ನು ನಿರಾಕರಿಸುವಳು. ಕೊನೆಗೆ ಶಿವ ತನ್ನ ವೃಷಣಗಳನ್ನೇ ಅವಳಿಗೆ ಕೊಟ್ಟು, ಅವಳು ಅವನ್ನು ತಿಂದು ಸಂತೃಪ್ತಳಾದ ಕಥೆಯು ಪದ್ಮಪುರಾಣ, ಲಿಂಗಪುರಾಣ ಮತ್ತು ಮತ್ಸ್ಯ ಪುರಾಣಗಳಲ್ಲಿ ಉಲ್ಲೇಖಿತವಾಗಿದೆ. ಈ ಸೂಚಕ ಕಥೆಯಲ್ಲಿ ಕೋಸಾಂಬಿಯವರು ಹೇಳುವಂತಹ ಶಿವಾರಾಧನ ಸಂಪ್ರದಾಯ ಮತ್ತು ಮಾತೃ ಸಂಪ್ರದಾಯದವರ ನಡುವಿನ ಘರ್ಷಣೆ ಮತ್ತು ಪರಸ್ಪರ ಮೇಲ್ಮೈ ಸಾಧಿಸುವ ಪ್ರಯತ್ನವು ಧ್ವನಿಸುತ್ತದೆ.

ರಕ್ತಬೀಜಾಸುರನ ರಕ್ತದ ಹನಿಯೊಂದು ಕೆಳಗೆ ಬಿದ್ದಕೂಡಲೇ ಅವುಗಳಿಂದ ಉದ್ಭವಿಸುವ ರಕ್ತಬೀಜರನ್ನು ಕೊಲ್ಲುವ ಸಲುವಾಗಿ ನಾಲಿಗೆಯನ್ನು ತೆರೆದು ರಕ್ತವನ್ನು ಕುಡಿಯುವ ಕಾಳಿಯು ದುರ್ಗಾ ಸಪ್ತಶತಿಯಲ್ಲಿ ಬರುತ್ತದೆ. ಅದೇ ಮುಂದುವರಿದಂತೆ, ಲಿಂಗಪುರಾಣದಲ್ಲಿ; 'ರಕ್ತವನ್ನು ಕುಡಿದು ಕಾಳಿಯು ತನ್ನ ಸಮಚಿತ್ತ ಕಳೆದುಕೊಂಡು ತನಗೆದುರಾಗುವುದನ್ನೆಲ್ಲಾ ನಾಶಪಡಿಸುತ್ತಾ ಮುಂದುವರಿಯುತ್ತಾಳೆ. ಅವಳನ್ನು ತಡೆಯಲು ಶಿವನು ತನ್ನ ಉದ್ರಿಕ್ತ ಶಿಶ್ನದೊಂದಿಗೆ ಅವಳು ಬರುವ ದಾರಿಯಲ್ಲಿ ಬಿದ್ದಿರುತ್ತಾನೆ. ಅವಳು ಅವನನ್ನು ತುಳಿದಾಗ ಕಣ್ಣಿಗೆ ಬಿದ್ದ ಆ ದೇಹ ಮತ್ತು ಸೌಂದರ್ಯವು ಕಾಳಿಯಲ್ಲಿ ಬಯಕೆಯನ್ನು ಹುಟ್ಟಿಸುತ್ತದೆ. ಅವಳಿಗೆ ತಾನು ಪಾರ್ವತಿಯಾಗಿರುವುದು ನೆನಪಿಗೆ ಬರುತ್ತದೆ. ಮುಜುಗರಗೊಂಡ ಆಕೆ ಶಿವನ ದೇಹದೊಂದಿಗೆ ಸಂಭೋಗಿಸಿ ತನ್ನ ಗಂಡನನ್ನು ಹೊಂದುವಳು.' ಬಂಗಾಳಿ ಮತ್ತು ತಮಿಳುನಾಡಿನ ಜನಪದಗಳಲ್ಲಿ ಶಿವನು ಕ್ಷುದ್ರ ಕಾಳಿಯ ಮಾರ್ಗದಲ್ಲಿ ಶಿಶುವಾಗಿ ಮಲಗಿ ಅಳುವನು. ಅದ ಕಂಡ ಕಾಳಿಯ ತಾಯ್ತನವು ಪುಟಿದೆದ್ದು ತನ್ನ ಘೋರ ರೂಪವನ್ನು ತ್ಯಜಿಸಿ ಮಮತೆಯ ತಾಯಾಗಿ ಬದಲಾಗುವಳು. ಮತ್ತೂ ಕೆಲವು ಕಥೆಗಳಲ್ಲಿ ಶಿವನ ಎದೆಯ ಮೇಲೆ ಕಾಳಿಯು ಕಾಲಿಟ್ಟಾಗ ಶಿವನು ಅವಳ ಎಲ್ಲಾ ಕ್ರೋಧಾವೇಶಗಳನ್ನು ಹೀರಿಕೊಂಡುಬಿಟ್ಟನು.

ಒಟ್ಟಾರೆ ಕ್ರೋಧಾವೇಶದ ಉನ್ನತ್ತ ಪದಘಾತಕ್ಕೆ ಮಧುರ ಪ್ರೇಮದ ಸ್ಪರ್ಶ ಬೇಕೆಂದು ಹೇಳುತ್ತಾ ಸಾಗುವ ಕಾಳಿಯ ನಡಿಗೆ ಶಿವನೆದೆಯನ್ನು ತಲುಪುವಲ್ಲಿ ಅನೇಕ ಒಳನೋಟಗಳು ದೊರಕುವವು. ●


ದಲಿತರನ್ನು ಮತ್ತು ಅಲ್ಪಸಂಖ್ಯಾತರನ್ನು ಒಡೆದಾಳುವ ನೀತಿ

"ನೀಂದಿಗೂ ನನ್ನನ್ನು ಅಸ್ಪೃಶ್ಯನಂತೆ ಕಾಣಲಾಗುತ್ತಿದೆ". ಇದು ಅಸ್ಪೃಶ್ಯರ ಕೇರಿಯಿಂದ ಬಂದಿರುವ ಒಡಲಾಳದ ಮಾತಲ್ಲ, 'ಅಭಿವೃದ್ಧಿ'ಯ ಉತ್ತುಂಗಕ್ಕೇರಿದೆ ಎನ್ನಲಾಗುವ ರಾಜ್ಯದ ಮುಖ್ಯಮಂತ್ರಿ ಸ್ಥಾನದಲ್ಲಿರುವಾತ, ದೇಶದ ಪ್ರಧಾನಿಯಾಗುವ ಕನಸು ಕಾಣುತ್ತಿರುವಾತ ಕೇರಳದಲ್ಲಿ ಚುನಾವಣಾಪೂರ್ವ ಸಭೆಯೊಂದನ್ನು ಉದ್ದೇಶಿಸಿ ಆಡಿದ ಮಾತುಗಳಿವು. ಅಲ್ಲ, ಸುಳ್ಳಿಗೂ ಒಂದು ಮಿತಿ ಬೇಡವೇ. ಈತನ ರಾಜ್ಯದಲ್ಲಿ ದಲಿತರ ಪರಿಸ್ಥಿತಿ ಹೇಗಿದೆ, ಈತ ತನ್ನ ರಾಜ್ಯದ ದಲಿತರ ಉದ್ಧಾರಕ್ಕಾಗಿ ಏನು ಮಾಡಿದ್ದಾನೆಂದು ನೋಡಿದರೆ ಯಾರಾದರೂ ಬೆಚ್ಚಿಬೀಳಬೇಕು. ಗುಜರಾತ್‌ನಲ್ಲಿ ದಲಿತರ ಅಸಲಿ ಸ್ಥಿತಿ ಹೇಗಿದೆಯೆಂದು ತಿಳಿಯುವುದಕ್ಕೆ ಈ ಕೆಳಗಿನ ಉದಾಹರಣೆಗಳು ಸಾಕು.

ಅಹಮದಾಬಾದಿನಿಂದ ಸುಮಾರು 100 ಕಿಮೀ ದೂರದಲ್ಲಿ ಗಲ್ಸಾನಾ ಎಂಬ ಗ್ರಾಮವೊಂದಿದೆ. ಅಲ್ಲಿನ ಐದು ದೇವಸ್ಥಾನಗಳಲ್ಲಿ ಒಂದಕ್ಕೂ ದಲಿತರಿಗೆ ಪ್ರವೇಶವಿಲ್ಲ. ಇದನ್ನು ಪ್ರತಿಭಟಿಸಿದ ದಲಿತ ಯುವಜನರು ಸಾಮಾಜಿಕ ಬಹಿಷ್ಕಾರಕ್ಕೆ ತುತ್ತಾಗಿದ್ದಾರೆ.

ಸೆಪ್ಟಂಬರ್ 2012ರಲ್ಲಿ ನಡೆದ ಘಟನೆ. ಥಾನಗಢ ಎಂಬಲ್ಲಿನ ದಲಿತರಿಗೆ ತಮ್ಮ ಮೇಲೆ ದಾಳಿ ನಡೆಯಲಿರುವ ಬಗ್ಗೆ ಸುಳಿವು ದೊರೆತಿತ್ತು, ಅವರು ಪೊಲೀಸರಿಗೆ ಲಿಖಿತ ದೂರು ನೀಡಿದರು. ಆದರೂ ಯಾರೂ ಅವರ ಸಹಾಯಕ್ಕೆ ಬಂದಿಲ್ಲ, ಪರಿಣಾಮವಾಗಿ ಅತ್ಯಂತ ಬರ್ಬರವಾದ ಹತ್ಯೆಗಳು ನಡೆದುಹೋದವು.

ದಲಿತರಿಗೆ ಸಿಗುವ ವೈದ್ಯಕೀಯ ನೆರವಿನ ಬಗ್ಗೆ 2011ರಲ್ಲಿ ಒಂದು ಸಮೀಕ್ಷೆ ಕೈಗೊಳ್ಳಲಾಗಿತ್ತು, ಆಗ ಕಂಡುಬಂದಿರುವ ಅಂಶಗಳು ಹೀಗಿವೆ: ಸರ್ಕಾರಿ ಆಸ್ಪತ್ರೆ, ಚಿಕಿತ್ಸಾಲಯಗಳಿಂದ ಔಷಧಿ ಕೊಂಡುಕೊಳ್ಳುವಾಗ ಶೇಕಡಾ 90ಕ್ಕೂ ಅಧಿಕ ದಲಿತ ಮಕ್ಕಳು ತಾರತಮ್ಯದ ಧೋರಣೆ ಅನುಭವಿಸಿದರೆ ರೋಗಪರೀಕ್ಷೆಯ ವಿಚಾರದಲ್ಲಿ ಶೇಕಡಾ 80ಕ್ಕೂ ಅಧಿಕ ದಲಿತ ಮಕ್ಕಳು ತಾರತಮ್ಯಕ್ಕೊಳಗಾಗಿದ್ದಾರೆ.



ರಾಷ್ಟ್ರೀಯ ಮಾನವ ಹಕ್ಕು ಆಯೋಗದ ವರದಿಯೊಂದರಂತೆ ಕನಿಷ್ಠ 77 ಹಳ್ಳಿಗಳಲ್ಲಿನ ದಲಿತರು ಸಾಮಾಜಿಕ ಬಹಿಷ್ಕಾರಕ್ಕೊಳಗಾಗಿ ಊರು ಬಿಟ್ಟಿದ್ದಾರೆ. ಪೊಲೀಸ್ ದೌರ್ಜನ್ಯ ದೂರು ದಾಖಲಿಸಲು ನಿರಾಕರಿಸುವಿಕೆ, ದಾಖಲಿಸಿಕೊಂಡರೂ ಪ್ರಕರಣಗಳನ್ನು ಮುಂದುವರಿಸದಿರುವಿಕೆ ಮುಂತಾದ ಸುಮಾರು 100 ದೂರುಗಳು ಬಂದಿವೆ. ದಲಿತ ದೌರ್ಜನ್ಯ ಕಾಯ್ದೆಯಡಿ ದಾಖಲಾದ ಪ್ರಕರಣಗಳ ಪೈಕಿ ಶಿಕ್ಷೆಯಾಗಿರುವುದು ಕೇವಲ ಸುಮಾರು 3.5% ಪ್ರಕರಣಗಳಲ್ಲಿ.

ಮೇಲ್ಜಾತಿಯ ಗಿರಾಕಿಗಳನ್ನು ಕಳೆದುಕೊಳ್ಳಬೇಕಾಗುತ್ತದೆ ಎಂಬ ಕಾರಣಕ್ಕಾಗಿ ಸೌರಾಷ್ಟ್ರದ ಕ್ಷೌರಿಕರು ದಲಿತರ ಕೂದಲು ಕತ್ತರಿಸಲು, ಗಡ್ಡ ತೆಗೆಯಲು ನಿರಾಕರಿಸುತ್ತಾರೆ. ಹಾಗಾಗಿ ದಲಿತರು ಪಕ್ಕದ ಜುನಾಗಢಕ್ಕೆ ಹೋಗಬೇಕಾದ ಪರಿಸ್ಥಿತಿ ಇದೆ.

ಜಲಕ್ಷಾಮ ಎದುರಿಸುತ್ತಿರುವ ಸೌರಾಷ್ಟ್ರದ ಜಸ್ದಾನ್ ತಾಲೂಕಿನ ಹಳ್ಳಿಗಳಲ್ಲಿ ದಲಿತರ ಮನೆಗಳಿಗೆ ಕೊಳಾಯಿ ನೀರಿನ ಸಂಪರ್ಕ ನೀಡಲಾಗಿಲ್ಲ. ದಲಿತ ಮಹಿಳೆಯರು ಪ್ರಧಾನ ತೊಟ್ಟಿಯಿಂದ ನೀರೆತ್ತಲು ಹೋದರೆ ಬೈಗುಳದ ಸುರಿಮಳೆ. ಹಾಗಾಗಿ ಕಿಲೋಮೀಟರ್‌ಗಟ್ಟಲೆ ನಡೆದು ನೀರು ತರಬೇಕಾದ ಪರಿಸ್ಥಿತಿ. ಕೊನೆಗೊಮ್ಮೆ ದಲಿತ ಮಹಿಳೆಯರೆಲ್ಲ ಸೇರಿ ಜಿಲ್ಲಾಧಿಕಾರಿಯನ್ನು ಭೇಟಿಯಾದಾಗ ಅವರಿಗೆ ಸಿಕ್ಕಿದ್ದು ನೀರಿನ ಭರವಸೆಯಲ್ಲ, ಬೆದರಿಕೆಗಳು.


ಜುನಾಗಢ ಜಿಲ್ಲೆಯಲ್ಲಿರುವ ದುಂಗರ್‌ಪುರ ಎಂಬ ಹಳ್ಳಿಯ ದಲಿತರೆಲ್ಲರೂ ಸಾಮೂಹಿಕವಾಗಿ ಬೌದ್ಧ ಧರ್ಮ ಸ್ವೀಕರಿಸಿದ ವಿಚಾರ ತಿಳಿದುಬಂದಾಗ ಮೋದಿಯ ಜನವಿರೋಧಿ ಸರ್ಕಾರ ತನಿಖೆಗಾಗಿ ಆದೇಶಿಸಿದೆ.

ಇತ್ತೀಚಿನ ಅಧ್ಯಯನಗಳ ಪ್ರಕಾರ ಗುಜರಾತಿನಲ್ಲಿ 12,000ಕ್ಕೂ ಅಧಿಕ ಮಲ ಹೊರುವವರಿದ್ದಾರೆ.

ಘೋರ ಸತ್ಯ ಏನೆಂದರೆ ಪಕ್ಕಾ ಮೂಲಭೂತವಾದಿ ಮೋದಿಯ ಕಲ್ಪನೆಯ ಹಿಂದೂ ರಾಷ್ಟ್ರದಲ್ಲಿ ಅಲ್ಪಸಂಖ್ಯಾತರು, ದಲಿತರಿಬ್ಬರೂ ಅಡಿಯಾಳುಗಳೇ. ಒಡೆದಾಳುವ ನೀತಿಯ ಮೂಲಕ ಅವರಿಬ್ಬರೂ ಒಂದಾಗದಂತೆ ನೋಡಿಕೊಳ್ಳಲಾಗುತ್ತದೆ. ಒಬ್ಬರನ್ನು ಇನ್ನೊಬ್ಬರ ವಿರುದ್ಧ ಎತ್ತಿಕಟ್ಟಲಾಗುತ್ತದೆ. ನ್ಯಾ. ಸಚಾರ್ ವರದಿ, ನ್ಯಾ. ರಂಗನಾಥ ಮಿಶ್ರಾ ವರದಿಗಳು ದಲಿತರ ಸಾಂವಿಧಾನಿಕ ಹಕ್ಕುಗಳನ್ನು ಕಸಿದುಕೊಳ್ಳಲು ಯತ್ನಿಸುತ್ತವೆಂದು ಟೀಕಿಸುವುದರ ಹಿಂದೆ ಇದೇ ಉದ್ದೇಶ ಅಡಗಿದೆ.

(G Mamatha, 'Peoples Democracy', 16.2.2014)

● ಸುರೇಶ್ ಭಟ್ ಬಾಕರಬೈಲ್



ಹಣವನ್ನು ಅಂಬಾನಿಗೆ ಕೊಡುವ ಬದಲು 'ಆಪ್'ಗೆ ಕೊಡುವುದು ವಿವೇಕ

ಇತ್ತೀಚೆಗೆ ಬಿಜೆಪಿಯ ನರೇಂದ್ರ ಮೋದಿಯು ವಾರಾಣಸಿಯಿಂದ ಸ್ಪರ್ಧಿಸಲು ತನ್ನ ನಾಮಪತ್ರ ಸಲ್ಲಿಸಲು ಲಖನೌನಿಂದ ವಾರಾಣಸಿಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ವಾರಾಣಸಿಯ ಹತ್ತಿರ ಒಂದು ಹಳ್ಳಿಯ ಹೊಲದಲ್ಲಿ ಹಸಿರು ಹಸಿರಾಗಿರುವ ಆಳೆತ್ತರ ಉದ್ದನೆಯ ಪೈರು ನೋಡಿ ಕಾರು ನಿಲ್ಲಿಸಿ ಇಳಿದು ಅಲ್ಲಿಯ ರೈತರನ್ನು ಕರೆದು ಮಾತನಾಡಿಸಿದನಂತೆ.

ಆ ರೈತರಿಗೆ ಮೋದಿ "ನೋಡಿ, ನಮ್ಮ ಗುಜರಾತ್ ರಾಜ್ಯ ಕೃಷಿಯಲ್ಲಿ ಎಷ್ಟು ಪ್ರಗತಿ ಸಾಧಿಸಿದೆಯೆಂದರೆ ನಮ್ಮ ಗುಜರಾತಿನ ಕಬ್ಬು ನಿಮ್ಮ ಈ ಕಬ್ಬಿಗಿಂತ ನಾಲ್ಕು ಪಾಲು ಹೆಚ್ಚು ದಪ್ಪಗಿದೆ. ನಾನು ನಿಮ್ಮ ವಾರಾಣಸಿಯಿಂದ ಆರಿಸಿ ಬಂದು ಪ್ರಧಾನಿಯಾದರೆ ನಿಮ್ಮಲ್ಲಿಯೂ ಗುಜರಾತಿನಂತೇ ಆಧುನಿಕ ಕೃಷಿ ಪದ್ಧತಿ ಅಳವಡಿಸಿ ಇಲ್ಲಿಯ ನಿಮ್ಮ ಕಬ್ಬು ಸಹ ಈಗಿರುವುದಕ್ಕಿಂತ ಐದು ಪಟ್ಟು ದಪ್ಪಗಾಗುವಂತೆ ಮಾಡುತ್ತೇನೆ" ಎಂದು ಹೇಳಿದನಂತೆ.

ಆಗ ಅಲ್ಲಿಯ ಒಬ್ಬ ರೈತ ಮೋದಿಗೆ ಹೇಳಿದನಂತೆ: "ರಾಯರೇ, ನಿಮ್ಮಲ್ಲಿಯಂತೆ ದಪ್ಪ ಕಬ್ಬು ಬೆಳೆಯಲು ಮೊದಲು ನಾವು ಕಬ್ಬಿನ ಬೀಜ ನೆಡಬೇಕು ತಾನೇ. ಆದರೆ ನಾವು ಇಲ್ಲಿ ಬೆಳೆದಿರುವುದು ಕಬ್ಬು ಅಲ್ಲ, ಇಲ್ಲಿ ನೀವು ನೋಡುತ್ತಿರುವ ತೆಳ್ಳಗಿನ ದಂಟಿನ ಈ ಬೆಳೆ ಮೆಕ್ಕೆ ಜೋಳದ್ದು!!!"



ಬಡಾಯಿ ಬಹದ್ದೂರ್ ಮೋದಿಯ ಗುಜರಾತಿನಲ್ಲಿ ಕೃಷಿ ಕ್ಷೇತ್ರದ ಪ್ರಗತಿ ಯಾಕೆ ಪಾತಾಳಕ್ಕೆ ಮುಟ್ಟಿದೆ ಎಂಬುದಕ್ಕೆ ಈ ಮೇಲಿನ ಘಟನೆ ಜೀವಂತ ಸಾಕ್ಷಿ.

ಅಂದಹಾಗೆ, ಆಮ್ ಆದ್ಮಿ ಪಾರ್ಟಿಯನ್ನು ಬಿಜೆಪಿಯವರು ಮತ್ತು ಅವರ ಪರವಾಗಿರುವ ಮೀಡಿಯಾದವರು ಯಾವಾಗಲೂ ನೌಟಂಕಿಗಳು, ಬೀದಿ ನಾಟಕಕಾರರು, ಡ್ರಾಮಾಬಾಜ್ ಎಂದೆಲ್ಲಾ ಅವಹೇಳನ ಮಾಡಿ ಜೋಕುಗಳನ್ನು ಕಟ್ಟಿ ಜನರ ಕಣ್ಣಲ್ಲಿ ಎಎಪಿ ಪಕ್ಷದ ಘನತೆ ಕಡಿಮೆ ಮಾಡಲು ಸತತವಾಗಿ ಪ್ರಯತ್ನ ಮಾಡುತ್ತಿದ್ದಾರೆ. ಇದಕ್ಕೆ ಮೂಲಕಾರಣ - ಅತೀ ಭ್ರಷ್ಟಾಚಾರದಿಂದ ತುಂಬಿರುವ ಭಾರತದ ರಾಜಕೀಯ ಕರಿಮೋಡದ ನಡುವೆ ಎಎಪಿ ಒಂದು ಸಣ್ಣ ಆಶಾಕಿರಣ ಎಂದು ಭಾರತದ ಹೆಚ್ಚಿನ ಯುವ ಜನಾಂಗಕ್ಕೆ ಅನಿಸಿದೆ. ಮೂರು ನಾಲ್ಕು ತಿಂಗಳ ಹಿಂದಿನವರೆಗೂ ಕಾಂಗ್ರೆಸ್‌ನ ಬ್ರಹ್ಮಾಂಡ ಭ್ರಷ್ಟಾಚಾರದಿಂದ ಮತ್ತು ಬೆಲೆಯೇರಿಕೆಯಿಂದ ಬೇಸತ್ತಿದ್ದ ಭಾರತದ ಯುವ ಜನಾಂಗಕ್ಕೆ ಬಿಜೆಪಿ ಪಕ್ಷವನ್ನು ಅಧಿಕಾರಕ್ಕೆ ತರುವುದು ಏಕೈಕ ವಿಕಲ್ಪವಾಗಿ ಗೋಚರಿಸುತ್ತಿತ್ತು, ಆದರೆ ದಿಲ್ಲಿಯ ಜನರು ಎಎಪಿ ಪಕ್ಷಕ್ಕೆ ಭಾರೀ ಬೆಂಬಲ ವ್ಯಕ್ತಪಡಿಸಿದ್ದು ಮತ್ತು ಅಧಿಕಾರದಲ್ಲಿ ಇದ್ದ 49 ದಿನಗಳ ಅವಧಿಯಲ್ಲೂ ಅತ್ಯಂತ ಪ್ರಾಮಾಣಿಕವಾಗಿ ಹಲವಾರು ಕ್ರಾಂತಿಕಾರಿ ಹೆಜ್ಜೆಯನ್ನು ಎಎಪಿ ಪಕ್ಷದವರು ಇಟ್ಟದ್ದು ಭಾರತದ ಎಲ್ಲೆಡೆ ಎಎಪಿ ಪಕ್ಷದವರ ಬಗ್ಗೆ ಭಾರೀ ನಿರೀಕ್ಷೆ ಹುಟ್ಟಿಸಿದೆ.

ಕಾಂಗ್ರೆಸ್ ಹಾಗೂ ಬಿಜೆಪಿ ಎರಡೂ ಪಕ್ಷಗಳ ಹೀನ ಭ್ರಷ್ಟಾಚಾರದ ಅನುಭವ ಜನರಿಗೆ ಈಗಾಗಲೇ ಆಗಿದ್ದು, ಈಗ ಹೊರನೋಟಕ್ಕೆ ಎಎಪಿ ಅಪ್ಪಟ ಪ್ರಾಮಾಣಿಕ ಜನರಿಂದ ಕೂಡಿರುವ ಪಕ್ಷ ಎಂದು ಕಂಡುಬಂದಿರುವುದರಿಂದ, ಆ ಹೊಸ ಪಕ್ಷಕ್ಕೆ ಯಾಕೆ ಬೆಂಬಲ ಸೂಚಿಸಬಾರದು ಎಂದು ಯುವ ಮತದಾರರಲ್ಲಿ ಹೊಸದೊಂದು ಆಲೋಚನೆ ಹುಟ್ಟಿಕೊಂಡಿದೆ. ಹಾಗಾಗಿ ಮೂರು-ನಾಲ್ಕು ತಿಂಗಳ ಹಿಂದಿನವರೆಗೂ ಬಿಜೆಪಿಯ ಕಡೆ ವಾಲಿದ್ದ ಯುವ ಜನಾಂಗವು ಈಗ ಒಮ್ಮೆಲೇ ಎಎಪಿ ಕಡೆಗೆ ತನ್ನ ಒಲವು ತೋರಿಸುತ್ತಿರುವುದು ಬಿಜೆಪಿಗೆ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ಒಂದು ವೇಳೆ ಕೇವಲ 2% ಬಿಜೆಪಿ ಪರ ಮತದಾರರು ಕೊನೆಯ ಕ್ಷಣ ಎಎಪಿ ಪರ ವಾಲಿದರೆ ಸಾಕು ಕನಿಷ್ಠ ಮೂವತ್ತು ಸ್ಥಾನಗಳನ್ನಾದರೂ ಬಿಜೆಪಿ ಕಡಿಮೆ ಗಳಿಸಿ ಅವರ ಲೆಕ್ಕಾಚಾರವೆಲ್ಲ ಸಂಪೂರ್ಣ ಬುಡಮೇಲಾಗುವ ಸಾಧ್ಯತೆ ಇದೆ.

ಎಎಪಿ ಸ್ವತಃ ಯಾವ ಸೀಟು ಗಳಿಸದಿದ್ದರೂ ಅವರು ಬಿಜೆಪಿಯ ಮತಗಳಿಗೆ ಹಾಕುವ ಕನ್ನವು ಪರೋಕ್ಷವಾಗಿ ಕಾಂಗ್ರೆಸ್ ಅಥವಾ ತೃತೀಯ ರಂಗಕ್ಕೆ ವರವಾಗಿ ಪರಿಣಮಿಸಬಹುದು. ಅದಕ್ಕಾಗಿಯೇ ಬಿಜೆಪಿ, ಆರೆಸ್ಸೆಸ್ ಮತ್ತು ಅವರ ಪರವಿರುವ ಮೀಡಿಯಾ ಇವೆಲ್ಲಾ ಒಟ್ಟಿಗೆ ಸೇರಿ ಈಗ ಕಾಂಗ್ರೆಸ್‌ಗಿಂತ ಹೆಚ್ಚಾಗಿ ಎಎಪಿ ವಿರುದ್ಧ ಭಾರೀ ಅಪಪ್ರಚಾರದಲ್ಲಿ ತೊಡಗಿರುವುದು ಸ್ಪಷ್ಟ. ಬಿಜೆಪಿಯ ದೃಷ್ಟಿಯಲ್ಲಿ ಈಗ ಅವರ ಮೊದಲ ವೈರಿ ಎಎಪಿ.

ಸ್ವತಃ 22 ವರ್ಷಗಳ ಹಿಂದೆ ಬಿಜೆಪಿಯವರೇ ರಥಯಾತ್ರೆ ಮತ್ತು ಕರಸೇವಾ ಎಂಬ ಬೀದಿ ನಾಟಕವಾಡಿ ರಾಮಮಂದಿರದ ಹೆಸರಲ್ಲಿ ಅನಾರ್ಕಿ ಪಸರಿಸಿದ್ದರು. ಬೀದಿನಾಟಕ - ನೌಟಂಕಿಗಳ ಜನಕರಾದ ಬಿಜೆಪಿಯವರೇ ಈಗ ಎಎಪಿಗೆ ನೌಟಂಕಿ ಎಂದು ಅಪಹಾಸ್ಯ ಮಾಡುತ್ತಿರುವುದು ವಿಪರ್ಯಾಸ. ನಿಜವಾಗಿ ಚುನಾವಣೆಗೆ ಭಾರೀ ಹಣ ಬೇಕು. ಕಾಂಗ್ರೆಸ್, ಬಿಜೆಪಿ ಮತ್ತು ತೃತೀಯರಂಗದ ಪಕ್ಷಗಳ ಹತ್ತಿರ ತಮ್ಮ ಮಹಾ ಭ್ರಷ್ಟಾಚಾರದಿಂದ ಗಳಿಸಿದ ಕೋಟ್ಯಂತರ ಹಣವಿದೆ. ಹಾಗಾಗಿ ಅವರು ಚುನಾವಣೆ ಪ್ರಚಾರಕ್ಕೆ ಹಾಗೂ ಮತ ಖರೀದಿಗೆ ಬೇಕಾದಷ್ಟೂ ಹಣ ಚೆಲ್ಲಬಲ್ಲರು. ಆದರೆ ಎಎಪಿಯವರಲ್ಲಿ ಚುನಾವಣೆ ಖರ್ಚಿಗೆ ಹಣವಿಲ್ಲ. ಅದಕ್ಕಾಗಿ ಅವರು ಬೀದಿ ನಾಟಕದಿಂದಲಾದರೂ ಮತದಾರರ ಗಮನ ಸೆಳೆಯಲು ಪ್ರಯಾಣಿಸುತ್ತಿದ್ದಾರೆ. ಇದರಲ್ಲಿ ತಪ್ಪೇನಿಲ್ಲ. ಹಳಬರ ಬ್ರಹ್ಮಾಂಡ ಭ್ರಷ್ಟಾಚಾರಕ್ಕಿಂತ ಪ್ರಾಮಾಣಿಕ ಹೊಸಬರ ಬೀದಿನಾಟಕ ಎಷ್ಟೋ ವಾಸಿ.


ನಾವು ನಮ್ಮ ವಾಹನಗಳಿಗೆ ಪೆಟ್ರೋಲ್ ಹಾಕಿಸುವಾಗ ದಿನಾಲೂ ಹೆಚ್ಚು ಹಣ ಕೊಟ್ಟು ಪ್ರತಿ ವರ್ಷ ಅಂಬಾನಿಯ ಮತ್ತು ಭ್ರಷ್ಟ ರಾಜಕಾರಣಿಗಳ ಕಿಸೆಗೆ ಪ್ರತಿಯೊಬ್ಬನೂ ಐವತ್ತು ಸಾವಿರ ರೂಪಾಯಿ ಸುರಿಯುವ ಬದಲು ಕೇವಲ ಒಂದೇ ಸಾರಿ ಹತ್ತು ಸಾವಿರ ರೂಪಾಯಿ ಕೊಟ್ಟು ಕೇಜ್ರಿವಾಲರೊಟ್ಟಿಗೇ ಊಟ ಮಾಡುವುದೇ ಹೆಚ್ಚು ವಿವೇಕಯುತ.

- ಪ್ರವೀಣ್ ಎಸ್. ಶೆಟ್ಟಿ, ಮಂಗಳೂರು

ಪೀಪೀ ಎಂಬ ದುರುಳ ಪ್ಲೀಡರ್

ತಮ್ಮ ಏಪ್ರಿಲ್ 2 ರ ಸಂಚಿಕೆಯಲ್ಲಿ ಬರೆದಂತೆ ಬಿಜೆಪಿಯ ಮಂಗಳೂರು ಕ್ಷೇತ್ರದ ಅಭ್ಯರ್ಥಿ ನಳಿನ್ ಕುಮಾರ್ ಕಟೀಲ್ ಅವರ ಹಿಂದಿನ ಐದು ವರ್ಷದ ಸಾಧನೆ ತೃಪ್ತಿಕರವಾಗಿಲ್ಲ ನಿಜ. ಆದರೆ ಇವರ ಬದಲು ಹರಾಮಿ ಪ್ಲೀಡರ್ ಪೀಪೀಯನ್ನು ಮಂಗಳೂರು ಎಮ್‌ಪಿ ಅಭ್ಯರ್ಥಿ ಮಾಡುವ ಆಲೋಚನೆ ಕಲ್ಲಡ್ಕ ಡಾನ್‌ಗೆ ಬಂದಿತ್ತು ಎಂಬುದು ಕೇಳಿ ಆತಂಕವಾಗಿತ್ತು.

ಈ ಪ್ಲೀಡರ್ ಪೀಪೀ ಮಹಾ ಪ್ರಳಯಾಂತಕ. ಮೂಲತಃ ಇವನು ಹಿಂದೂ ಅಲ್ಲವೇ ಅಲ್ಲ. ಇವನು ನನ್ನಂತೆ ಜೈನ ಧರ್ಮೀಯ. ಈತನಿಗೆ ವಕೀಲಿ ವೃತ್ತಿಯ ಎಥಿಕ್ಸ್ ಸ್ವಲ್ಪವೂ ಇಲ್ಲ. ಜೀವನವಿಡೀ ಇವನು ತೆಗೆದುಕೊಂಡಿದ್ದು ಕೇವಲ ಅತ್ಯಂತ ಭಯಾನಕ ಕ್ರಿಮಿನಲ್ಲುಗಳ ಕೇಸುಗಳನ್ನು ಮಾತ್ರ. ಈತ ಮೊದಲಿನಿಂದಲೂ ತನ್ನ ಬೆನ್ನು ತಾನೇ ತಟ್ಟಿಕೊಳ್ಳುವ ಮತ್ತು ತನ್ನ ಮದುವೆಯ ವಾಲಗ ತಾನೇ ಊದಿಕೊಳ್ಳುವ ಕಂತ್ರಿ ಬುದ್ಧಿಯವ. ಈತ ಕೋರ್ಟಿನಲ್ಲಿ ಯಃಕಶ್ಚಿತ ಕೇಸ್ ಗೆದ್ದಾಗಲೂ ಪತ್ರಕರ್ತರಿಗೆ ಹಣ ತಿನ್ನಿಸಿ ತನ್ನ ಪತ್ರಿಕೆಗಳಲ್ಲಿ ತನ್ನನ್ನು ಹೊಗಳುವ ವರದಿಗಳನ್ನು ಹಾಕಿಸಿಕೊಳ್ಳುತ್ತಾನೆ (ಬೆಂಗಳೂರಿನ ಜ್ಯೋತಿಷಿ ಚಂಚಮ್ ಭಟ್ಟನಂತೆ).



ಸೋತಾಗ ಮಾತ್ರ ಬಾಲ ಮುದುರಿಕೊಂಡು ತೆಪ್ಪಗಿರುತ್ತಾನೆ. ಈತನ ಬಗ್ಗೆ ಬಾರ್ ಅಸೋಸಿಯೇಷನ್ನಿನಲ್ಲಿ ಹಲವಾರು ಜೋಕುಗಳಿವೆ. 2012 ಆಗಸ್ಟ್ 14 ರಂದು ಅಂದರೆ ಸ್ವಾತಂತ್ರ್ಯ ದಿನಾಚರಣೆಯ ಹಿಂದಿನ ದಿನ ಈತ ಬೆಳ್ತಂಗಡಿಯಲ್ಲಿ ಒಂದೆಡೆ ಸಮಾರಂಭದಲ್ಲಿ ಹೇಳಿದ್ದೇನೆಂದರೆ "ಮೊದಲನೆಯದಾಗಿ - ಮಹಾತ್ಮ ಗಾಂಧೀಜಿ ಭಾರತ ದೇಶದ ಪಿತಾಮಹ ಎಂದು ಕರೆಸಿಕೊಳ್ಳಲು ಯೋಗ್ಯರಲ್ಲ. ಎರಡನೆಯದಾಗಿ - ಪ್ರತಿ ವರ್ಷ ಆಗಸ್ಟ್ 15 ಕ್ಕೆ ಸ್ವಾತಂತ್ರ್ಯ ದಿನಾಚರಣೆ ಆಚರಿಸುವುದರಲ್ಲಿ ಅರ್ಥವಿಲ್ಲ. ಮೂರನೆಯದಾಗಿ - ನಮ್ಮ ಈಗಿನ ತ್ರಿವರ್ಣ ರಾಷ್ಟ್ರಧ್ವಜ ಬದಲಿಸಿ ಕೇವಲ ಪೂರ್ಣ ಕೇಸರಿ ಬಣ್ಣದ ಪತಾಕೆಯನ್ನು ರಾಷ್ಟ್ರಧ್ವಜ ಮಾಡಬೇಕು!"

ಈ ರೀತಿ ಗಾಂಧೀಜಿ, ಸ್ವಾತಂತ್ರ್ಯ ದಿನ ಮತ್ತು ರಾಷ್ಟ್ರಧ್ವಜ ಈ ಮೂರಕ್ಕೂ ಒಟ್ಟಿಗೇ ಅವಮಾನ ಮಾಡಿ ಪೊಲೀಸರಿಂದ ದೇಶದ್ರೋಹದ ಕೇಸು ಜಡಿಸಿಕೊಂಡಿದ್ದಾನೆ ಈ ಪ್ಲೀಡರ್.


ಒಂದು ವೇಳೆ ನಳಿನ್ ಕಟೀಲರ ಬದಲು ಈ ಪ್ರಳಯಾಂತಕ ಬುದ್ಧಿಯ ವಕೀಲನಿಗೆ ಬಿಜೆಪಿ ಟಿಕೆಟ್ ಸಿಕ್ಕಿದ್ದರೆ, ಇಡೀ ಕರಾವಳಿಯನ್ನು ಕೋಮುವಾದದ ದಳ್ಳುರಿಯಿಂದ ಈತ ಸುಟ್ಟುಬಿಡುತ್ತಿದ್ದನು. ಈತ ಮೂಲ ಆರ್‌ಎಸ್‌ಎಸ್‌ನವನಲ್ಲ, ಆದರೂ ಈತ ಆರ್‌ಎಸ್‌ಎಸ್‌ನವರಿಗಿಂತಲೂ ಹೆಚ್ಚು ಅಪಾಯಕಾರಿ.


ಹದಿನೈದು ವರ್ಷಗಳ ಹಿಂದೆ ಈತ ಬೈಕಂಪಾಡಿಯ ಒಬ್ಬ ಕ್ರಿಶ್ಚನ್ ಗ್ರಾನೈಟ್ ಉದ್ದಿಮೆದಾರನ ಮೇಲೆ ಹ[illegible] ಮಾಡಿ ಪೊಲೀಸರು ಬೆನ್ನು ಹತ್ತಿದ್ದಾಗ ಒಂದು ತಿಂಗಳು ತಲೆಮರೆಸಿಕೊಂಡು ವಕೀಲಿ ವೃತ್ತಿಯವರ ಮರ್ಯಾದೆ ತೆಗೆದಿದ್ದನು. ಆವಾಗಲೇ ಈತನ ಅಕ್ಕನ ಗಂಡ ಮಂಗಳೂರಿನ ಸ್ಟೈಯಾಬೀನ್ ಕಾಂಪ್ಲೆಕ್ಸ್‌ನಲ್ಲಿ ಒಂದು ಗಿಫ್ಟ್ ಶಾಪ್ ಆರಂಭಿಸಿ ಬ್ಯಾಂಕುಗಳಿಂದ ಸಾಲ ಪಡೆದು ಬ್ಯಾಂಕುಗಳಿಗೆ ಭಾರೀ ಮೋಸ ಮಾಡಿದ್ದನು. ಆಗ ಬ್ಯಾಂಕಿನವರು ವಸೂಲಿಗೆ ಪ್ರಯತ್ನಿಸಿದ್ದಾಗ ಈ ವಕೀಲ ಒಬ್ಬ ಬ್ಯಾಂಕ್ ಮ್ಯಾನೇಜರ್

ನಟನೆಯಿಂದ ನಿರ್ದೇಶನದತ್ತ ಹೊರಳಿದ್ದು ಹೀಗೆ...

ಸಂದರ್ಶನ

ವಿಷ್ಣುವರ್ಧನ್ ಅಭಿನಯದ 'ಸಿರಿವಂತ', ಶಿವರಾಜಕುಮಾರ್ ಅಭಿನಯದ 'ಸಂತ', ದರ್ಶನ್ ಅಭಿನಯದ 'ಸ್ವಾಮಿ' ಹಾಗೂ ವಿಜಯರಾಘವೇಂದ್ರ ಅಭಿನಯದ 'ಸೇವಂತಿ ಸೇವಂತಿ' ಚಿತ್ರಗಳ ಮೂಲಕ ನಟನಾಗಿ ಗುರುತಿಸಿಕೊಂಡು ಇದೀಗ 'ಶ್ವೇತ' ಚಿತ್ರದ ಮೂಲಕ ಸ್ವತಂತ್ರ ನಿರ್ದೇಶಕರಾಗುತ್ತಿರುವ ಉತ್ಸಾಹಿ ಯುವಕ ರಾಜೇಶ್ ಬಲಿಪ ಇಲ್ಲಿ ಮಾತಾಡಿದ್ದಾರೆ.





ಮೂಲತಃ ನಿಮ್ಮ ಊರು ಯಾವುದು? ...ನೆ, ನಿಮ್ಮ ಹೆತ್ತವರು ಹಾಗೂ ನಿಮ್ಮ ಓದಿನ ... ಹೇಳ್ತೀರಾ?

...ಕ್ಷಿಣ ಕನ್ನಡದ ಮೂಡಬಿದರೆ ನನ್ನೂರು. ಅಪ್ಪ ...ಚಂದ್ರ ಬಲಿಪ ಕಮರ್ಷಿಯಲ್ ಟ್ಯಾಕ್ಸ್ ಆಫೀಸರ್ ...ರು. ಅಮ್ಮ ಕಾಂಚನ ಬಲಿಪ ಗೃಹಿಣಿ. ಇನ್ನು ಓದಿನ ...ಚಕ್ಕೆ ಬರುವುದಾದರೆ ಕಂಪ್ಯೂಟರ್ ಸೈನ್ಸ್‌ನಲ್ಲಿ ...ಮಾ ಮಾಡಿದ್ದೇನೆ.

...ಸಿನಿಮಾ, ಕಲೆಯೆಡೆಗಿನ ಆಸಕ್ತಿ ಯಾವ ವಯಸ್ಸಿನಲ್ಲಿ ...?

...ನಗೆ ಚಿಕ್ಕಂದಿನಿಂದಲೂ ಸಿನಿಮಾ ಬಗ್ಗೆ ಪ್ರೀತಿ. ಸಾಕಷ್ಟು ಸಿನಿಮಾಗಳನ್ನು ನೋಡ್ತಿದ್ದೆ. ಹಾಗೇನೆ ವಿಶೇಷವಾಗಿ ಯಕ್ಷಗಾನದ ಬಗ್ಗೆ ಒಲವು. ಸಮಯ ಸಿಕ್ಕಾಗೆಲ್ಲ ಯಕ್ಷಗಾನ ಆಟಗಳನ್ನು ನೋಡ್ತಿದ್ದೆ. ಇನ್ನು ಕಾಲೇಜು ದಿನಗಳಲ್ಲಿ ಫ್ಯಾಶನ್ ಷೋ ಕಡೆಗೆ ಆಸಕ್ತಿ ಹೊರಳಿತು. ಕಾಲೇಜು ವಾರ್ಷಿಕೋತ್ಸವ ಸಮಾರಂಭಗಳಲ್ಲಿ ಫ್ಯಾಶನ್ ಶೋ ಡೈರೆಕ್ಟ್ ಮಾಡ್ತಿದ್ದೆ. ಆಧುನಿಕ ಗ್ಲಾಮರ್ ಜಗತ್ತಿನ ಬಗೆಗೆ ನನಗೆ ತೀವ್ರವಾದ ಆಸಕ್ತಿ ಇತ್ತು.

* ಸಿನಿಮಾರಂಗಕ್ಕೆ ಪ್ರವೇಶ ಪಡೆದಿದ್ದು ಹೇಗೆ?


ನನ್ನ ಡಿಪ್ಲೊಮಾ ಕೋರ್ಸ್ ಮುಗಿದನಂತರ ಕೆಲಸ ಹುಡುಕಿಕೊಂಡು ಬೆಂಗಳೂರಿಗೆ ಬಂದೆ. ಮಲ್ಲೇಶ್ವರಂನಲ್ಲಿದ್ದ ನನ್ನ ಅಂಕಲ್ ಮನೆಯಲ್ಲಿ ಉಳಿದುಕೊಂಡೆ. ಅಲ್ಲಿದ್ದುಕೊಂಡು ಒಂದಿಷ್ಟು ಕಂಪನಿಗಳಿಗೆ ಭೇಟಿ ಕೊಟ್ಟು ಜಾಬ್ ಹುಡುಕಾಟದಲ್ಲಿ ತೊಡಗಿದೆ. ಎಲ್ಲೂ ಜಾಬ್ ಸಿಗಲಿಲ್ಲ. ಆಗ ನನಗೊಬ್ಬ ಮಧುಕರ್ ರಾವ್ ಅನ್ನುವ ಗೆಳೆಯ ಅಕಸ್ಮಾತ್ತಾಗಿ ಪರಿಚಯವಾದ. ಆತನಿಗೆ ಸಿನಿಮಾಲೋಕದ ಒಂದಿಷ್ಟು ಜನರ ಪರಿಚಯ ಇತ್ತು. ಒಂದು ದಿನ ಕಂಠೀರವ ಸ್ಟುಡಿಯೋಗೆ ನನ್ನನ್ನು ಕರೆದುಕೊಂಡು ಹೋಗಿದ್ದ. ಅಲ್ಲಿ ಧಾರಾವಾಹಿಯೊಂದರ ಶೂಟಿಂಗ್ ನಡೀತಿತ್ತು. ಆ ಶೂಟಿಂಗ್ ನೋಡುತ್ತಿದ್ದಂತೆಯೇ ನನಗೂ ಕೂಡ ಸಿನಿಮಾ, ಧಾರಾವಾಹಿಗಳಲ್ಲಿ ನಟಿಸಬೇಕು ಅನ್ನಿಸ್ತು. ಗೆಳೆಯ ಮಧುಕರ್ ರಾವ್ ಒಂದಿಷ್ಟು ಸಿನಿಮಾ ಜನರನ್ನು ಮೀಟ್ ಮಾಡಿಸಿದ. ನಾನು ನಟನಾಗಲಿ ಅಂತ ಆಸೆ ಪಟ್ಟ. ಆದರೆ ಎಲ್ಲೂ ಅವಕಾಶ ಸಿಗಲಿಲ್ಲ. ಆದರೆ ಅಕಸ್ಮಾತ್ತಾಗಿ 'ಕಲ್ಪವೃಕ್ಷ' ಅನ್ನೋ ಒಂದು ಧಾರಾವಾಹಿಯಲ್ಲಿ ನಟಿಸುವ ಅವಕಾಶ ಬಂದು ನಟನಾಗಿಬಿಟ್ಟೆ. ಅದೊಂದು ಪುಟ್ಟ ಪಾತ್ರ. ಆಗ ನಟನೆಯ ಬಗ್ಗೆ ಅಷ್ಟೇನೂ ಗೊತ್ತಿರಲಿಲ್ಲ. ನಿರ್ದೇಶಕರು ಹೇಳಿಕೊಟ್ಟಂತೆ ಮಾಡಿದೆನಷ್ಟೇ. ಆ ಎಪಿಸೋಡ್ ಯಾವಾಗ ಪ್ರಸಾರವಾಗುತ್ತೋ, ಎಷ್ಟು ಬೇಗ ಟಿವಿ ಪರದೆಯ ಮೇಲೆ ನನ್ನನ್ನು ನಾನು ನೋಡ್ತೀನೋ ಅಂತೆಲ್ಲ ಕಾತರದಿಂದಿದ್ದೆ. ಆ ಕಾಯುವಿಕೆಯ ಮಜವೇ ಬೇರೆ ಅಲ್ವಾ?

* ನೀವು ನಟಿಸಿದ ಮೊದಲ ಸಿನಿಮಾ ಯಾವುದು? ಆ ಅವಕಾಶ ಹೇಗೆ ಬಂತು?

ಯಾವಾಗ 'ಕಲ್ಪವೃಕ್ಷ' ಧಾರಾವಾಹಿಯಲ್ಲಿ ಪುಟ್ಟದೊಂದು ಪಾತ್ರ ಮಾಡಿದೆನೋ ಅಲ್ಲಿಂದ ಅಭಿನಯದ ಹುಚ್ಚು ಶುರುವಾಯ್ತು. ಒಂದಿಷ್ಟು ಫೋಟೋ ತೆಗೆಸಿ ಕೆಲವು ನಿರ್ದೇಶಕರನ್ನು ಸಂಪರ್ಕಿಸಿ ಕೊಡಲು ಶುರುಮಾಡಿಕೊಂಡೆ. ಆ ಪ್ರಯತ್ನದಲ್ಲಿ ಒಮ್ಮೆ ಎಸ್.ನಾರಾಯಣ್ ಅವರನ್ನು ಮೀಟ್ ಮಾಡಿ ಅವರಿಗೂ ನನ್ನ ಫೋಟೋ ಕೊಟ್ಟಿದ್ದೆ. ಆಗ ಅವರು 'ಸೇವಂತಿ ಸೇವಂತಿ' ಚಿತ್ರ ಮಾಡ್ತಿದ್ರು. ಆ ಚಿತ್ರದಲ್ಲಿ ರಮ್ಯಾ ಅವರ ಬ್ರದರ್ ರೋಲ್ ಕೊಟ್ರು. ಆ ಪಾತ್ರ ನನಗೆ ಒಂದು ಮಟ್ಟಿಗೆ ಹೆಸರು ತಂದುಕೊಟ್ಟಿತು ಅಂತಲೇ ಹೇಳಬಹುದು. ಅಲ್ಲಲ್ಲಿ ಜನ ಗುರುತಿಸಲು ಶುರು ಮಾಡಿದರು. ಅದೇ ರೀತಿ ಎಸ್.ನಾರಾಯಣ್ ಅವರು ತಮ್ಮ 'ಸಿರಿವಂತ' ಚಿತ್ರದಲ್ಲೂ ಒಂದು ಪಾತ್ರ ಕೊಟ್ಟರು. ಆ ಚಿತ್ರದಲ್ಲಿ ನಾನು ಶ್ರೀನಾಥ್ ಅವರ ಮಗ. ಆ ಚಿತ್ರದ ಮೂಲಕ ವಿಷ್ಣುವರ್ಧನ್ ತರಹದ ಹಿರಿಯ, ಪ್ರತಿಭಾವಂತ ನಟರ ಜೊತೆ ಸ್ಕ್ರೀನ್ ಶೇರ್ ಮಾಡಿಕೊಂಡ ಖುಷಿ ನನ್ನದು. ಅಲ್ಲಿಂದಾಚೆಗೆ ಶಿವರಾಜ್‌ಕುಮಾರ್ ಅಭಿನಯದ 'ಸಂತ', ದರ್ಶನ್ ಅಭಿನಯದ 'ಸ್ವಾಮಿ' ಸೇರಿದಂತೆ ಒಂದಿಷ್ಟು ಚಿತ್ರಗಳಲ್ಲಿ ಪಾತ್ರ ಮಾಡಿದೆ.

* ನಿಮಗೆ ನಿರ್ದೇಶನದಲ್ಲೂ ಆಸಕ್ತಿಯುಂಟು. ಅದರ ಬಗ್ಗೆ ಹೇಳ್ತೀರಾ?

ನಂತರದ ದಿನಗಳಲ್ಲಿ ಹೆಚ್ಚು ಹೆಚ್ಚು ಸಿನಿಮಾಗಳಲ್ಲಿ ನಟಿಸಲು ನನಗೆ ಅವಕಾಶಗಳು ಬರಲಿಲ್ಲವೆಂದೇ ಹೇಳಬಯಸುತ್ತೇನೆ. ಆಗ ನಾನೇ ಸ್ಕ್ರಿಪ್ಟ್ ಬರೆಯಲು ಶುರು ಮಾಡಿಕೊಂಡೆ. ನಿರ್ದೇಶಕನಾಗಬೇಕು ಅಂತ ಕನಸು ಕಂಡೆ. ಆ ಮೂಲಕ ನನ್ನನ್ನೂ ಒಳಗೊಂಡಂತೆ ಒಂದಿಷ್ಟು ಆಸಕ್ತರಿಗೆ ಅವಕಾಶಗಳು ಹುಟ್ಟಿಕೊಳ್ಳುತ್ತವೆ ಅಂತ ತೀರ್ಮಾನಿಸಿದೆ. ಆ ನಿಟ್ಟಿನಲ್ಲಿ ಕಂಡ ಕನಸೇ 'ಶ್ವೇತ'. 'ಶ್ವೇತ' ನಾನು ನಿರ್ದೇಶಿಸುತ್ತಿರುವ ಮೊದಲ ಸಿನಿಮಾ. ಈ ಸಿನಿಮಾಗೆ ಸುಮಾರು ಒಂದು ವರ್ಷದ ಕಾಲ ಸ್ಕ್ರಿಪ್ಟ್ ಬರೆದೆ. ಈ ಚಿತ್ರದ ಕಥೆಯು ಪ್ಯಾರಾಸೈಕಾಲಜಿ ಡಿಪಾರ್ಟ್‌ಮೆಂಟ್‌ಗೆ ಸಂಬಂಧಿಸಿದ್ದು. ನಾನು ಅಲ್ಲಲ್ಲಿ ಓದಿರುವಂತೆ, ಕೇಳಿರುವಂತೆ ಹಿಂದಿನ ಕಾಲದಲ್ಲಿ ಬಾಟಲಿಗಳಲ್ಲಿ, ವಿಶೇಷವಾದ ಪೆಟ್ಟಿಗೆಗಳಲ್ಲಿ ಆತ್ಮಗಳನ್ನು ದಿಗ್ಬಂಧನ ಮಾಡ್ತಿದ್ರಂತೆ. ಅಂತಹ ಕುತೂಹಲಕಾರಿ ವಿಷಯವನ್ನು ಇಟ್ಟುಕೊಂಡು ಒಂದಿಷ್ಟು ಸಂಶೋಧಿಸಿ, ಮಾಹಿತಿ ಸಂಗ್ರಹಿಸಿ, ವೈಜ್ಞಾನಿಕ ನೆಲೆಗಟ್ಟಿನ ಮೇಲೆ 'ಶ್ವೇತ' ಚಿತ್ರದ ಕಥೆ ರೂಪಿಸಿದೆ. ಸಾವಿರಾರು ವರ್ಷಗಳ ಹಿಂದಿನ ಇತಿಹಾಸವಿರುವ ಇಂತಹ ವಿಶಿಷ್ಟ ಪೆಟ್ಟಿಗೆಯಲ್ಲಿ ಬಂಧನಕ್ಕೊಳಗಾಗಿರಬಹುದಾದ ಆತ್ಮವೊಂದು ಅಕಸ್ಮಾತ್ ಈಗಿನ ಕಾಲದ ಒಬ್ಬ ಹುಡುಗಿಯ ಕೈಗೆ ಸಿಕ್ಕಿ, ಆ ಹುಡುಗಿ ಆ ಪೆಟ್ಟಿಗೆಯನ್ನು ಕುತೂಹಲಕ್ಕೆ ಓಪನ್ ಮಾಡಿದಾಗ ಸಂಭವಿಸಬಹುದಾದ ಕುತೂಹಲಕಾರಿ ವಿಷಯಗಳ ಸುತ್ತ ಈ 'ಶ್ವೇತ' ಚಿತ್ರದ ಚಿತ್ರಕತೆ ಹೆಣೆಯಲ್ಪಟ್ಟಿದೆ.



* 'ಶ್ವೇತ' ಚಿತ್ರದ ನಿರ್ಮಾಪಕರು, ನಟನಟಿಯರು ಹಾಗೂ ತಂತ್ರಜ್ಞರ ಬಗ್ಗೆ ಹೇಳ್ತೀರಾ?

ಹೊಸೂರಿನ ಪಿ.ಎಂ.ರಾಮಚಂದ್ರ ರೆಡ್ಡಿ ಎನ್ನುವವರು ಈ ಚಿತ್ರದ ನಿರ್ಮಾಪಕರು. ಇವರು ಮೂಲತಃ ಬಳ್ಳಾರಿಯವರಾಗಿದ್ದು ಈಗ ಹೊಸೂರಿನಲ್ಲಿ ಬಿಲ್ಡರ್ ಆಗಿದ್ದಾರೆ. ನನ್ನನ್ನು ತಮ್ಮ ಸ್ವಂತ ಮಗನಷ್ಟೇ ಪ್ರೀತಿಸುವ ರೆಡ್ಡಿಯವರು ನನ್ನ ಮೇಲೆ ಅಪಾರವಾದ ನಂಬಿಕೆ ಇಟ್ಟು ಹಣ ಹಾಕಿದ್ದಾರೆ. ಅವರ ನಂಬಿಕೆಯನ್ನು ಉಳಿಸಿಕೊಳ್ಳುವುದರ ಜೊತೆಗೆ 'ಶ್ವೇತ' ಮೂಲಕ ಕನ್ನಡಕ್ಕೆ ಒಂದು ಒಳ್ಳೆಯ ಚಿತ್ರವನ್ನು ಕೊಡಬಲ್ಲೆ ಎಂಬ ವಿಶ್ವಾಸವೂ ನನಗಿದೆ. ಪ್ರಾಮಾಣಿಕ ಪ್ರಯತ್ನಕ್ಕೆ ಯಾವತ್ತಿಗೂ ಜಯ ಸಿಗುತ್ತದೆ ಅಲ್ಲವಾ? ಇನ್ನು 'ಶ್ವೇತ'ದ ನಟನಟಿಯರಲ್ಲಿ ಪ್ರಮುಖವಾಗಿ ರಾ.ಮಂಜು, ಅಕ್ಷತಾ ಮಾರ್ಲ, ಶ್ರೀನಿವಾಸ ಪ್ರಭು, ಜಯಶೀಲ ಗೌಡ, ಪ್ರಣವ್ ಗೌಡ, ಕಿರಣ್ ವಟಿ ಇದ್ದಾರೆ. ನಾಗಾರ್ಜುನ್ ಈ ಚಿತ್ರದ ಛಾಯಾಗ್ರಾಹಕರಾಗಿದ್ದು, 'ಕೆಂಪೇಗೌಡ', 'ಮಾಣಿಕ್ಯ' ಚಿತ್ರಗಳ ಎಡಿಟರ್ ವಿಶ್ವ ಅವರು ಈ ಚಿತ್ರದ ಎಡಿಟಿಂಗ್ ಜವಾಬ್ದಾರಿ ಹೊತ್ತಿದ್ದಾರೆ. 'ಶ್ವೇತ' ಚಿತ್ರದ ಮತ್ತೊಂದು ವಿಶೇಷತೆಯೆಂದರೆ ಗ್ರಾಫಿಕ್ಸ್. ಈಗಾಗಲೇ ಮಾತಿನ ಭಾಗದ ಶೂಟಿಂಗ್ ಸಂಪೂರ್ಣ ಮುಗಿದಿದ್ದು, ಒಂದು ಹಾಡಿನ ಚಿತ್ರೀಕರಣವಷ್ಟೇ ಬಾಕಿ ಇದೆ. ಈ ಚಿತ್ರದಲ್ಲಿ ಗ್ರಾಫಿಕ್ಸ್‌ಗೆ ಹೆಚ್ಚು ಮಹತ್ವ ಇರುವುದರಿಂದ ಎರಡು ತಿಂಗಳಿಗೂ ಹೆಚ್ಚು ಕಾಲ ಗ್ರಾಫಿಕ್ಸ್ ಕೆಲಸಕ್ಕೆ ಸಮಯ ಬೇಕಾಗುತ್ತದೆ. ಹಾಗಾಗಿ ಬರುವ ಜೂನ್ ತಿಂಗಳಲ್ಲಿ 'ಶ್ವೇತ' ತೆರೆಗೆ ಬರಲಿದೆ. ಚಿತ್ರದಲ್ಲಿ ಎರಡು ಹಾಡುಗಳಿದ್ದು, ಸಂಭಾಷಣೆ ಮಾರ್ಮಿಕವಾಗಿರುತ್ತದೆ ಎಂದು ಹೇಳಬಯಸುತ್ತೇನೆ.

* ನಿಮ್ಮ ಮುಂದಿನ ಯೋಜನೆಗಳೇನು?

'ಶ್ವೇತ' ನಂತರ ನನ್ನ ಕನಸಿನ ಪ್ರಾಜೆಕ್ಟ್ 'ಅಘೋರ'ವನ್ನು ಕೈಗೆತ್ತಿಕೊಳ್ಳುತ್ತೇನೆ. ಹಾಗೆ ನೋಡಿದರೆ, 'ಶ್ವೇತ'ಗಿಂತಲೂ ಮೊದಲೇ 'ಅಘೋರ' ಚಿತ್ರವನ್ನು ಮಾಡಬೇಕಿತ್ತು. 'ಅಘೋರ' ಚಿತ್ರಕ್ಕೆ ಇನ್ನೂ ಹೆಚ್ಚು ತಯಾರಿ ಬೇಕಿರುವುದರಿಂದ ಸದ್ಯಕ್ಕೆ 'ಶ್ವೇತ' ಚಿತ್ರದಲ್ಲಿ ತೊಡಗಿಕೊಂಡಿದ್ದೇನೆ. 'ಅಘೋರ' ಚಿತ್ರವು ಹೆಸರೇ ಹೇಳುವಂತೆ ಅಘೋರಿಗಳಿಗೆ ಸಂಬಂಧಿಸಿದ ಚಿತ್ರವಾಗಿದ್ದು, ಎರಡು ಸಾವಿರ ವರ್ಷಗಳ ಹಿಂದಿನ ಕಥಾವಸ್ತು ಹೊಂದಿದೆ. ಹಾಗೇನೆ, ವರ್ತಮಾನದ ವಿಷಯಗಳೂ ಕೂಡ ಕಥೆಯಲ್ಲಿ ಮಿಳಿತಗೊಂಡು. ದೊಡ್ಡ ತಾರಾಗಣದಲ್ಲಿ ತಯಾರಾಗಲಿರುವ ಆ ಚಿತ್ರವು ವಿಭಿನ್ನ, ವಿಶಿಷ್ಟ ಚಿತ್ರವಂತೂ ಆಗಬಲ್ಲದು ಎಂದು ಭರವಸೆ ಇಟ್ಟಿದ್ದೇನೆ. ಅಂದಹಾಗೆ, 'ಅಘೋರ' ಚಿತ್ರವೂ ಕೂಡ ಪಿ.ಎಂ ರಾಮಚಂದ್ರರೆಡ್ಡಿಯವರ ಎಸ್.ಆರ್.ವೈ. ಪ್ರೊಡಕ್ಷನ್ ಲಾಂಛನದಡಿಯಲ್ಲೇ ನಿರ್ಮಾಣವಾಗಲಿದೆ.

* ನೀವು ಈಗ ನಿರ್ದೇಶಿಸುತ್ತಿರುವ 'ಶ್ವೇತ'ವಾಗಲೀ ಅಥವಾ ಮುಂದೆ ನಿರ್ದೇಶಿಸಬೇಕೆಂದಿರುವ 'ಅಘೋರ' ಆಗಲೀ ಎಲ್ಲೋ ಒಂದು ಕಡೆ ಇವತ್ತು ಕನ್ನಡದಲ್ಲಿ ನಿರ್ಮಾಣವಾಗುತ್ತಿರುವ ಸಿನಿಮಾಗಳ ನಡುವೆ ಬೇರೆಯದೇ ಬಗೆಯ ಸಿನಿಮಾಗಳು ಎನಿಸುತ್ತಿವೆ. ಇದು ಹೊಸ ನಿರ್ದೇಶಕರಾಗಿ ನೀವು ರಿಸ್ಕ್ ತಗೊಳ್ತಾ ಇದೀರಾ ಅನ್ನಿಸ್ತಿಲ್ವಾ?

ರಿಸ್ಕ್ ತಗೊಳ್ಳದೆ ಏನೂ ಆಗಲ್ಲ. ನೀವು ಹೇಳಿದಂತೆ 'ಶ್ವೇತ' ಅಥವಾ 'ಅಘೋರ' ರೆಗ್ಯುಲರ್ ಸಿನಿಮಾಗಳಲ್ಲ. ಸದ್ಯ ಕನ್ನಡ ಚಿತ್ರರಂಗದ ಸಂದರ್ಭದಲ್ಲಿ ಪ್ರೀತಿ, ಪ್ರೇಮ ಕುರಿತ ಚಿತ್ರಗಳು, ಸೆಂಟಿಮೆಂಟಲ್ ಚಿತ್ರಗಳು, ಕಾಮಿಡಿ ಚಿತ್ರಗಳು, ಆಕ್ಷನ್ ಚಿತ್ರಗಳು ಯಥೇಚ್ಛವಾಗಿ ಬರ್ತಿವೆ. ಇಂತಹ ಚಿತ್ರಗಳ ನಡುವೆ ನನ್ನ ಚಿತ್ರಗಳು ತಮ್ಮದೇ ಆದ ವೈಶಿಷ್ಟ್ಯತೆಯಿಂದ ಕೂಡಿರಬೇಕು ಅನ್ನೋದು ನನ್ನ ಆಸೆ. ಹಾಗಂತ ನಾನು ರೆಗ್ಯುಲರ್ ಚಿತ್ರಗಳ ವಿರೋಧಿಯಲ್ಲ. ಅಂತಹ ಚಿತ್ರಗಳನ್ನು ಈಗಲೂ ನೋಡುತ್ತೇನೆ.

ಆ ಬಗೆಯ ಎಷ್ಟೋ ಒಳ್ಳೊಳ್ಳೆಯ ಚಿತ್ರಗಳು ಕನ್ನಡದಲ್ಲಿ ಬರುತ್ತಿವೆ. ಆದರೆ, ಒಬ್ಬ ನಿರ್ದೇಶಕನಾಗಿ ನನ್ನ ಅಭಿರುಚಿ, ಆಸಕ್ತಿ ಬೇರೆ ಬಗೆಯದಷ್ಟೇ.



ಸಂದರ್ಶಕ: ಹೃದಯಶಿವ

...ಟಿದುರಿಕೆ ಹಾಕಿದ ಘಟನೆ ನಡೆದಿತ್ತು. ತನ್ನ ಪಾರ್ಟನರ್ ... ಇನ್ನೊಬ್ಬ ವಕೀಲನ ಮೇಲೂ ಹಲ್ಲೆ ನಡೆಸಿದ ...ಪನೆ ಈತನ ಮೇಲಿತ್ತು. ಧರ್ಮಸ್ಥಳದ ಸೌಜನ್ಯ ... ಮತ್ತು ಕೊಲೆ ಕೇಸಿನಲ್ಲೂ ಈತ ಜೈನರಾದ ...ರರನ್ನು ಉಳಿಸಲು ಹಲವಾರು ಪಿತೂರಿ ನಡೆಸಿದ್ದನು. ...ಅಣ್ಣನ ಮೇಲೆ ಮೂಡಬಿದ್ರಿಯಲ್ಲಿ ಒಬ್ಬ ಮುಸ್ಲಿಮನ ...ಪ್ರಯತ್ನದ ಕೇಸ್ ಸಹ ಇದೆ. ಇಂತಹ ಕ್ರಿಮಿನಲ್ ...ಬದ ಪ್ಲೀಡರ್ ಪೀಜೀಗಿಂತ ಕಲ್ಲಡ್ಕ ಭಟ್ಟರ ...ಳಿನಂತಿರುವ ನಳಿನ ಕುಮಾರ್ ಕಟೀಲರೇ ಎಷ್ಟೋ ... ಆದರೆ ಈ ಸಾರಿ ಕಾಂಗ್ರೆಸ್‌ನ ಜನಾರ್ದನ ...ರಿಯವರ ಎದುರು ಕಟೀಲ್ ಗೆಲ್ಲಲಾರ ಎಂಬುದು ...ದು ಸಮಾಧಾನದ ವಿಷಯ.

- ಅಭಿಷೇಕ್ ಎ. ಪಡಿವಾಳ್, ಸುಳ್ಯ

ಮೋದಿ ಜಪದಲ್ಲಿ ತೊಡಗಿರುವ ಮಾಧ್ಯಮಗಳು

...ವ್ವದ ಪರಿಸ್ಥಿತಿ ಹೇಗಿದೆ ಎಂದರೆ ವಿದ್ಯುನ್ಮಾನ ...ಮಗಳು ಬಹುತೇಕವಾಗಿ ಮುಖೇಶ್ ಅಂಬಾನಿಯ ...ದಲ್ಲಿದೆ. ಇನ್ನು ಸ್ಟಾರ್ ಜಾಲದ ರೂಪರ್ಟ್ ...ರ್ಡೋಕ್ ಹಿಡಿತ ಬೇರೆ ಇದೆ. ಈ ವಾಹಿನಿಗಳೆಲ್ಲಾ ...ಯನ್ನು ಹಾಡಿ ಹೊಗಳಿ ಜನರಿಗೆ ಸನ್ನಿ ಹಿಡಿಸುವ ...ಳಲ್ಲಿ ಆಕ್ರಮಣಾತ್ಮಕ ರೀತಿಯಲ್ಲಿ ತೊಡಗಿವೆ. ಬರಹ ...ಮಗಳನ್ನು ಕೂಡ ಕಾರ್ಪೊರೇಟ್ ಉದ್ದಿಮೆಗಳು ...ತ್ರಿಸುತ್ತಾ ಮೋದಿ ಜಪದಲ್ಲಿ ತೊಡಗಿಸುತ್ತಿವೆ. ...ಕೆಯುಳ್ಳಿರುವ ಕೆಲವು ಮಾತ್ರ ವಾಸ್ತವಗಳನ್ನು ಜನರ ...ಕೆ ಇಡುತ್ತಿವೆ.

...ಂತಹ ಸ್ಥಿತಿಯಲ್ಲಿ ಜನಪರ-ಪ್ರಗತಿಪರ ಮನಸ್ಸುಗಳು ...ೀಯ ಕ್ರಿಯಾಶೀಲತೆ ತೋರಬೇಕಾದುದು ...ವಲ್ಲವೆ? ನಿರಂಕುಶಾಧಿಕಾರ ಚುನಾವಣೆಯ ಮೂಲಕ ...ಾಂತ್ರಿಕ ಪರದೆ ಧರಿಸಿ ಜನರು ಹಾಗೂ ದೇಶವನ್ನು ...ಮುಕ್ಕಲು ಹೊರಟಿರುವಾಗ ತಟಸ್ಥ ಇಲ್ಲವೇ ಜಡತನ ...ದರೆ ಅದು ನಿರಂಕುಶಾಧಿಕಾರಕ್ಕೆ ಬೆಂಬಲ ನೀಡಿದಂತೆ ...ವುದಿಲ್ಲವೆ? ಇವೆಲ್ಲಾ ಯಾಕೆ ಅರ್ಥವಾಗುತ್ತಿಲ್ಲ ...ಲ್ಲಾ? ಇಂತಹ ಜವಾಬ್ದಾರಿ ನಿರ್ವಹಿಸಲು ಸಿದ್ಧರಿಲ್ಲ ... ಅರ್ಥವೆ? ಅಥವಾ ಎಲ್ಲಾ ಮುಗಿದ ಮೇಲೆ ...ಬಗ್ಗೆ ಬರೆಯುತ್ತಾ ಕೂತರೆ ಸಾಕು ಎಂಬುದೇ?

- ನಂದನ, ಚಿಕ್ಕಮಗಳೂರು

ವಿ.ಸೂ. : ನಿಮ್ಮ ಅನಿಸಿಕೆಗಳನ್ನು ...kesh70@rediffmail.com ಗೆ ಮಿಂಚಂಚೆ ... ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು. ನಿಮ್ಮ ...ಯೆಗಳನ್ನು 9980331427 ನಂಬರ್‌ಗೂ ... ಮತ್ತು ಚಿಕ್ಕದಾಗಿ SMS ಕಳುಹಿಸಬಹುದು.

Registered No.RNP/KA/BGS/2036/2014-16 Posted at : GPO, Bangalore-01. Friday R B P LANKESH,

ಜಗ್ಗೇಶ್-ಯೋಗರಾಜ್ ಸಾಥ್ ಸಾಥ್





ಯೋಗರಾಜ್ ಭಟ್ ಹಾಗೂ ಜಗ್ಗೇಶ್ ಒಂದು ಸಿನಿಮಾದಲ್ಲಿ ಒಂದಾಗುತ್ತಿದ್ದಾರೆ. ಈ ಮೂಲಕ ಇನ್ನೊಂದು ಮಾತುಗಳ ಸಿನಿಮಾವನ್ನು ಕನ್ನಡಿಗರು ನಿರೀಕ್ಷಿಸಬಹುದು. ಭಟ್ಟರ ಜೊತೆ ಕೆಲಸ ಮಾಡುವ ಅವಕಾಶ ಒದಗಿ ಬಂದುದು ಜಗ್ಗೇಶ್ ಅವರಿಗೆ ಖುಷಿ ತಂದಿದೆಯಂತೆ. ತಾವು ಕಳೆದ ಮೂರು ದಶಕಗಳಿಂದ ಕನ್ನಡ ಚಿತ್ರರಂಗದಲ್ಲಿದ್ದು ಅನೇಕ ಪ್ರತಿಭಾವಂತ ತಂತ್ರಜ್ಞರೊಂದಿಗೆ ಕೆಲಸ ಮಾಡಿದ್ದು ಇದೀಗ ಭಟ್ಟರ ಜೊತೆ ಕೆಲಸ ಮಾಡುವುದರ ಕುರಿತು ಖುಷಿ ಇರುವುದಾಗಿ ಹೇಳಿಕೊಂಡಿದ್ದಾರೆ. ಯೋಗರಾಜ್ ಭಟ್ಟರು ತಮ್ಮ ಪ್ರತಿಭೆಯನ್ನು ಸಾಬೀತು ಮಾಡಿಕೊಂಡಿರುವ ಯಶಸ್ವೀ ನಿರ್ದೇಶಕರಷ್ಟೇ ಅಲ್ಲದೆ ತುಂಬಾ ಒಳ್ಳೆಯ ತಂತ್ರಜ್ಞ ಅನ್ನೋದು ಭಟ್ಟರ ಕುರಿತಂತೆ ಜಗ್ಗೇಶ್ ಅವರ ಮೆಚ್ಚುಗೆಯ ಮಾತು. ಅದೇರೀತಿ ಯೋಗರಾಜ ಭಟ್ಟರೇ ತಮ್ಮ ಮನೆಗೆ ಬಂದು ತಮ್ಮ 'ವಾಸ್ತು ಪ್ರಕಾರ' ಎನ್ನುವ ವಿಶಿಷ್ಟ ಬಗೆಯ ಟೈಟಲ್ ಹೊಂದಿರುವ ಚಿತ್ರದಲ್ಲಿ ನಟಿಸಬೇಕೆಂದು ಆಫರ್ ನೀಡಿದ್ದು, ತಾವು ತುಂಬು ಪ್ರೀತಿಯಿಂದ ಅವರೊಂದಿಗೆ ವರ್ಕ್ ಮಾಡಲು ಒಪ್ಪಿಕೊಂಡಿರುವುದಾಗಿ ಜಗ್ಗೇಶ್ ಹೇಳಿಕೊಂಡಿದ್ದಾರೆ. ಇವರಿಬ್ಬರ ಕಾಂಬಿನೇಶನ್ ಇರುವ 'ವಾಸ್ತು ಪ್ರಕಾರ' ಯಾವ ಬಗೆಯ ಮೋಡಿ ಮಾಡಲಿದೆ ಅನ್ನೋದನ್ನು ಕಾದುನೋಡಬೇಕು.

ಉಳಿದವರು ಕಂಡಂತೆ ಈ ವಾರ ತೆರೆಗೆ




ರಕ್ಷಿತ್ ಶೆಟ್ಟಿ ನಟಿಸಿ, ನಿರ್ದೇಶಿಸಿರುವ 'ಉಳಿದವರು ಕಂಡಂತೆ' ಚಿತ್ರವು ಈ ವಾರ ತೆರೆಗೆ ಬರುತ್ತಿದೆ. ತನ್ನ ಟ್ರೇಲರ್ ಮೂಲಕ ಈಗಾಗಲೇ ಪ್ರೇಕ್ಷಕರಲ್ಲಿ ಕುತೂಹಲ ಕೆರಳಿಸಿರುವ ಈ ಚಿತ್ರ ರಾಜ್ಯದಾದ್ಯಂತ ನೂರಕ್ಕೂ ಹೆಚ್ಚು ಚಿತ್ರಮಂದಿರಗಳಲ್ಲಿ ತೆರೆಕಾಣುವುದರ ಜೊತೆಗೆ ಏಕಕಾಲಕ್ಕೆ ವಿದೇಶಗಳಲ್ಲೂ ತೆರೆಗೆ ಬರುತ್ತಿದೆ. ವಿದೇಶಗಳಲ್ಲಿ ಅಮೆರಿಕಾ ಹಾಗೂ ಆಸ್ಟ್ರೇಲಿಯಗಳು ಪ್ರಮುಖವಾದವು. 'ಉಳಿದವರು ಕಂಡಂತೆ' ಒಂದು ಪ್ರಯೋಗಾತ್ಮಕ ಚಿತ್ರವಾಗಿದ್ದು ಈ ಚಿತ್ರದಲ್ಲಿ ಒಟ್ಟು ಐದು ಕಥೆಗಳಿವೆಯಂತೆ. ಐದು ಕಥೆಗಳೂ ಒಂದಕ್ಕೊಂದು ಸಂಬಂಧ ಹೊಂದಿದ್ದು ಪ್ರೇಕ್ಷಕರನ್ನು ತುದಿಗಾಲ ಮೇಲೆ ನಿಲ್ಲಿಸುವಲ್ಲಿ ಯಶಸ್ವಿಯಾಗುತ್ತವಂತೆ. ಒಮ್ಮೆ ಚಿತ್ರ ನೋಡಿದ ಪ್ರೇಕ್ಷಕನಿಗೆ ಈ ಚಿತ್ರವನ್ನು ಮತ್ತೆ ಮತ್ತೆ ನೋಡಬೇಕು ಎನಿಸುತ್ತದೆಯಂತೆ. ಪ್ರತಿಬಾರಿ ಈ ಚಿತ್ರವನ್ನು ನೋಡಿದಾಗಲೆಲ್ಲ ಬೇರೆ ಬೇರೆ ಬಗೆಯಲ್ಲಿ ಚಿತ್ರವು ಪ್ರೇಕ್ಷಕನಿಗೆ ಅರ್ಥವಾಗುತ್ತದಂತೆ.

ಚಿತ್ರ ನೋಡಿದ ಮೇಲೆ ಪ್ರೇಕ್ಷಕ ಉತ್ತರ ಕೊಡುತ್ತಾನಂತೆ ಎನ್ನೋಣವೆ?



ಮತ್ತೊಂದು ರೀಮೇಕ್ ಚಿತ್ರ



ಅಷ್ಟೇನೂ ಸಕ್ಸಸ್ ಕಾಣದ ತಮ್ಮ ಇತ್ತೀಚಿನ ಚಿತ್ರ 'ಅಂಜದ ಗಂಡು' ನಂತರ ನಿರ್ದೇಶಕ ಪ್ರದೀಪ್ ರಾಜ್ ಹೊಸದೊಂದು ಚಿತ್ರಕ್ಕೆ ಕೈಹಾಕಿದ್ದಾರೆ. ತಮಿಳುನಾಡಿನಲ್ಲಿ ಸು... ಮಾಡಿದ್ದ 'ಚೆನ್ನೈ 600028' ಎಂಬ ಚಿತ್ರವ... ಕನ್ನಡಕ್ಕೆ ರಿಮೇಕ್ ಮಾಡಲು ತೀಮಾ... ನಿಸಿರುವ ಪ್ರದೀಪ್ ರಾಜ್ ಈ ಚಿತ್ರ... ಬಗ್ಗೆ ತೀರ ಭರವಸೆ ಹೊಂದಿದ್ದಾರಂ... ಇನ್ನಷ್ಟೇ ಹೆಸರಿಡಬೇಕಿರುವ ... ಚಿತ್ರದಲ್ಲಿ ರಾಜೀವ್, ಜೈ ಕಾರ್ತಿಕ... ಧ್ರುವ ನಟಿಸಲಿದ್ದು ಸದ್ಯದಲ್ಲ... ಚಿತ್ರೀಕರಣ ಆರಂಭವ... ಗಲಿದೆಯಂತೆ. ಇನ್ನು ನಾಯ... ಯರಾಗಿ ಸಂಜನಾ ಹಾಗೂ ಶಿವಾ... ನಟಿಸಲಿದ್ದು ಸಾಧು ಕೋಕಿಲ ಮ... ಚಿಕ್ಕಣ್ಣ ಕೂಡ ಪ್ರಮುಖ ಪಾತ್ರಗಳ... ಕಾಣಿಸಿಕೊಳ್ಳಲಿದ್ದಾರಂತೆ.

ಚಂದ್ರು ಈಗ ಭೋಜನಪ್ರಿಯ

ತಮ್ಮ 'ಬೊಂಬಾಟ್ ಭೋಜನ' ಮೂಲ... ಕಿರುತೆರೆ ಇತಿಹಾಸದಲ್ಲೇ ಹೊಸ ಬಗೆಯ ವಿನೂತ... ಅಡುಗೆ ಕಾರ್ಯಕ್ರಮ ಮಾಡಿದ ಸಿಹಿಕಹಿ ಚಂದ... ಈಗ ಅಂಥದೇ ಮತ್ತೊಂದು ಅಡುಗೆ ಕಾರ್ಯಕ್ರಮವ... ಶುರು ಮಾಡಲಿದ್ದಾರೆ. 'ಭೋಜನ ಪ್ರಿಯ' ಎಂಬ ಕ್ಯಾ... ಟೈಟಲ್ ಹೊಂದಿರುವ ಈ ಕಾರ್ಯಕ್ರಮ ಕೂಡ 'ಈ ಟಿವಿ... ಕನ್ನಡದಲ್ಲಿ ಪ್ರಸಾರವಾಗಲಿದೆಯಂತೆ. ಚಂದ್ರು ಹೇಳಿಕೊಳ್ಳು...



ಪ್ರಕಾರ, ಅವರ ಈ ಕಾರ್ಯಕ್ರಮಕ್ಕಾಗಿ ಕರ್ನಾಟಕ ರಾಜ್ಯಾದ್ಯಂ... ಸುತ್ತಿ ಆಯಾಯ ಪ್ರದೇಶಗಳ ವಿಶೇಷ ಭಕ್ಷ್ಯಗಳನ್ನು ತಯಾರಿಸುವುದ... ಬಗ್ಗೆ ತಮ್ಮ 'ಭೋಜನಪ್ರಿಯ' ಕಾರ್ಯಕ್ರಮದಲ್ಲಿ ಮಾಹಿ... ಕೊಡುತ್ತಾರಂತೆ. ಈ ವಿಶಿಷ್ಟ ಕಾರ್ಯಕ್ರಮದಲ್ಲಿ ಸಿಹಿಕಹಿ ಚಂದ... ಅವರ ಜೊತೆಗೆ ಪಾಯಲ್ ಎಂಬುವವರೂ ಭಾಗಿಯಾಗಲಿದ್ದಾರಂ... ಅಂದಹಾಗೆ ಈ ಪಾಯಲ್ ಇದೇ ಚಂದ್ರು ಅವರ 'ತಕಧಿಮಿಥ'... ಡಾನ್ಸಿಂಗ್ ಸ್ಟಾರ್. ತಮ್ಮ ಸಿನಿಮಾ, ಧಾರಾವಾಹಿಗಳ ಆಚೆಗೂ ... ಬಗೆಯ ವಿಶಿಷ್ಟ ಕಾರ್ಯಕ್ರಮಗಳನ್ನು ನೀಡುತ್ತಾ ಬಂದಿರುವ ಸಿಹಿಕ... ಚಂದ್ರು ಅವರ ಟೇಸ್ಟ್ ಮೆಚ್ಚುವಂಥದ್ದೇ ಅಲ್ವಾ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com